**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ**

# ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ

# 2025-26

# ದ್ವಿತೀಯ ಭಾಷೆ ಕನ್ನಡ

# 10 ನೇ ತರಗತಿ

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ 3ನೇ ಹಂತ, ಬೆಂಗಳೂರು-560085**

| **ಪರಿಕಲ್ಪನೆ ಮತ್ತು ಮಾರ್ಗದರ್ಶನ** | |
|---|---|
| **ಶ್ರೀಮತಿ ರಶ್ಮಿ ಮಹೇಶ್ ವಿ. ಭಾ.ಆ.ಸೇ**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | |
| **ಡಾ.ತ್ರಿಲೋಕ್ ಚಂದ್ರ ಕೆ.ವಿ. ಭಾ.ಆ.ಸೇ**<br>ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ,<br>ಬೆಂಗಳೂರು | **ಶ್ರೀ ಗೋಪಾಲಕೃಷ್ಣ ಹೆಚ್.ಎನ್**<br>ನಿರ್ದೇಶಕರು,<br>DSERT ಬೆಂಗಳೂರು |
| **ಡಯಟ್ ಸಹಕಾರ** | |
| **ಪ್ರಾಂಶುಪಾಲರು**<br>ಶ್ರೀ ಹನುಮಂತರಾಯ ಡಿ<br>ಪ್ರಾಂಶುಪಾಲರು, ಡಯಟ್, ಬೆಂಗಳೂರು<br>ಗ್ರಾಮಾಂತರ | **ಮೆಂಟರ್**<br>ಶ್ರೀಮತಿ ವಿನುತ ಹೆಚ್ ಎನ್<br>ಉಪನ್ಯಾಸಕರು, ಡಯಟ್, ಬೆಂಗಳೂರು<br>ಗ್ರಾಮಾಂತರ |
| **ಸಂಯೋಜನೆ** | |
| **ಶ್ರೀಮತಿ ರಾಧ ಪಿ**<br>ಹಿರಿಯ ಸಹಾಯಕ ನಿರ್ದೇಶಕರು,<br>DSERT, ಬೆಂಗಳೂರು | |
| **ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ರಚನಾ ಸಂಪನ್ಮೂಲ ತಂಡ** | |
| **ಶ್ರೀಮತಿ ಚಂದ್ರಕಲಾ ಕೆ ಎಲ್**<br>ಹಿರಿಯ ಉಪನ್ಯಾಸಕರು<br>**ಶ್ರೀಮತಿ ಗೀತ ಟಿ** ಉಪನ್ಯಾಸಕರು<br>**ಶ್ರೀಮತಿ ಪದ್ಮಮ್ಮ ಬಿ ಜಿ** ಉಪನ್ಯಾಸಕರು | **ಶ್ರೀಮತಿ ಶೈಲ ಟಿ ಡಿ** ಉಪನ್ಯಾಸಕರು<br>**ಶ್ರೀ ರವಿ ಪ್ರಕಾಶ್** ತಂತ್ರಜ್ಞರು |
| **ಮಾರ್ಗದರ್ಶಕರು ಹಾಗೂ ಪರಿಶೀಲಕರು**<br>**ಶ್ರೀ ನಾಗರಾಜಾಚಾರ್** ನಿವೃತ್ತ ಕನ್ನಡ ಶಿಕ್ಷಕರು, ವಿಶ್ವಕರ್ಮ ನಿಲಯ, ಬೆಂಗಳೂರು – 57<br>**ಶ್ರೀ ನಾಗರಾಜ ವಿ ಕೆಂಪಸಂದ್ರ** ಸಹ ಶಿಕ್ಷಕರು, ಮರಿಯಂ ನಿಲಯ ಪ್ರೌಢಶಾಲೆ, ಬೆಂಗಳೂರು – 43<br>**ಶ್ರೀ ಮುನಿರಾಜು ಎಂ** ಸಹ ಶಿಕ್ಷಕರು, ಲೌರಿ ಮೆಮೋರಿಯಲ್ ಪ್ರೌಢಶಾಲೆ, ದೂರವಾಣಿ ನಗರ, ಬೆಂಗಳೂರು<br>**ಶ್ರೀ ಶಿವಾನಂದ ಬೈಯಾಪೂರ್** ಸಹ ಶಿಕ್ಷಕರು, ಸೈಂಟ್ ಕ್ಲಾರೆಟ್ ಪ್ರೌಢಶಾಲೆ, ಜಾಲಹಳ್ಳಿ, ಬೆಂಗಳೂರು | |

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬೆಂಗಳೂರು ಗ್ರಾಮಾಂತರ ಜಿಲ್ಲೆ**

**10ನೇ ತರಗತಿಯ ದ್ವಿತೀಯ ಭಾಷೆ**

| ಕ್ರ ಸಂ | ಗದ್ಯಭಾಗ | ಕಲಿಕಾಫಲಗಳು | ಪುಟ ಸಂಖ್ಯೆ |
|---|---|---|---|
| 1. | ಒಣ ಮರದ ಗಿಳಿ | 1. ವಿದ್ಯಾರ್ಥಿಗಳಲ್ಲಿ ಉಪಕಾರ, ಸ್ಮರಣೆ ,ತಾಳ್ಮೆ ,ಪರಸ್ಪರ ಸಹಕಾರ, ಮನೋಭಾವ, ಕೃತಜ್ಞತಾ ಭಾವ, ತತ್ವನಿಷ್ಟೆ ಮುಂತಾದಮೌಲ್ಯಗಳನ್ನು ಬೆಳೆಸಿಕೊಳ್ಳುವುದು.<br>2. ವರ್ಣಮಾಲೆಯ ವಿಧಗಳ ಪರಿಚಯ, ಗುಣಿತಾಕ್ಷರಗಳ ರಚನಾದ,ಸಂಯುಕ್ತಾಕ್ಷುರಗಳ ರಚನಾ ವಿಧಾನಗಳನ್ನು ಅರ್ಥೈಸಿಕೊಳ್ಳುವುರು.<br>3. ಕನ್ನಡ ಸಂಧಿಗಳ ಪರಿಚಯ ಹಾಗೂ ಪದಗಳನ್ನು ಬಿಡಿಸಿ,ಸಂಧಿಯನ್ನುಹೆಸರಿಸುವುದನ್ನುಅರ್ಥೈಸಿಕೊಳ್ಳುವರು.<br>4. ಪ್ರಬಂಧ ರಚನಾ ಹಂತಗಳನ್ನು ಪರಿಚಯಿಸಿಕೊಳ್ಳುವರು. | 9 - 14 |
| 2 | ಅಸಿ-ಮಸಿ-ಕೃಷಿ | 1. ದೇಶದ ಅಭಿವೃದ್ಧಿ ಮತ್ತುಸಂರ್ರಕ್ಷಣೆಯಲ್ಲಿ ಸೈನಿಕರ, ಸಾಹಿತಿಗಳ ಮತ್ತು ಕೃಷಿಕರ ಪಾತ್ರದ ಮಹತ್ವವನ್ನು ಅರಿಯುವರು.<br>2. ಸಂಸ್ಕೃತ ಸಂಧಿಗಳಲ್ಲಿ ಸ್ವರ ಸಂಧಿ ಮತ್ತು ವ್ಯಂಜನ ಸಂಧಿಗಳ ಅರ್ಥ ವ್ಯತ್ಯಾಸ ಮತ್ತು ಪದ ಬಿಡಿಸಿ ಸಂಧಿ ಗುರುತಿಸುವುದನ್ನು ಅರ್ಥೈಸಿಕೊಳ್ಳುವರು.<br>3. 3. ಗಾದೆಗಳ ಮಹತ್ವ ಮತ್ತು ವಿಸ್ತರಿಸಿ ಬರೆಯುವುದನ್ನು ಅರಿಯುವರು. | 15 - 19 |
| 3 | ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ | 1 ಉನ್ನತವಾದ ಗುರಿಯನ್ನು ಸಾಧಿಸಲು ಯಾವುದೇ ದೈಹಿಕ ನ್ಯೂನ್ಯತೆಗಳು ಅಡ್ಡಿಯಾಗಲಾರವು ಎಂಬ ಅಂಶವನ್ನು ಗ್ರಹಿ ವರು. | 20 - 24 |

| | | | |
|---|---|---|---|
| | | 2 ಕನ್ನಡ ಭಾಷೆಯ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ವ್ಯಕ್ತಿ ಚಿತ್ರಣ ಸಾಹಿತ್ಯ ಪ್ರಕಾರವನ್ನು ಅರ್ಥಮಾಡಿಕೊಂಡು ಪ್ರಶಂಸಿಸುತ್ತಾರೆ.<br>3 ನಾಮಪದದ ವಿಧಗಳನ್ನು ಅರಿಯುವರು. | |
| 4 | ಹಕ್ಕಿಗೂಡುಗಳ ನಿಗೂಢ ಜಗತ್ತು | 1. ಕನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರವಾದ ಪರಿಸರ ಅಧ್ಯಯನ ಮತ್ತು ಸಾಹಿತ್ಯದ ವಿಶೇಷತೆಯನ್ನು ಅರಿಯುವರು.<br>2. ಪರಿಸರದಲ್ಲಿನ ನಿಗೂಢ ಸಂಗತಿಗಳಲ್ಲಿ ಪಕ್ಷಿಗಳ ಜೀವನ ಕ್ರಮ, ಅಸಾದಾರಣ ಬುದ್ಧಿವಂತಿಕೆ, ಸೌಂದರ್ಯ ಪ್ರಜ್ಞೆ ಮತ್ತು ಶುಚಿತ್ವವನ್ನು ಅರಿಯುವ ಮೂಲಕ ಸಮಾಜಕ್ಕೆ ಅಗತ್ಯವಿರುವ ಬದುಕಿನ ಮೌಲ್ಯಗಳನ್ನು ಗ್ರಹಿಸುವರು.<br>3. ಕಾಲಗಳು ,ವಿಭಕ್ತಿ ಮತ್ತು ಪ್ರತ್ಯಯಗಳ ಪ್ರಕಾರಗಳನ್ನು ಅರಿಯುವರು.<br>4. ಪತ್ರ ರಚನಾ ವಿಧಾನವನ್ನು ಅರಿಯುವರು. | 25 - 29 |
| 5 | ಕಾಫೀ-ಕಪ್ಪು | 1. ಗುರು-ಶಿಷ್ಯರ ಪವಿತ್ರ ಸಂಬಂಧ ಮತ್ತು ಶ್ರೇಷ್ಠ ಗುರುವಿನ ಆದರ್ಶಗಳನ್ನು ಅಳವಡಿಸಿಕೊಳ್ಳುವರು.<br>2. ಸಮಾಸ ಎಂದರೇನು? ಸಮಾಸದ ವಿಧಗಳು ಮತ್ತು ಪತ್ರರಚನಾ ಕ್ರಮಗಳನ್ನು ಅರಿಯುವರು.<br>3. ಬಂದಂತೆ ಬದುಕನ್ನು ಸ್ವೀಕರಿಸಿ ನೆಮ್ಮದಿಯ ಜೀವನ ಅಸ್ವಾದಿಸುವ ಕಲೆಯನ್ನು ಅನುಭವಿಸುವರು. | 30 - 35 |
| 6 | ಗಂಗೆಯಲ್ಲಿ ದೀಪಮಾಲೆ | 1. ಪ್ರವಾಸ ಸಾಹಿತ್ಯದ ಮಹತ್ವವನ್ನು ಪ್ರಶಂಸಿಸುವರು.<br>2. ಹರಿದ್ವಾರ ತೀರ್ಥಕ್ಷೇತ್ರದ ಮಹತ್ವ ಹಾಗೂ ಪ್ರಾಚೀನ ಮಾನವನು ನಿಸರ್ಗದೊಂದಿಗೆ ಸ್ಥಾಪಿಸಿಕೊಂಡ ಸಹಜ ಸಂಬಂಧದ ಬಗ್ಗೆ ಅರಿಯುವರು.<br>3. ತತ್ಸಮ-ತದ್ಭವ, ಗಳ ಅರ್ಥ ವ್ಯತ್ಯಾಸ , ಅವ್ಯಯದ ವಿಧಗಳು, ದ್ವಿರುಕ್ತಿ, ಜೋಡುನುಡಿ,ನುಡಿಗಟ್ಟುಗಳ ವ್ಯತ್ಯಾಸ ಗ್ರಹಿಸುವರು.<br>4.ಪ್ರವಾಸದ ಅನುಭವಗಳನ್ನು ಕುರಿತು ಪ್ರಬಂಧ ರಚನಾ ಸಾಮರ್ಥ್ಯ ಪಡೆಯುವರು. | 36 - 40 |

| | | | |
|---|---|---|---|
| 7 | ನನ್ನ ಗೋಪಾಲ | 1. ಹೊಸಗನ್ನಡ ಸಾಹಿತ್ಯ ಪ್ರಕಾರದಲ್ಲಿನ ಏಕಾಂಕ ನಾಟಕ ಪ್ರಕಾರದ ವೈಶಿಷ್ಟತೆಯ ಬಗ್ಗೆ ಅರಿಯುವರು.<br>2. ಜೀವನ ನಿರ್ವಹಣೆಯ ಸಮಸ್ಯೆಯ ನಡುವೆಯೂ ಹೆತ್ತವಳ ಶೈಕ್ಷಣಿಕ ಕಾಳಜಿ, ನಿಷ್ಕಲ್ಮಶ ಭಕ್ತಿ, ಪ್ರಕೃತಿಯ ಆರಾಧನೆಯ ಚಿತ್ರಣವನ್ನು ಪ್ರಶಂಸಿಸುವರು<br>3. ಕ್ರಿಯಾಪದ ಹಾಗೂ ಅದರ ವಿಧಗಳನ್ನು ಅರಿಯುವರು. | 41 - 44 |
| 8 | ಸೌಜನ್ಯ | 1. ಉತ್ತಮ ಮಾನವೀಯ ಮೌಲ್ಯಗಳಲ್ಲಿ ಒಂದಾದ ಸೌಜನ್ಯದ ಗುಣವನ್ನು ವ್ಯಕ್ತಿಗತವಾಗಿ ರೂಡಿಸಿಕೊಳ್ಳುವಂತೆ ಪ್ರೇರೇಪಿ ಸುವುದು /ಪ್ರೋತ್ಸಾಯಿಸುವುದು.<br>2. ಅನ್ಯ ದೇಶೀಯ ಪದಗಳನ್ನು ಪರಿಚಯಿಸಿ ಗುರುತಿಸುವರು. | 45 - 48 |
| | | **ಪದ್ಯಭಾಗ** | |
| 1 | ಬೋಧಿವೃಕ್ಷದ ಹಾಡು | 1. ಬುದ್ಧನು ಮಹಾಜ್ಞಾನಿಯಾಗಿ ಜೀವನ ಪ್ರೀತಿಯತ್ತಸಾಗಿದ ರೀತಿಯನ್ನು ಗ್ರಹಿಸುವುದರ ಜೊತೆಗೆ ಜೀವ ಪ್ರೀತಿಯ ಎದುರು ಎಲ್ಲವೂ ನಶ್ವರ ಎಂಬುದನ್ನು ಅರಿಯುವರು.<br>2. ಬದುಕಿನಲ್ಲಿ ಶಾಂತಿಯ ಮಹತ್ವ ಮತ್ತು ಪ್ರೀತಿ ಕಂಡುಕೊಳ್ಳುವ ಬಗೆ ತಿಳಿಯುವರು.<br>3. ನಾನಾರ್ಥಗಳನ್ನು ಬರೆಯುವುದನ್ನು ಗ್ರಹಿಸುವರು. | 49 - 53 |
| 2 | ಸವಿಚೈತ್ರ | 1. ಭಾರತೀಯ ಕಾಲಮಾನದಲ್ಲಿ ವರ್ಷಾರಂಭದಲ್ಲಿ ಆಗಮಿಸುವ ವಸಂತ ಋತುವಿನ ಸಮೃದ್ಧತೆ ಮತ್ತು ಸೊಬಗನ್ನು ಅಸ್ವಾದಿಸುವರು.<br>2. ಯುಗಾದಿ ಹಬ್ಬದ ಆಚರಣೆಯ ಸಂಕೇತವಾದ ಬೇವು-<br>3. ಬೆಲ್ಲ ಹಂಚುವ ಮೂಲಕ ಬದುಕಿನ ಕಷ್ಟ-ಸುಖಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಸಂದೇಶವನ್ನು ಅರಿಯುವರು. | 54 - 57 |
| 3 | ಸದ್ದು ಮಾಡದಿರು | 1. ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯಲ್ಲಿನ ಸದ್ದು ಗದ್ದಲವಿಲ್ಲದೆ ನಡೆಯುತ್ತಿರುವ ಮಹತ್ತರ | 58 - 61 |

| | | | |
|---|---|---|---|
| | | ಕಾರ್ಯಚಟುವಟಿಕೆಗಳ ವೈಶಿಷ್ಟ್ಯತಿಯನ್ನು ಅರಿಯುವರು.<br>2. ಮಾನವ ಪ್ರಕೃತಿಯೊಡನೆ ಸಮ್ಮಿಳಿತವಾಗಿ ಅಹಂಕಾರ ತೊರೆದು ಶಾಂತಿ, ಸಹನೆ, ಪ್ರೀತಿಯಿಂದ ಕರ್ತವ್ಯವನ್ನು ಮೌನವಾಗಿ ಮುಗಿಸುವುದೇ ಜೀವನದ ಸಾರ್ಥಕತೆ ಎಂಬ ಮಹತ್ತರ ಅಂಶವನ್ನು ಅರಿಯುವರು | |
| 4 | ಗುರಿ | 1. ಮನುಷ್ಯ ಜೀವನದಲ್ಲಿ ಗುರಿಯ ಮಹತ್ವ ಹಾಗೂ ನಿಶ್ಚಿತ ಗುರಿ ಸಾಧನೆಗೆ ಮಾಡುವ ಪ್ರಯತ್ನಗಳನ್ನು ಅರಿಯುವರು.<br>2. ಗುರು ಸಾಧನೆಯ ನಂತರ ಸಮಾಜ ಉಪಯೋಗಿ ಬದುಕುಕನ್ನು ರೂಢಿಸಿಕೊಂಡು ಸಾರ್ಥಕ ಬದುಕಿನ ಕಲೆಯನ್ನು ತಿಳಿಯುವರು. | 62 - 65 |
| 5 | ಮೂಡಲ್ ಕುಣಿಗಲ್ ಕೆರೆ | 1. ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನು ಆಸ್ವಾದಿಸುವರು.<br>2. ಜನಪದ ಜೀವನಾಡಿಯಾದ ಕೆರೆಯ ಸಮೃದ್ವತೆಯನ್ನು ವರ್ಣನಾ ವೈಶಿಷ್ಟ್ಯತೆಯನ್ನು ಪ್ರಶಂಸಿಸುವರು .<br>3. ಗ್ರಾಂಥಿಕ ರೂಪಗಳನ್ನು ಅರಿಯುವರು.<br>4. ಜೀವ ಸಂಕುಲಕ್ಕೆ ಆಶ್ರಯವಾಗಿರುವ ಕೆರೆಗಳ ಮಹತ್ವ ಹಾಗೂ ಅವುಗಳ ಉಳುವಿನ ಬಗ್ಗೆ ತಿಳಿಯುವರು. | 66 - 69 |
| 6 | ವಚನಗಳು | 1. 12ನೇ ಶತಮಾನದಲ್ಲಿ ನಡೆದ ವಚನ ಚಳುವಳಿ ಸಾಹಿತ್ಯದ ವೈಶಿಷ್ಟ್ಯತೆಯನ್ನು ಗ್ರಹಿಸುವರು.<br>2. ಶರಣರ ವಚನಗಳಲ್ಲಿ ಅಡಗಿರುವ ಜೀವನ ಮೌಲ್ಯಗಳನ್ನು ಅರಿಯುವರು<br>3. ಲೋಕದಲ್ಲಿ ಕೇಳಿಬರುತ್ತಿರುವ ಸ್ತುತಿ ನಿಂದನೆಗಳಿಗೆ ಹೆದರಬಾರದು. ದೇಹವೇ ದೇಗುಲ ಮತ್ತು ಬಾಹ್ಯ ಹಾಗೂ ಆಂತರಿಕ ನಡೆಗು ಸಾಮ್ಯತೆ ಇರಬೇಕು ಎಂಬ ಅಂಶಗಳನ್ನು ಅರಿಯುವರು. | 70 - 73 |

| | | | |
|---|---|---|---|
| 7 | ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯ ಲಿ | 1. ಉತ್ತರ ಪೌರುಷ ಒಂದು ಸ್ವಾರಸ್ಯಕರ ಪ್ರಸಂಗವನ್ನು ಅರಿಯುವರು.<br>2. ನಡುಗನ್ನಡ ಸಾಹಿತ್ಯದ ಸ್ವರೂಪ ಮತ್ತು ಗಮಕ ಶೈಲಿ , ಭಾಮಿನಿ ಷಷ್ಪದಿ ಪರಿಚಯ,ಛಂದಸ್ಸು, ಅಲಂಕಾರಗಳ ಪರಿಚಯ.<br>3. ಹಳಗನ್ನಡ ಪದ್ಯವನ್ನು ಬಿಡಿಸಿ ಓದುವ ಕ್ರಮವನ್ನು ಗ್ರಹಿಸುವರು. | 74 - 78 |
| | | **ಪೂರಕ ಓದು** | |
| 1 | ಕಳ್ಳರ ಗುರು | 1. ವೈದ್ಯನ ನಿಸ್ವಾರ್ಥ ಸೇವೆಯಿಂದ ಕಳ್ಳನ ಮನಃ ಪರಿವರ್ತನೆ ಆದ ಸಂದರ್ಭವನ್ನು ತಿಳಿಯುವರು.<br>2. ಕಠಿಣ ಸಂದರ್ಭಗಳಲ್ಲು ವೃತ್ತಿ ಧರ್ಮವನ್ನು ಪಾಲಿಸಿದ ವೈದ್ಯನ ಸೇವಾ ಮನೋಭಾವವನ್ನು ಅರಿಯುವರು. | 79 |
| 2 | ಹೊಂಗೆ ಬೇವುಗಳ ಹಾಡು. | 1. ಶತಮಾನಗಳಿಂದ ಪರಿಸರದೊಡನೆ ಮನುಷ್ಯನ ಒಡನಾಟ ಮತ್ತು ಅವಿನಾಭಾವಸಂಬಂಧವನ್ನು ಗ್ರಹಿಸುವರು.<br>2. ಪರಿಸರದಲ್ಲಿನ ಪ್ರತಿಯೊಂದು ಮರಗಿಡಗಳು ಮನುಕುಲದ ಭವ್ಯಬದುಕನ್ನು ಅರಳಿಸಿ ,ಮನುಕುಲಕ್ಕೆ ಜೀವನಾಡಿಗಳಾಗಿವೆ ಎಂಬುದನ್ನು ಗ್ರಹಿಸುವರು. | 80 |
| 3 | ಕನ್ನಡ- ನಾಡು - ನುಡಿ-ಜನ | 1. ಕವಿ ಅಭಿವ್ಯಕ್ತಿಯಲ್ಲಿ ಕನ್ನಡ ನಾಡಿನ ವೈಶಿಷ್ಟ್ಯತೆ , ನುಡಿಯ ಬಗ್ಗೆಅಭಿಮಾನ ಬೆಳೆಸಿಕೊಳ್ಳುವರು.<br>2. ಕನ್ನಡ ನಾಡಿನ ಕವಿಗಳ ಕಾವ್ಯಪರಿಣತಿಯನ್ನು ಪ್ರಶಂಸಿಸುವರು. | 81 |
| 4 | ಪಂಪಾ ತೀರದ ಪುಷ್ಪಗಳು | 1. ಮಾನವೀಯ ಸಂಸ್ಕೃತಿಯಲ್ಲಿ ಹೂಗಳ ಹುಟ್ಟು ಮತ್ತು ಪ್ರಾಮುಖ್ಯತೆ ಹಾಗೂ ಪಂಪಾತೀರದ ಪುಷ್ಪಗಳ ಬಗ್ಗೆ ಅರಿಯುವರು. | 82 |

| | | | |
|---|---|---|---|
| | | 2. ಆದಿಕವಿ ವಾಲ್ಮೀಕಿ ಬಣ್ಣಿಸಿರುವ ಎಂದಿಗೂ ಬಾಡದ,ಸಾಯದ ಹೂಗಳ ಬಗೆ ಅರಿಯುವರು. | |

**10ನೇ ತರಗತಿ ದ್ವಿತೀಯ ಭಾಷೆ- ಕನ್ನಡ**

**ವಿಷಯಾನು ಕ್ರಮಣಿಕೆ**

| ಕ್ರ.ಸಂ | ವಿಷಯ | ಅಂಕಗಳು | | | | | | ಒಟ್ಟು |
|---|---|---|---|---|---|---|---|---|
| | | ವ.ನಿ | ಕಿ.ಉ.1 | ಕಿ.ಉ.2 | ದೀ. ಉ.1 | ದೀ. ಉ.2 | ದೀ. ಉ.3 | |
| 1 | **ಒಣ ಮರದ ಗಿಳಿ** | 20 | 09 | 08 | 18 | 16 | - | 70 |
| 2 | **ಅಸಿ-ಮಸಿ-ಕೃಷಿ** | 10 | 08 | 08 | 27 | 10 | - | 79 |
| 3 | **ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ** | 15 | 07 | 08 | 21 | 20 | - | 71 |
| 4 | **ಹಕ್ಕಿಗಳ ನಿಗೂಢ ಜಗತ್ತು** | 12 | 06 | 12 | 21 | 16 | 10 | 77 |
| 5 | **ಕಾಫೀ-ಕಫ್** | 10 | 08 | 08 | 27 | 20 | - | 73 |
| 6 | **ಗಂಗೆಯಲ್ಲಿ ದೀಪಮಾಲೆ** | 10 | 08 | 10 | 18 | 16 | 10 | 72 |
| 7 | **ನನ್ನ ಗೋಪಾಲ** | 10 | 08 | 10 | 24 | 16 | - | 68 |
| 8 | **ಸೌಜನ್ಯ** | 05 | 09 | 08 | 08 | 16 | 10 | 66 |
| 1 | **ಬೋಧಿವೃಕ್ಷದ ಹಾಡು** | 10 | 07 | 08 | 18 | 20 | - | 63 |
| 2 | **ಸವಿ ಚೈತ್ರ** | 07 | 07 | 08 | 24 | 12 | - | 58 |
| 3 | **ಸದ್ದು ಮಾಡದಿರು** | 06 | 06 | 06 | 21 | 08 | - | 47 |
| 4 | **ಗುರಿ** | 05 | 06 | 08 | 27 | 16 | - | 62 |
| 5 | **ಮೂಡಲ್ ಕುಣಿಗಲ್ ಕೆರೆ** | 06 | 08 | 08 | 15 | 16 | - | 53 |
| 6 | **ವಚನಗಳು** | 05 | 10 | 06 | 19 | 12 | - | 52 |

| | | | | | | | | |
|---|---|---|---|---|---|---|---|---|
| 7 | **ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ.** | 10 | 05 | 08 | 27 | 12 | - | 62 |
| 1 | **ಕಳ್ಳರ ಗುರು** | - | - | 16 | - | - | - | 16 |
| 2 | **ಹೊಂಗೆ ಬೇವುಗಳ ಹಾಡು** | - | - | 10 | - | - | - | 10 |
| 3 | **ಕನ್ನಡ -ನಾಡು- ನುಡಿ -ಜನ** | - | - | 06 | - | - | - | 06 |
| 4 | **ಪಂಪಾ ತೀರದ ಪುಷ್ಪಗಳು** | - | - | 08 | - | - | - | 08 |

**ಗದ್ಯಭಾಗ 1 ಒಣಮರದ ಗಿಳಿ**

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ:**

| **ಗದ್ಯ: ಒಣ ಮರದ ಗಿಳಿ** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** | **ಒಟ್ಟು** |
|---|---|---|---|---|---|
| ಪ್ರಶ್ನೆಗಳು | 27 | 06 | 09 | - | 42 |
| ಅಂಕಗಳು | 29 | 10 | 31 | - | 70 |

**ಪ್ರಶ್ನಾನುಸಾರ ಪ್ರಾ ಖ್ಯತೆ:**

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತು ನಿಷ್ಟ | 20 | 20 |
| 2 | ಕಿರು ಉತ್ತರ 1 (1 ಅಂಕದ ಪ್ರಶ್ನೆ) | 08 | 08 |
| 3 | ಕಿರು ಉತ್ತರ 2 (2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 (3 ಅಂಕದ ಪ್ರಶ್ನೆ) | 06 | 18 |

| | | | |
|---|---|---|---|
| 5 | ದೀರ್ಘ ಉತ್ತರ 2 (4 ಅಂಕದ ಪ್ರಶ್ನೆ) | 04 | 16 |
| 6 | ದೀರ್ಘ ಉತ್ತರ (5 ಅಂಕದ ಪ್ರಶ್ನೆ) | - | - |
| | **ಒಟ್ಟು** | **42** | **70** |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ. (ಸ್ಮರಣೆ- ಸುಲಭ)

ಎ) 13 ಬಿ) 34

ಸಿ) 09 ಡಿ) 25

**2.** ಕನ್ನಡ ವರ್ಣಮಾಲೆಯಲ್ಲಿರುವ ಮಹಾ ಪ್ರಾಣಾಕ್ಷರಗಳ ಸಂಖ್ಯೆ. (ಸ್ಮರಣೆ- ಸುಲಭ)

ಎ) 9 ಬಿ) 10

ಸಿ) 05 ಡಿ) 13

**3**. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ.

ಎ) 1 0 ಬಿ) 05 (ಸ್ಮರಣೆ- ಸುಲಭ)

ಸಿ 13 ಡಿ) 09 ಜೂನ್-2022

**4.** ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳು. (ಸ್ಮರಣೆ- ಸುಲಭ)

ಎ) ಕ,ಚ,ಟ, ಬಿ) ಖ,ಥ,ಠ

ಸಿ) ಙ, ಞ,ಣ, ಡಿ) ರ,ವ,ಶ

**5.** ಕನ್ನಡ ವರ್ಣಮಾಲೆಯಲ್ಲಿರುವ ಸಂಧ್ಯಾಕ್ಷರಗಳು. ( ಸ್ಮರಣೆ- ಸುಲಭ)

ಎ) ಅಂ, ಆಃ ಬಿ) ಐ, ಔ

ಸಿ) ಙ, ಞ ಡಿ) ಅ, ಇ

**6.** ಕನ್ನಡ ವರ್ಣಮಾಲೆಯಲ್ಲಿರುವ ಯೋಗವಾಹಗಳು. (ಸ್ಮರಣೆ- ಸುಲಭ)

ಎ) ಅಂ, ಅಃ ಬಿ) ಐ, ಔ

ಸಿ) ಆ, ಈ ಡಿ) ಉ, ಋ

**7.** ಅನುಸ್ವಾರ, ವಿಸರ್ಗಗಳನ್ನು ಹೀಗೆನ್ನುವರು. (ಸ್ಮರಣೆ- ಸುಲಭ)

ಎ) ಅನುನಾಸಿಕ ಬಿ) ವ್ಯಂಜನ

ಸಿ) ಯೋಗವಾಹಗಳು ಡಿ) ಸ್ವರ

**8.** ಬಾಣವನ್ನು ಪದವನ್ನು ಬಿಡಿಸಿ ಬರೆದಾಗ (ಸ್ಮರಣೆ- ಸುಲಭ)

ಎ) ಬಾಣ+ ಅನ್ನು ಬಿ) ಬಾಣ + ಯನ್ನು

ಸಿ) ಬಾಣ+ ವನ್ನು ಡಿ) ಬಾಣ+ನ್ನು

**9.** ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳನ್ನು ಹೀಗೆನ್ನುವರು. (ಸ್ಮರಣೆ- ಸುಲಭ)

ಎ) ಸಂಯುಕ್ತಾಕ್ಷರ ಬಿ) ಗುಣಿತಾಕ್ಷರ

ಸಿ) ಸ್ವರಾಕ್ಷರ ಡಿ) ಅನುನಾಸಿಕಾಕ್ಷರ

**10.** ವಿಜಾತಿ ಸಂಯುಕ್ತಾಕ್ಷರದ ಪದಕ್ಕೆ ಉದಾಹರಣೆ (ಸ್ಮರಣೆ- ಸುಲಭ)

ಎ) ಕನ್ನಡ ಬಿ) ಅಕ್ಷರ

ಸಿ) ಸದ್ದು ಡಿ) ಮಣ್ಣು

**11).** 'ಮಾ ಲ್ಲ' ಪದವು ಈ ಸಂಧಿಗೆ ಉದಾಹರಣೆ (ಸ್ಮರಣೆ- ಸುಲಭ)

ಎ) ಆಗಮಸಂಧಿ ಬಿ) ಆದೇಶ ಸಂಧಿ

ಸಿ) ಲೋಪಸಂಧಿ ಡಿ) ಗುಣಸಂಧಿ

**12**. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆ (ಸ್ಮರಣೆ- ಸುಲಭ)

ಎ) ಹೂ ಬುಟ್ಟಿ ಬಿ) ಗುರುವನ್ನು

ಸಿ) ಬೇರೊಬ್ಬ ಡಿ) ಗಣೇಶ

**13.** ‘ ರಾಯ‘ ಪದದ ತತ್ಸಮ ರೂಪ (ಸ್ಮರಣೆ- ಸುಲಭ)

ಎ) ರಾಜ ಬಿ) ದೊರೆ

ಸಿ) ಅರಸ ಡಿ) ನಾಯಕ

**14.** ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳ ಸಂಖ್ಯೆ (ಸ್ಮರಣೆ- ಸುಲಭ)

ಎ) 34 ಬಿ) 52

ಸಿ) 49 ಡಿ) 51

**15**. ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಹೀಗೆನ್ನುವರು.

(ಸ್ಮರಣೆ- ಸುಲಭ)

ಎ) ದೀರ್ಘಸ್ವರ ಬಿ) ಹ್ರಸ್ವಸ್ವರ

ಸಿ) ಅನುಸ್ವಾರ ಡಿ) ಪ್ಲುತಸ್ವರ

**16**. ಈ ಕೆಳಗಿನ ಪದಗಳಿಗೆ ರೂಢನಾಮಕ್ಕೆ ಸಂಬಂಧಿಸಿದ ಪದ. (ಸ್ಮರಣೆ- ಸುಲಭ)

ಎ) ಇಂದ್ರ ಬಿ) ಬೆಟ್ಟ

ಸಿ) ಜಿಂಕೆ ಡಿ) ಶಿಕ್ಷಕ

**17**.' ಗುರುವನ್ನು' ಪದವು ಈ ಸಂಧಿಗೆ ಉದಾಹಣೆ (ಸ್ಮರಣೆ- ಸುಲಭ)

ಎ) ಆಗಮಸಂಧಿ ಬಿ) ಆದೇಶ ಸಂಧಿ

ಸಿ) ಲೋಪಸಂಧಿ ಡಿ) ಸವರ್ಣದೀರ್ಘಸಂಧಿ.

**18**. ಸಜಾತಿ ಸಂಯುಕ್ತಾಕ್ಷರ ಪದಕ್ಕೆ ಉದಾಹರಣೆ ( ಸ್ಮರಣೆ- ಸುಲಭ)

ಎ) ಅಕ್ಷರ ಬಿ) ರಾಜ್ಯ

ಸಿ) ಕನ್ನಡ ಡಿ) ವಿದ್ಯೆ

**19**.' ನಂಜು' ಪದದ ಅರ್ಥ. (ಸ್ಮರಣೆ- ಸುಲಭ)

ಎ) ಆಸರೆ ಬಿ) ವಿಷ

ಸಿ) ಸಂಜೆ ಡಿ) ನಂಟು

**20.** ಕನ್ನಡ ವರ್ಣಮಾಲೆಯ ಹ್ರಸ್ವ ಅಕ್ಷರಗಳು ಇವು. (ಸ್ಮರಣೆ- ಸುಲಭ)

ಎ) ಆ,ಈ,ಊ ಬಿ) ಅ,ಎ,ಒ

ಸಿ) ಣ,ನ,ಮ ಡಿ) ಯ,ಶ,ಲ

**II ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

**21.** ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?

(ಸ್ಮರಣೆ- ಸುಲಭ) ಏಪ್ರಿಲ್-2024

**22.** ವಿಷದ ಬಾಣವು ಮರಕ್ಕೆ ಏಕೆ ತಗುಲಿತು?

(ಗ್ರಹಿಕೆ -ಸಾಧಾರಣ) ಆಗಸ್ಟ 2024, ಮೇ- 2025

**23.** ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು? (ಸ್ಮರಣೆ- ಸುಲಭ) ಏಪ್ರಿಲ್ 2023

**24**. ಇಂದ್ರನಿಗೆ ಗಿಳಿಯನ್ನು ಕಂಡು ಆಶ್ಚರ್ಯವಾದದ್ದು ಏಕೆ? (ಗ್ರಹಿಕೆ -ಸಾಧಾರಣ)

**25**. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು? (ಸ್ಮರಣೆ- ಸುಲಭ)

**26.** ಬೇಡನು ಯಾವ ಪ್ರಾಣಿಯ ಬೆನ್ನಟ್ಟಿದನು? (ಸ್ಮರಣೆ- ಸುಲಭ)

**27.** ಒಣಮರದ ಗಿಳಿ ಕಥೆಯಲ್ಲಿ ಬೇಡನು ವಾಸವಾಗಿದ್ದ ಊರು ಯಾವುದು?

(ಸ್ಮರಣೆ- ಸುಲಭ)

**28.** ಗಿಳಿಯ ಉಪಕಾರ ಸ್ಮರಣೆಯನ್ನು ಕಂಡು ಸಂತೋಷಪಟ್ಟವರು ಯಾರು?

(ಸ್ಮರಣೆ- ಸುಲಭ)

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**29** ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?

(ಗ್ರಹಿಕೆ -ಸಾಧಾರಣ) ಏಪ್ರಿಲ್ 2024

**30**. ಸಾಮಾನ್ಯವಾದ ಲೋಕ ವರ್ತನೆ ಯಾವುದು.? (ಗ್ರಹಿಕೆ -ಸಾಧಾರಣ)

**31.** ಗಿಳಿಯು ಇಂದ್ರನನ್ನು ಯಾವ ವರ ಕೇಳಿತು? (ಗ್ರಹಿಕೆ -ಸಾಧಾರಣ) ಆಗಸ್ಟ- 2024

**32 .** ಇಂದ್ರನು ತನಗಾದ ಸಂತೋಷವನ್ನು ಹೇಗೆ ಪ್ರಕಟಿಸಿದನು? (ಗ್ರಹಿಕೆ -ಸಾಧಾರಣ)

ಜೂನ್-2023

**IV. ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**33.** ಅ. ರಾ ಮಿತ್ರ, (ಸ್ಮರಣೆ- ಸಾಧಾರಣ) ಜೂನ್ 2024, ಆಗಸ್ಟ್- 2024

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರಯಿರಿ.**

**34.”** ಇಂಥ ಒಣಮರದಲ್ಲಿ ಏಕೆ ವಾಸ ಮಾಡುತ್ತಿದೀಯ?” ( ಅಭಿವ್ಯಕ್ತಿ- ಕರಿಣ)

**35**. “ಏನಾದರು ವರವನ್ನು ಕೇಳು ಕೊಡುತ್ತೇನೆ” (ಅಭಿವ್ಯಕ್ತಿ- ಕರಿಣ) ಏಪ್ರಿಲ್ -2023, ಮೇ 2025

**36.** “ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ.” (ಅಭಿವ್ಯಕ್ತಿ- ಕರಿಣ) ಏಪ್ರಿಲ್ 2025

**37**. “ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು”. (ಅಭಿವ್ಯಕ್ತಿ- ಕರಿಣ)

**38.** ”ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯಕೊಟ್ಟಿದೆ”.

(ಅಭಿವ್ಯಕ್ತಿ-ಕರಿಣ) ಜೂನ್-2023

**VI ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ**

**39**. ಗಿಳಿಯು ಪರಹಿತಾಕಾಂಕ್ಷಿ ಎನಿಸಿಕೊಂಡಿದ್ದು ಹೇಗೆ (ಅಭಿವ್ಯಕ್ತಿ- ಕರಿಣ) ಜುಲೈ-2025

**40**. ‘ಗಿಳಿಯ ವರ್ತನೆಯಿಂದ ಮಾನವನಿಗೆ ಆದರ್ಶಪ್ರಾಯವಾಗಿದೆ‘ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (ಅಭಿವ್ಯಕ್ತಿ- ಕರಿಣ) ಜುಲೈ-2025

**VII ಈ ಕೆಳಗಿನ ವಿಷಯಗಳಿಗೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ.**

**41**. ಕ್ರೀಡೆಗಳ ಮಹತ್ವ (ಅಭಿವ್ಯಕ್ತಿ- ಕರಿಣ) ಏಪ್ರಿಲ್-2023

**42** ರಾಷ್ಟ್ರೀಯ ಹಬ್ಬಗಳ ಮಹತ್ವ (ಅಭಿವ್ಯಕ್ತಿ- ಕರಿಣ) ಏಪ್ರಿಲ್-2022, ಏಪ್ರಿಲ್ -2024

## ಗದ್ಯಭಾಗ 2 ಅಸಿ-ಮಸಿ-ಕೃಷಿ

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| **ಗದ್ಯ: ಅಸಿ-ಮಸಿ-ಕೃಷಿ** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** | **ಒಟ್ಟು** |
|---|---|---|---|---|---|
| ಪ್ರಶ್ನೆಗಳು | 19 | 05 | 13 | - | 37 |
| ಅಂಕಗಳು | 21 | 12 | 46 | - | 79 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತು ನಿಷ್ಟ | 10 | 10 |
| 2 | ಕಿರು ಉತ್ತರ 1 (1 ಅಂಕದ ಪ್ರಶ್ನೆ) | 08 | 08 |
| 3 | ಕಿರು ಉತ್ತರ 2 (2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 (3 ಅಂಕದ ಪ್ರಶ್ನೆ) | 09 | 27 |
| 5 | ದೀರ್ಘ ಉತ್ತರ 2 (4 ಅಂಕದ ಪ್ರಶ್ನೆ) | 04 | 16 |
| 6 | ದೀರ್ಘ ಉತ್ತರ 3 (5 ಅಂಕದ ಪ್ರಶ್ನೆ) | 02 | 10 |
| | ಒಟ್ಟು | 37 | 79 |

**I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ‘ಅಸಿ‘ ಪದದ ಅರ್ಥ (ಗ್ರಹಿಕೆ -ಸಾಧಾರಣ)

ಎ) ಸಾಹಿತ್ಯ ಬಿ) ಯುದ್ಧ

ಸಿ) ವ್ಯವಸಾಯ ಡಿ) ಚಕ್ರ

**2**. ‘ಕಾರ್ಯ‘ ಪದದ ತದ್ಭವ ರೂಪ (ಸ್ಮರಣೆ- ಸಾಧಾರಣ)

ಎ) ಕಾಯ ಬಿ) ಕಜ್ಜ

ಸಿ) ಕಾರ ಡಿ) ಕಾವ

**3.** 'ಕ್ರಿಮಿಕೀಟ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ . ( ಸ್ಮರಣೆ-ಸುಲಭ)

ಎ) ದ್ವಿರುಕ್ತಿ ಬಿ) ಅನುಕರಣಾವ್ಯಯ

ಸಿ) ಜೋಡುನುಡಿ ಡಿ) ನುಡಿಗಟ್ಟು

**4**. 'ಯುದ್ಧ' ಪದದ ತದ್ಭವ ರೂಪ (ಸ್ಮರಣೆ- ಸಾಧಾರಣ)

ಎ) ಬುದ್ಧ ಬಿ) ಜುದ್ಧ

ಸಿ) ವೃದ್ಧ ಡಿ) ಯೋಧ

**5.** 'ಸರ್ವಾಧಿಕಾರಿ' ಪದವು ಈ ಸಂಧಿಗೆ ಉದಾಹರಣೆ . ( ಸ್ಮರಣೆ- ಸಾಧಾರಣ)

ಎ) ಗುಣಸಂಧಿ ಬಿ) ವೃದ್ಧಿಸಂಧಿ

ಸಿ) ಸವರ್ಣದೀರ್ಘಸಂಧಿ ಡಿ) ಯಣ್‌ಸಂಧಿ

**6.** ಅನುನಾಸಿಕ ಸಂಧಿಗೆ ಉದಾಹರಣೆ. (ಸ್ಮರಣೆ- ಸಾಧಾರಣ)

ಎ) ಚಿನ್ಮೂಲ ಬಿ) ಅಜಂತ

ಸಿ) ಏಕೈಕ ಡಿ) ಅತ್ಯುಕ್ತಿ.

**7.** ಇವುಗಳಲ್ಲಿ ಗುಣಸಂಧಿಗೆ ಉದಾಹರಣೆ. (ಸ್ಮರಣೆ- ಸಾಧಾರಣ)

ಎ) ಗಿರೀಂದ್ರ ಬಿ) ವೀರೇಶ

ಸಿ) ಏಕೈಕ ಡಿ) ಬೆನ್ನೆಲುಬು.

**8.** 'ರಾಟೆ' ಪದದ ಅರ್ಥ. ( ಗ್ರಹಿಕೆ- ಸಾಧಾರಣ)

ಎ) ರಾಡಿ ಬಿ) ಗಾಡಿ

ಸಿ) ಚಕ್ರ ಡಿ) ಪೇಟೆ

**9.** 'ಅತಿವೃಷ್ಟಿ' ಪದದ ವಿರುದ್ಧ ಪದ. (ಗ್ರಹಿಕೆ- ಸಾಧಾರಣ)

ಎ) ಅನಾವೃಷ್ಟಿ ಬಿ) ದುರಾವೃಷ್ಟಿ

ಸಿ) ಪರಾವೃಷ್ಟಿ ಡಿ) ದೈವಸೃಷ್ಟಿ

**10.** ಈ ಪದಗಳಲ್ಲಿ ವೃದ್ಧಿ ಸಂಧಿಗೆ ಉದಾಹರಣೆ. (ಸ್ಮರಣೆ- ಸಾಧಾರಣ)

ಎ) ದೇವಾಲಯ ಬಿ) ಮಹೋತ್ಸವ

ಸಿ) ಏಕೈಕ ಡಿ) ಅತ್ಯುಕ್ತಿ.

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:-**

**11.** ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?

(ಸ್ಮರಣೆ- ಸುಲಭ) ಜೂನ್-2024

**12.** ಅಸಿ-ಮಸಿ ಎಂದರೇನು? (ಸ್ಮರಣೆ- ಸುಲಭ) ಮಾಚ್ -2023, ಜುಲೈ-2025

**13**. ಈ ನಾಡಿನ ಬೆನ್ನೆಲುಬು ಯಾರು? (ಸ್ಮರಣೆ- ಸುಲಭ) ಮಾರ್ಚ್ -2023, ಏಪ್ರಿಲ್-2025

**14.** ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ? (ಸ್ಮರಣೆ- ಸುಲಭ)

**15**. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ?

(ಸ್ಮರಣೆ- ಸುಲಭ)

**16.** ಸರ್ವಜ್ಞ ಹೇಳಿರುವಂತೆ ಕೋಟಿ ವಿದ್ಯೆಗಳಿಗಿಂತ ಮಿಗಿಲಾದ ವಿದ್ಯೆ ಯಾವುದು?

(ಸ್ಮರಣೆ- ಸುಲಭ) ಏಪ್ರಿಲ್ -2024

**17**. ಅಸಿ ಮಸಿಗಿಂತ ಮಹತ್ವವಾದುದು ಯಾವುದು? (ಸ್ಮರಣೆ- ಸುಲಭ)

**18.** ಯಾವುದು ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೇಳುತ್ತಾರೆ? (ಸ್ಮರಣೆ- ಸುಲಭ) ಮೇ-2025

**III ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:-**

**19.** ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು?

(ಗ್ರಹಿಕೆ-ಸಾಧಾರಣ) ಏಪ್ರಿಲ್ -2025/ ಮೇ-2025

**20.** ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?

(ಗ್ರಹಿಕೆ-ಸಾಧಾರಣ) ಜೂನ್ -2024/ ಆಗಸ್ಟ -2024ಏಪ್ರಿಲ್ -2025

**21.** ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?

(ಗ್ರಹಿಕೆ-ಸಾಧಾರಣ)

**22**. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು? (ಗ್ರಹಿಕೆ-ಸಾಧಾರಣ)

**IV. ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**23**. ಡಾ|| ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ. (ಸ್ಮರಣೆ- ಸಾಧಾರಣ) ಆಗಸ್ಟ -2024

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:**

**24.** “ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು”.

(ಅಭಿವ್ಯಕ್ತಿ-ಸಾಧಾರಣ) ಜುಲೈ2025

**25.** "ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ."

(ಅಭಿವ್ಯಕ್ತಿ-ಸಾಧಾರಣ)

**26.** "ಅವರು ಯಾರಿಗೂ ಮೋಸ ವಂಚನೆ ಮಾಡುವವರಲ್ಲ". (ಅಭಿವ್ಯಕ್ತಿ-ಸಾಧಾರಣ)

**27. "**ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ ." (ಅಭಿವ್ಯಕ್ತಿ-ಸಾಧಾರಣ)

## VI ಕೆಳಗಿನ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ:-

**28.** ಪೆನ್ನು ಖಡ್ಗಕ್ಕಿಂತ ಹರಿತ. (ಅಭಿವ್ಯಕ್ತಿ-ಸಾಧಾರಣ) ಏಪ್ರಿಲ್-2022/ ಏಪ್ರಿಲ್ -2024

**29.** ಒಕ್ಕಲಿಗ ಒಕ್ಕಿದರೆ ಜಗವೆಲ್ಲಾ ಬಿಕ್ಕುವುದು. (ಅಭಿವ್ಯಕ್ತಿ-ಸಾಧಾರಣ ) ಏಪ್ರಿಲ್-2020

**30**. ಒಗ್ಗಟ್ಟಿನಲ್ಲಿ ಬಲವಿದೆ. (ಅಭಿವ್ಯಕ್ತಿ-ಸಾಧಾರಣ) ಜೂನ್ -2022/ ಜುಲೈ-2025

**31.** ಹಾಸಿಗೆ ಇದ್ದಷ್ಟು ಕಾಲು ಚಾಚು. (ಅಭಿವ್ಯಕ್ತಿ-ಸಾಧಾರಣ) ಏಪ್ರಿಲ್-2018

## VII ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:-

**32.** ದೇಶದ ಬಜೆಟ್ ನಲ್ಲಿ ರಕ್ಷಣಾ ಇಲಾಖೆಗೆ ಹೆಚ್ಚಿನ ಹಣವನ್ನು ಏಕೆ ಮೀಸಲಾಗಿಡುತ್ತದೆ.?

(ಅಭಿವ್ಯಕ್ತಿ-ಕಠಿಣ)

**33**. ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು.? ಎಂಬುದನ್ನು ನೀವು ಮೆಚ್ಚುವ ಅಂಶಗಳಲ್ಲಿ ವಿವರಿಸಿ. (ಅಭಿವ್ಯಕ್ತಿ-ಕಠಿಣ) ಜೂನ್-2023

**34.** 'ಕೃಷಿಕ ನಾಡಿನ ಬೆನ್ನೆಲುಬು' ಈ ಮಾತನ್ನು ಸಮರ್ಥಿಸಿರಿ .

(ಅಭಿವ್ಯಕ್ತಿ-ಕಠಿಣ) ಜೂನ್-2023

## VIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:- (ಗ್ರಹಿಕೆ- ಸಾಧಾರಣ) ಏಪ್ರಿಲ್-2023

**35.** ಸಮುದ್ರಕ್ಕೆ ಸಮೀಪವಾಗಿ ಸಂಪದ್ಭರಿತವಾಗಿರುವ ಈ ಪಶ್ಚಿಮ ಘಟ್ಟದ ಸಾಲು ಇತಿಹಾಸ ಕಾಲದಿಂದಲೂ ವಿದೇಶಿಯರ ಗಮನ ಸೆಳೆದಿತ್ತು. ನಾಲ್ಕು ಸಾವಿರ ವರ್ಷಗಳಿಂದಲೂ ತನ್ನ ಗೊಬ್ಬರದಿಂದಲೇ ತಾವು ಪುಷ್ಠಿಯಾಗುತ್ತಾ, ನಿರಾತಂಕವಾಗಿ ಬೆಳೆಯುತ್ತಿದ್ದ, ಈ ಅಡವಿಗಳಲ್ಲಿ ಅನೇಕ ಬಗೆಯ ವಿಶಿಷ್ಟ ಮಸಾಲೆ ಪರಿಮಳ ಸಸ್ಯಗಳೂ, ಔಷಧೀಯ ಮೂಲಿಕೆಗಳೂ ವಿಕಾಸವಾಗಿದ್ದೂ, ದೂರದ ಪರ್ಷಿಯಾದಿಂದ ಹಿಡಿದು ಪೋರ್ಚುಗಲ್‌ವರೆಗಿನ

ವ್ಯಾಪಾರಿಗಳನ್ನು ಆಕರ್ಷಿಸಿತ್ತು. ಆ ನಂತರ ಬ್ರಿಟೀಷರು ಬಂದರು. ಆವರೆಗೂ ನಾಗರಿಕತೆ ಸೋಂಕಿರದ ಈ ಕಾಡುಗಳಲ್ಲಿ ಮನುಷ್ಯನೂ ಅರಣ್ಯದ ಅವಿಭಾಜ್ಯ ಅಂಗವಾಗಿಯೇ ಇದ್ದ. ತನಗೆ ಬೇಕಿದ್ದಷ್ಟನ್ನೇ ಬಳಸಿಕೊಂಡು ಒಂದು ಕಿತ್ತರೆ ಇನ್ನೊಂದನ್ನು ನೆಡುತ್ತಾ ತನ್ನಷ್ಟಕ್ಕೆ ತಾನಿರುತ್ತಿದ್ದ.

ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾಗಿದ್ದು ಸ್ವಾತಂತ್ರ್ಯ ಬಂದ ಮೇಲೆ ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು  ಅತಿಕ್ರಮ ಸಾಗುವಳಿ ಆರಂಭಿಸಿದ್ದು, ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲ್ಚಿನ್ನಿ, ಜೇನು, ಬೆತ್ತ. ಧೂಪ, ದಂತ, ರಾಳ, ಬಗಿನೆ, ಬಿದಿರುಗಳಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ಹಣದಾಸೆಗೆ ಕಾಡು ದೋಚುವವರ ಸಂಖ್ಯೆ ಹೆಚ್ಚಾಯಿತು. ಕೊಡಲಿ, ಗುದ್ದಲಿ ಸಿಡಿಮದ್ದುಗಳಿಂದ ಪಶ್ಚಿಮ ಘಟ್ಟಗಳು ತತ್ತರಿಸುತ್ತಿವೆ. ನೋಡುನೋಡುತ್ತಾ ನಿರ್ನಾಮವಾಗುತ್ತಿವೆ.

**<u>ಪ್ರಶ್ನೆಗಳು</u>**

**ಅ)** ಪಶ್ಚಿಮ ಘಟ್ಟಗಳ ಪತನಕ್ಕೆ ಕಾರಣಗಳೇನು?

**ಆ)** ಪಶ್ಚಿಮ ಘಟ್ಟಗಳು ವಿದೇಶಿಯರ ಗಮನ ಸೆಳೆದಿದ್ದು ಹೇಗೆ?

**IX ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ:**

**36** ನಿಮ್ಮನ್ನು ಕಾರವಾರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಅಶ್ವಿನಿ' ಎಂದು ಭಾವಿಸಿಕೊಂಡು ಕನ್ನಡ ' ಶಬ್ದಕೋಶ' ಕಳುಹಿಸಿ ಕೊಡುವಂತೆ ಕೋರಿ, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

(ಅಭಿವ್ಯಕ್ತಿ-ಕಠಿಣ) (ಏಪ್ರಿಲ್- 2023)

**ಅಥವಾ**

**37**. ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ನಾಗರಾಜ' ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಪ್ರವಾಸದ ಅನುಭವಗಳನ್ನು ತಿಳಿಸಿ, ಉಡುಪಿಯ ವಿದ್ಯಾನಗರ ನಿವಾಸಿಯಾದ 'ನಿರಂಜನ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

(ಅಭಿವ್ಯಕ್ತಿ-ಕಠಿಣ) (ಏಪ್ರಿಲ್-2023)

## ಗದ್ಯಭಾಗ 3 ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| ಗದ್ಯ: ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಒಟ್ಟು |
|---|---|---|---|---|---|
| ಪ್ರಶ್ನೆಗಳು | 21 | 07 | 09 | 01 | 38 |
| ಅಂಕಗಳು | 23 | 14 | 30 | 04 | 71 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತು ನಿಷ್ಟ | 15 | 15 |
| 2 | ಕಿರು ಉತ್ತರ 1 (1 ಅಂಕದ ಪ್ರಶ್ನೆ) | 07 | 07 |
| 3 | ಕಿರು ಉತ್ತರ 2 (2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 (3 ಅಂಕದ ಪ್ರಶ್ನೆ) | 07 | 21 |
| 5 | ದೀರ್ಘ ಉತ್ತರ 2 (4 ಅಂಕದ ಪ್ರಶ್ನೆ) | 05 | 20 |
| | ಒಟ್ಟು | 38 | 71 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.**ವಸ್ತುಗಳಲ್ಲಿ ಬಣ್ಣ ಸ್ವಭಾವಗಳನ್ನು ತಿಳಿಸಿಕೊಡುವುದಕ್ಕೆ ಹೀಗೆನ್ನುವರು

ಎ) ನಾಮಪದ ಬಿ) ಸರ್ವನಾಮ (ಸ್ಮರಣೆ- ಸುಲಭ)

ಸಿ)ವಿಭಕ್ತಿ ಡಿ) ಗುಣವಾಚಕ

**2**. ನಾಮ ಪದಗಳಿಗೆ ಬದಲಾಗಿ ಬಳಸುವ ಪದಗಳಿಗೆ ಹೀಗೆನ್ನುವರು.(ಸ್ಮರಣೆ- ಸುಲಭ)

ಎ) ಸರ್ವನಾಮ ಬಿ) ನಾಮಪ್ರಕೃತಿ

ಸಿ) ಭಾವನಾಮ ಡಿ) ವಿಭಕ್ತಿ

**3.** ‘ ಒಳ್ಳೆಯ‘ ಪದವು ಈ ನಾಮಪದದ ಗುಂಪಿಗೆ ಸೇರಿದೆ ( ಸ್ಮರಣೆ- ಸುಲಭ)

ಎ) ಸಂಖ್ಯಾ ವಾಚಕ ಬಿ) ಗುಣವಾಚಕ

ಸಿ) ದಿಗ್ವಾಚಕ ಡಿ) ಪರಿಮಾಣ ವಾಚಕ

**4.** ‘ಮೂಡಣ-ಪಡುವಣ‘ ಎಂಬ ಪದಗಳು ಈ ನಾಮಪದಕ್ಕೆ ಉದಾಹರಣೆಯಾಗಿದೆ

ಎ) ಗುಣವಾಚಕ ಬಿ) ದಿಗ್ವಾಚಕ (ಸ್ಮರಣೆ- ಸುಲಭ)

ಸಿ) ಸಂಖ್ಯಾ ವಾಚಕ ಡಿ) ಸರ್ವನಾಮ

**5.** ಅನ್ವರ್ಥನಾಮ ಪದವಿದು (ಸ್ಮರಣೆ ಸುಲಭ)

ಎ) ಕೆರೆ ಬಿ) ಬೆಟ್ಟ

ಸಿ) ಶಿಕ್ಷಕ ಡಿ) ಮರ

**6 .** ಅವನು ಪ್ರತಿದಿನ ಶಾಲೆಗೆ ಬರುತ್ತಾನೆ ಈ ವಾಕ್ಯದಲ್ಲಿರುವ ಸರ್ವನಾಮ

ಎ) ಶಾಲೆಗೆ ಬಿ) ಬರುತ್ತಾನೆ ( ಸ್ಮರಣೆ- ಸುಲಭ)

ಸಿ) ಅವನು ಡಿ) ಪ್ರತಿದಿನ

**7.** ‘ತಾನು‘ ಎಂಬುದು ಈ ಸರ್ವನಾಮ ಪದಕ್ಕೆ ಉದಾಹರಣೆಯಾಗಿದೆ. (ಸ್ಮರಣೆ- ಸುಲಭ)

ಎ)ಪ್ರಶ್ನಾರ್ಥಕ ಬಿ) ಆತ್ಮಾರ್ಥಕ

ಸಿ) ಉತ್ತಮ ಪುರುಷ ಡಿ) ಮಧ್ಯಮ ಪುರುಷ

**8.** ಇವುಗಳ್ಲಲ್ಲಿ ಪ್ರಶ್ನಾರ್ಥಕ ಸರ್ವನಾಮ ಪದವಿದು. (ಸ್ಮರಣೆ ಸುಲಭ)

ಎ) ನೀನು ಬಿ) ತಮ್ಮ

ಸಿ) ಯಾರು ಡಿ) ಅದು

**9.** ನನ್ನ ಗೆಳೆಯನು ಉಡುಪಿ ಪ್ರವಾಸ ಮಾಡಿದನು. ಈ ವಾಕ್ಯದಲ್ಲಿರುವ ಅಂಕಿತನಾಮ ಪದವನ್ನು ಗುರುತಿಸಿ. (ಸ್ಮರಣೆ ಸುಲಭ)

ಎ) ಗೆಳೆಯನು ಬಿ) ಉಡುಪಿ

ಸಿ) ನನ್ನ ಡಿ) ಮಾಡಿದನು

**10 .** ಇವುಗಳಲ್ಲಿ ಸಂಖ್ಯೇಯವಾಚಕ ನಾಮಪದವಿದು. (ಸ್ಮರಣೆ ಸುಲಭ)

ಎ) ಮೂರು ಬಿ) ಐವರು

ಸಿ) ಹತ್ತು ಡಿ) ಸಾವಿರ

**11 .** ‘ಬಾಷ್ಪ‘ ಪದದ ಅರ್ಥ. ( ಸ್ಮರಣೆ ಸುಲಭ)

ಎ) ಕಣ್ಣೀರು ಬಿ) ನೋವು

ಸಿ) ಬಯಕೆ ಡಿ) ಮನಸ್ಸು

**12 .** ‘ಸ್ವೀಕರಿಸು‘ ಪದದ ವಿರುದ್ಧಾರ್ಥಕ ಪದ. (ಸ್ಮರಣೆ ಸುಲಭ)

ಎ) ಸ್ವೀಕಾರ　　ಬಿ) ಉಪಕಾರ

ಸಿ) ತಿರಸ್ಕರಿಸು　　ಡಿ) ಸಹಕಾರ

**13** . 'ಅಂಧ' ಪದದ ಅರ್ಥ.　( ಸ್ಮರಣೆ ಸುಲಭ)

ಎ) ಚೆಂದ　　ಬಿ) ಚಂದ

ಸಿ) ಸುಂದರ　　ಡಿ) ಕುರುಡ

**14 .** 'ನೋಟ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ　(ಸ್ಮರಣೆ- ಸುಲಭ)

ಎ) ಸರ್ವನಾಮ　　ಬಿ) ದಿಗ್ವಾಚಕ

ಸಿ) ಭಾವನಾಮ　　ಡಿ) ಅನ್ವರ್ಥನಾಮ

**15** . ಐ,ಔ ಅಕ್ಷರಗಳನ್ನು ಕನ್ನಡ ವರ್ಣಮಾಲೆಯಲ್ಲಿ ಹೀಗೆನ್ನುವರು.(ಸ್ಮರಣೆ -ಸುಲಭ)

ಎ) ಸಂಧ್ಯಕ್ಷರ　　ಬಿ) ಯೋಗವಾಹಕ

ಸಿ) ವ್ಯಂಜನ　　ಡಿ) ಹ್ರಸ್ವಸ್ವರ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**16.** ಪುಟ್ಟರಾಜರ ತಂದೆ ತಾಯಿಯ ಹೆಸರೇನು?　(ಸ್ಮರಣೆ ಸುಲಭ) ಆಗಸ್ಟ್-2024

**17.** ಶ್ರೇಷ್ಟ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?

(ಗ್ರಹಿಕೆ- ಸಾಧಾರಣ) ಜೂನ್-2023, ಮೇ-2025

**18.** ತಾಯಿ ಸಿದ್ದಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?

(ಸ್ಮರಣೆ ಸುಲಭ) ಜೂನ್-2024, ಜುಲೈ-2025

**19.** ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು ?

(ಸ್ಮರಣೆ -ಸುಲಭ) ಜೂನ್ -2025

**20**. ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ?　(ಗ್ರಹಿಕೆ- ಸುಲಭ)

**21**. ಪುಟ್ಟರಾಜರು ಯಾವ ಲಿಪಿ ಕಲಿತರು?　(ಸ್ಮರಣೆ ಸುಲಭ) ಏಪ್ರಿಲ್- 2024

**22.** ಪುಟ್ಟರಾಜರ ಮಾವನ ಹೆಸರೇನು?

**III ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:-**

**23.** ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡಿದ್ದು ಹೇಗೆ?　(ಗ್ರಹಿಕೆ- ಸಾಧಾರಣ)

ಏಪ್ರಿಲ್-2024/ ಜುಲೈ-2025

**24**. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ? (ಗ್ರಹಿಕೆ-ಸಾಧಾರಣ)

**25**. ತಾಯಿ ಸಿದ್ದಮ್ಮ ಪುಟ್ಟರಾಜನನ್ನು ಏನೆಂದು ಆಶೀರ್ವದಿಸಿದಳು? (ಗ್ರಹಿಕೆ-ಸಾಧಾರಣ) ಜೂನ್-2023/ಮೇ-2025

**26.** ವಿಶೇಷ ಚೇತನರಿಗೆ ನೀವು ಹೇಗೆ ಧೈರ್ಯ ತುಂಬುವಿರಿ? (ಅಭಿವ್ಯಕ್ತಿ- ಸಾಧಾರಣ)

**IV ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**27**. ರಮೇಶ್‌ಗೌಡ ಎಂ ಕೆ ( ಸ್ಮರಣೆ -ಸಾಧಾರಣ)

**V ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿ.**

**28.** ಪುಟ್ಟರಾಜರು ಕೋಗಿಲೆಯಂತೆ ಸುಮಧುರವಾಗಿ ಹಾಡುತ್ತಿದ್ದರು. (ಗ್ರಹಿಕೆ- ಸಾಧಾರಣ) ಜೂನ್-2022

**29.** ಪುಟ್ಟರಾಜ ಗವಾಯಿಯವರು ಸಂಗೀತ ಲೋಕದ ಧ್ರುವತಾರೆಯಂತೆ ಬೆಳಗುತ್ತಿದ್ದರು. (ಗ್ರಹಿಕೆ- ಸಾಧಾರಣ) ಮಾರ್ಚ್-2025

**VI ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:-**

**30**. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ" (ಅಭಿವ್ಯಕ್ತಿ-ಸಾಧಾರಣ)

**31**. "ಅವನು ಬಂದರೆ ಕರೆದುಕೊಂಡು ಹೋಗು ತಾಯಿ" (ಅಭಿವ್ಯಕ್ತಿ-ಸಾಧಾರಣ) ಆಗಸ್ಟ್-2024

**32** . "ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ". ( ಅಭಿವ್ಯಕ್ತಿ-ಸಾಧಾರಣ) ಜೂನ್ -2024

**33.** "ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು" ( ಅಭಿವ್ಯಕ್ತಿ-ಸಾಧಾರಣ)

**VII ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**34.** ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ ಹೇಗೆ ? ಸಮರ್ಥಿಸಿರಿ. ( ಅಭಿವ್ಯಕ್ತಿ- ಕಠಿಣ ) ಮಾಚ್ -2025/ ಏಪ್ರಿ -2025

**35.** ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿ. ( ಅಭಿವ್ಯಕ್ತಿ- ಕಠಿಣ ) ಏಪ್ರಿಲ್-2025

**36**. ಪುಟ್ಟಯ್ಯ ಹಾರ್ಮೋನಿಮ್ ನುಡಿಸಿದ ಪ್ರಸಂಗವನ್ನು ಸ್ವಾರಸ್ಯಕರವಾಗಿ ಬರೆಯಿರಿ. ( ಪ್ರಶಂಸೆ- ಕಠಿಣ) ಏಪ್ರಿಲ್-2023/ಮಾರ್ಚ್-2025

**VIII ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂದ ಬರೆಯಿರಿ.**

**37**. ಪರಿಸರ ಸಂರಕ್ಷಣೆ ಇಂದಿನ ಅಗತ್ಯತೆ (ಅಭಿವ್ಯಕ್ತಿ- ಕಠಿಣ ) ಏಪ್ರಿಲ್-2022/ಜೂನ್-2024

**38**. ಅರೋಗ್ಯ ಸುದಾರಣೆಯಲ್ಲಿ ಯೋಗದ ಮಹತ್ವ. ( ಅಭಿವ್ಯಕ್ತಿ- ಕಠಿಣ ) ಜುಲೈ-2023

## ಗದ್ಯಭಾಗ 4  ಹಕ್ಕಿಗೂಡುಗಳ ನಿಗೂಢ ಜಗತ್ತು

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| ಗದ್ಯ: ಹಕ್ಕಿಗೂಡುಗಳ ನಿಗೂಢ ಜಗತ್ತು | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಒಟ್ಟು |
|---|---|---|---|---|---|
| ಪ್ರಶ್ನೆಗಳು | 18 | 07 | 12 | - | 37 |
| ಅಂಕಗಳು | 18 | 15 | 44 | - | 77 |

**ಪ್ರಶ್ನಾನುಸಾರ ಪ್ರಾ      ಖ್ಯತೆ:**

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತು ನಿಷ್ಟ | 12 | 12 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 06 | 06 |
| 3 | ಕಿರು ಉತ್ತರ 2  ( 2 ಅಂಕದ ಪ್ರಶ್ನೆ) | 06 | 12 |
| 4 | ದೀರ್ಘ ಉತ್ತರ 1  ( 3 ಅಂಕದ ಪ್ರಶ್ನೆ) | 07 | 21 |
| 5 | ದೀರ್ಘ ಉತ್ತರ 2  ( 4 ಅಂಕದ ಪ್ರಶ್ನೆ) | 04 | 16 |
| 6 | ದೀರ್ಘ ಉತ್ತರ 3  ( 5  ಅಂಕದ ಪ್ರಶ್ನೆ) | 02 | 10 |
| | ಒಟ್ಟು | 37 | 77 |

**I  ಈ ಕೆಳಗಿನ  ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.**ಕ್ರಿಯಾ ಪದದ ಮೂಲರೂಪವನ್ನು  ಹೀಗೆನ್ನುವರು  (ಸ್ಮರಣೆ- ಸುಲಭ)

ಎ) ಧಾತು          ಬಿ) ಅವ್ಯಯ

ಸಿ) ಪ್ರತ್ಯಯ          ಡಿ) ಕಾರಕ

**2.** ಭೂತಕಾಲದ ಕಾಲಸೂಚಕ ಪ್ರತ್ಯಯ ( ಸ್ಮರಣೆ- ಸುಲಭ)

ಎ) ಉತ್ತ ಬಿ) ದ

ಸಿ) ವ ಡಿ) ಅನ್ನು

**3.** 'ಮೇರಿ ಬೇಗನೆ ಶಾಲೆಗೆ ಬಂದಳು' ಈ ವಾಕ್ಯದಲ್ಲಿರುವ ಕ್ರಿಯಾಪದ ( ಸ್ಮರಣೆ- ಸುಲಭ)

ಎ) ಬೇಗನೆ ಬಿ) ಶಾಲೆಗೆ

ಸಿ) ಬಂದಳು ಡಿ) ಮೇರಿ

**4**. 'ಕಂಡನು' ಕ್ರಿಯಾ ಪದದ ಧಾತು ( ಸ್ಮರಣೆ- ಸುಲಭ)

ಎ) ಕಂಡು ಬಿ) ಕಂಡ

ಸಿ) ಕಾಣು ಡಿ) ಕಾಂಡ

**5.** ' ಹೋಗುತ್ತಾನೆ ಈ ಪದದ ಕಾಲ (ಸ್ಮರಣೆ- ಸುಲಭ)

ಎ) ಭೂತಕಾಲ ಬಿ) ವರ್ತಮಾನ ಕಾಲ

ಸಿ) ಭವಿಷ್ಯತ್‌ಕಾಲ ಡಿ) ಗತಕಾಲ

**6.** 'ಮನೆಯನ್ನು' ಪದದಲ್ಲಿರುವ ವಿಭಕ್ತಿ (ಸ್ಮರಣೆ- ಸುಲಭ)

ಎ) ತೃತೀಯ ಬಿ) ದ್ವಿತೀಯ

ಸಿ) ಪಂಚಮಿ ಡಿ) ಸಪ್ತಮಿ

**7**. ಸಪ್ತಮಿ ವಿಭಕ್ತಿಯ ಕಾರಕಾರ್ಥ (ಸ್ಮರಣೆ- ಸುಲಭ)

ಎ) ಕರ್ಮಾರ್ಥ ಬಿ) ಕರಣಾರ್ಥ

ಸಿ) ಅಧಿಕರಣ ಡಿ) ಸಂಪ್ರಧಾನ

**8.** ಸಪ್ತಮಿ ವಿಭಕ್ತಿಯ ಪ್ರತ್ಯಯವಿದು ( ಸ್ಮರಣೆ- ಸುಲಭ)

ಎ) ಉ ಬಿ) ಯಿಂದ

ಸಿ) ಅಲ್ಲಿ ಡಿ) ದೆಸೆಯಿಂದ

**9.** ಈ ಪದಗಳಲ್ಲಿ ಸಪ್ತಮಿ ವಿಭಕ್ತಿಗೆ ಉದಾಹರಣೆ. ( ಸ್ಮರಣೆ- ಸುಲಭ)

ಎ) ಮನೆಯಲ್ಲಿ ಬಿ) ಮನೆಗೆ

ಸಿ) ಮನೆಯಿಂದ ಡಿ) ಮನೆಗೆ

**10**. ಇವುಗಳಲ್ಲಿ ಭೂತಕಾಲವನ್ನು ಸೂಚಿಸುವ ಪದ ( ಸ್ಮರಣೆ- ಸುಲಭ)

ಎ) ನೋಡುವನು ಬಿ) ನೋಡಿದನು

ಸಿ) ನೋಡುತ್ತಾನೆ ಡಿ) ನೋಡುವಳು

**11.** 'ಧ್ವನಿ ' ಪದದ ತದ್ಭವ ರೂಪ ( ಸ್ಮರಣೆ- ಸುಲಭ)

ಎ) ದನಿ　　　　　　ಬಿ) ರಾಗ

ಸಿ) ಶಬ್ದ　　　　　　ಡಿ) ರವ

**12**. ಅವನು <u>ಶಾಲೆಗೆ</u> ದಿನವೂ ಬರುತ್ತಾನೆ . ಗೆರೆ ಎಳೆದ ಪದದಲ್ಲಿರುವ ವಿಭಕ್ತಿ ( ಸ್ಮರಣೆ-ಸುಲಭ)

ಎ) ತೃತೀಯ　　　　　　ಬಿ) ಚತುರ್ಥಿ

ಸಿ) ದ್ವಿತೀಯ　　　　　　ಡಿ) ಪ್ರಥಮ

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:-**

**13.** ಸಸ್ತನಿಗಳ ಆಶ್ರಯದಾಣಗಳು ಯಾವುವು? ( ಸ್ಮರಣೆ- ಸುಲಭ) ಆಗಸ್ಟ್-2024 ಏಪ್ರಿಲ್ -2023

**14.** ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ? ( ಸ್ಮರಣೆ-ಸುಲಭ

**15.** ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ? ( ಸ್ಮರಣೆ- ಸುಲಭ)ಜೂನ್-2024 ಮೇ-2025

ಜುಲೈ-2025

**16.** ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು? ( ಸ್ಮರಣೆ-ಸುಲಭ) ಏಪ್ರಿಲ್ -2023 ಏಪ್ರಿಲ್ -2024

**17**. ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು?(ಸ್ಮರಣೆ- ಸುಲಭ)

**18**. ಬಟ್ಟಬಯಲಾಕಾರದಲ್ಲಿ ಗೂಡುಕಟ್ಟುವ ಪಕ್ಷಿಗಳು ಯಾವುವು? (ಸ್ಮರಣೆ-ಸುಲಭ)

**III. ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:-**

**19.** ಹಕ್ಕಿ ಗೂಡಿನ ವಿಶೇಷತೆಗಳೇನು? ?(ಗ್ರಹಿಕೆ – ಸಾಧಾರಣ) ಏಪ್ರಿ -2023 ಜುಲೈ-2025 ಏಪ್ರಿಲ್-2025

**20.** ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?(ಗ್ರಹಿಕೆ-ಸಾಧಾರಣ)

**21**. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ  ಕಟ್ಟಬಲ್ಲವು? (ಗ್ರಹಿಕೆ-ಸಾಧಾರಣ)

**22.**  ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಗೂಡು ಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು  ನೀಡಿರುತ್ತಾರೆ? (ಗ್ರಹಿಕೆ-ಸಾಧಾರಣ) ಏಪ್ರಿಲ್ -2024

**23**.  ನೀಲಿಸಾಮ್ರಾಟ ಹಾಗೂ ಸಗ್ಗದ ಹಕ್ಕಿ ಗೂಡುಗಳ ವಿಶೇಷತೆಗಳೇನು?(ಗ್ರಹಿಕೆ-ಸಾಧಾರಣ)

**24.**   ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ? (ಗ್ರಹಿಕೆ-ಸಾಧಾರಣ) ಜೂನ್-2024 ಆಗಸ್ಟ್-2024

**IV  ಕೆಳಗಿನ ಗಾದೆಮಾತನ್ನು ವಿಸ್ತರಿಸಿ ಬರೆಯಿರಿ:-**

**25.** "ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ" (ಅಭಿವ್ಯಕ್ತಿ-ಸಾಧಾರಣ) ಏಪ್ರಿಲ್ 2019

**26.** "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ(ಅಭಿವ್ಯಕ್ತಿ-ಸಾಧಾರಣ) ಏಪ್ರಿಲ್ 2024

**V   ಕೆಳಗಿನ  ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿ.**

**27.** "ಮಗುವಿನ ಮುಖವು ಚಂದ್ರತನಂತೆ ಮನೋಹರವಾಗಿದೆ" (ಗ್ರಹಿಕೆ-ಸಾಧಾರಣ) ಏಪ್ರಿಲ್ 2024

**VI   ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:-**

**28.** "ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ" (ಅಭಿವ್ಯಕ್ತಿ-ಸಾಧಾರಣ   ಮೇ-2025

**29**. "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠಹೇಳುವ ಶಾಲೆ ಇದು"(ಅಭಿವ್ಯಕ್ತಿ-ಸಾಧಾರಣ)

**30**  "ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ"(ಆಭಿವ್ಯಕ್ತಿ- ಸಾಧಾರಣ) ಜೂನ್-2023

**31** . " ಹಕ್ಕಿಗಳಿಗೆ ವಿಪರೀತ ಅಲಂಕಾರ ಪ್ರಜ್ಞೆ ಇದೆ" (ಅಭಿವ್ಯಕ್ತಿ-ಸಾಧಾರಣ)

**VII   ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:-**

**32.** ಹಕ್ಕಿಗೂಡುಗಳ ನಿಗೂಢ ಜಗತ್ತಿನ ವಿಶೇಷತೆಗಳನ್ನು ತಿಳಿಸಿ? (ಅಭಿವ್ಯಕ್ತಿ-ಕಠಿಣ)

**33**. ಹಕ್ಕಿಗಳು ಗೂಡುಗಳನ್ನು ಅಲಂಕರಿಸುವ ಬಗೆಯನ್ನು ವಿವರಿಸಿ? (ಅಭಿವ್ಯಕ್ತಿ-ಕಠಿಣ)

**VIII ಈ ಕೆಳಗಿನ ವಿಷಯಗಳನ್ನು ಕುರಿತು ಪ್ರಬಂಧ ಬರೆಯಿರಿ:-**

**34**. ಕಂಪ್ಯೂಟರ್ ನ ಉಪಯೋಗಗಳು.(ಅಭಿವ್ಯಕ್ತಿ-ಕಠಿಣ) ಏಪ್ರಿಲ್-2025ಜೂನ್2023

**35.** ರಾಷ್ಟ್ರೀಯ ಭಾವೈಕ್ಯತೆ, (ಅಭಿವ್ಯಕ್ತಿ-ಕಠಿಣ)

**IX ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ:-**

**36.** ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ'ಅಮೋಘ' ಎಂದು ಭಾವಿಸಿಕೊಂಡು, ನಿಮ್ಮ ಮುಂದಿನ ವ್ಯಾಸಂಗಕ್ಕಾಗಿ ವರ್ಗಾವಣೆ ಪತ್ರ ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ:- (ಅಭಿವ್ಯಕ್ತಿ-ಸಾಧಾರಣ) ಮಾರ್ಚ್- 2025

**37**. ನಿಮ್ಮನ್ನು ಕಲಬುರುಗಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ,ಕಲ್ಪನಾ' ಎಂದು ಭಾವಿಸಿಕೊಂಡು, ನಿಮ್ಮಶಾಲೆಯಲ್ಲಿ ಆಚರಿಸಿದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಕುರಿತು ಬಸವಕಲ್ಯಾಣ ನಿವಾಸಿಯಾದ 'ಸುನಿತಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ:- (ಅಭಿವ್ಯಕ್ತಿ-ಸಾಧಾರಣ) ಮಾರ್ಚ್- 2025

## ಗದ್ಯಭಾಗ 5. ಕಾಫೀ-ಕಪ್

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ:**

| ಗದ್ಯ: ಕಾಫೀ-ಕಪ್ | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಒಟ್ಟು |
|---|---|---|---|---|---|
| ಪ್ರಶ್ನೆಗಳು | 18 | 05 | 13 | - | 36 |
| ಅಂಕಗಳು | 18 | 12 | 43 | - | 73 |

**ಪ್ರಶ್ನಾನುಸಾರ ಪ್ರಾ ಖ್ಯತೆ:**

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತು ನಿಷ್ಟ | 10 | 10 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 08 | 08 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 09 | 27 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 05 | 20 |
| 6 | ದೀರ್ಘ ಉತ್ತರ 3 ( 5 ಅಂಕದ ಪ್ರಶ್ನೆ) | - | - |
| | ಒಟ್ಟು | 36 | 73 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ತಕರಾರು ಪದದ ಅರ್ಥ. (ಸ್ಮರಣೆ- ಸುಲಭ)

ಎ) ಆಕ್ಷೇಪಣೆ ಬಿ) ತೊಂದರೆ

ಸಿ) ತರ್ಕ ಡಿ) ನಿಂದನೆ

**2.** ಅತ್ಯಂತ ಪದವನ್ನು ಬಿಡಿಸಿ ಬರೆದಾಗ ( ಸ್ಮರಣೆ- ಸುಲಭ)

ಎ) ಅತಿ+ಅಂತ ಬಿ) ಅತ್ಯ+ಅಂತ

ಸಿ) ಅತಿಯಾದ+ ಅಂತ      ಡಿ) ಅತ್ + ಅಂತ

**3.** ಮತ್ತೊಬ್ಬ  ಪದವು ಈ ಸಂಧಿಗೆ ಉದಾಹರಣೆ         ( ಸ್ಮರಣೆ- ಸುಲಭ)

ಎ) ಆಗಮ ಸಂಧಿ          ಬಿ) ಲೋಪಸಂಧಿ

ಸಿ) ಆದೇಶ ಸಂಧಿ          ಡಿ) ಗುಣಸಂಧಿ

**4.** ಕಸ್ತೂರಿ ಪದದ ತದ್ಭವ ರೂಪ          ( ಸ್ಮರಣೆ- ಸುಲಭ)

ಎ) ಕರ್ತರಿ          ಬಿ) ಕತ್ತರಿ

ಸಿ) ಕತ್ತುರಿ          ಡಿ) ಕಾತರಿ

**5.**‘ ಬಿಸಿಬಿಸಿ‘  ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.  ( ಸ್ಮರಣೆ- ಸುಲಭ)

ಎ) ಜೋಡುನುಡಿ          ಬಿ) ದ್ವಿರುಕ್ತಿ

ಸಿ) ಅನುಕರಣಾವ್ಯಯ          ಡಿ) ನುಡಿಗಟ್ಟು.

**6.** ‘ಜೀವನದಲ್ಲಿ‘  ಪದದಲ್ಲಿರುವ ವಿಭಕ್ತಿ  . ( ಸ್ಮರಣೆ- ಸುಲಭ)

ಎ) ದ್ವಿತೀಯ          ಬಿ) ಸಪ್ತಮಿ

ಸಿ) ತೃತೀಯ          ಡಿ) ಚತುರ್ಥಿ

**7**. ಇವುಗಳಲ್ಲಿ ತತ್ಪುರುಷ ಸಮಾಸ ಪದಕ್ಕೆ ಉದಾಹರಣೆ. ( ಸ್ಮರಣೆ- ಸುಲಭ)

ಎ) ಪಂಚೇಂದ್ರಿಯ          ಬಿ) ಹೆಜ್ಜೇನು

ಸಿ) ಅಂಗೈ          ಡಿ) ಅರಮನೆ

**8.** ಸವಿ ಚೈತ್ರ ಪದವು ಈ ಸಮಾಸಕ್ಕೆ ಉದಾಹರಣೆ . ( ಸ್ಮರಣೆ- ಸುಲಭ)

ಎ) ಅಂಶಿ ಸಮಾಸ          ಬಿ) ಕರ್ಮಧಾರೆಯ

ಸಿ) ದ್ವಿಗು ಸಮಾಸ          ಡಿ) ಕ್ರಿಯಾ ಸಮಾಸ.

**9.** ಮರಗಾಲು ಪದವನ್ನು ಬಿಡಿಸಿ ಬರೆದಾಗ ( ಸ್ಮರಣೆ- ಸುಲಭ)

ಎ) ಮರ +ಕಾಲು          ಬಿ) ಮರಗಳ + ಕಾಲು

ಸಿ) ಮರದ + ಕಾಲು          ಡಿ) ಮರ+ ಗಾಲು.

**10.** ಇದು ಕರ್ಮಧಾರೆಯ ಸಮಾಸ ( ಸ್ಮರಣೆ- ಸುಲಭ)

ಎ) ನೆಲಮುಗಿಲು ಬಿ) ಗಂಜಿಯುಂಡು

ಸಿ) ಹೊಂಬಾಳೆ ಡಿ) ತುದಿಮೂಗು

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:-**

**11**. ಹೆಡ್ ಮಾಸ್ತರರು ಸಂತೋಷಗೊಂಡುದು ಏಕೆ ? ( ಸ್ಮರಣೆ- ಸುಲಭ) ಆಗಸ್ಟ -2024

**12.** ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?

( ಸ್ಮರಣೆ- ಸುಲಭ) ಜೂನ್-2024/ ಏಪ್ರಿಲ್ -2025

**13**. ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು ?

( ಸ್ಮರಣೆ- ಸುಲಭ)

**14**. ಗುರುಗಳು ಹೇಳಿದಂತೆ ಕಾಫೀ ಮತ್ತು ಕಾಫಿ ಕಪ್ಪು ಯಾವುದರ ಪ್ರತೀಕಗಳು ?

( ಸ್ಮರಣೆ- ಸುಲಭ)

**15**. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು ?

( ಸ್ಮರಣೆ- ಸುಲಭ)

**16**. ಹಳೆಯ ವಿದ್ಯಾರ್ಥಿಗಳೆಲ್ಲ ಯಾರ ಮನೆಗೆ ಹೋದರು ? ( ಸ್ಮರಣೆ- ಸುಲಭ)

**17.** ನಿಜವಾದ ಶ್ರೇಷ್ಠ ಗುರು ಯಾರು ? ( ಸ್ಮರಣೆ- ಸುಲಭ)

**18.** ಗುರುರಾಜ ಕರ್ಜಗಿಯವರ ಅಂಕಣ ಬರಹದ ಶೀರ್ಷಿಕೆ ಯಾವುದು ? ( ಸ್ಮರಣೆ- ಸುಲಭ)

ಜೂನ್ -2023

**III ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಬರೆಯಿರಿ:-**

**19**. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ? ( ಗ್ರಹಿಕೆ- ಸಾಧಾರಣ)

**20.** ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು ?

( ಗ್ರಹಿಕೆ- ಸಾಧಾರಣ) ಜೂನ್ -2024/ ಏಪ್ರಿಲ್ -2025

**21**. ಹೆಡ್ ಮಾಸ್ತರರು ಮಕ್ಕಳಿಗೆ ಏನೆಂದು ಹೇಳಿ ಅಡುಗೆ ಮನೆಗೆ ಹೋದರು ?

( ಗ್ರಹಿಕೆ- ಸಾಧಾರಣ)

**22.** ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?

( ಗ್ರಹಿಕೆ- ಸಾಧಾರಣ)

**IV ಕೆಳಗೆ ಕೊಟ್ಟಿರುವ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ:-**

**23**. " ಕೈಕೆಸರಾದರೆ ಬಾಯಿ ಮೊಸರು" ( ಅಭಿವ್ಯಕ್ತಿ- ಸಾಧಾರಣ) ಜೂನ್-2020/ ಜೂನ್-2024

**24."** ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ " ( ಅಭಿವ್ಯಕ್ತಿ- ಸಾಧಾರಣ) ಏಪ್ರಿಲ್-2020 ಏಪ್ರಿಲ್-2023 ಆಗಷ್ಟ-2024

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:-**

**25** ಸಾಧಾರಣವಾದ ಕಪ್ಪುಗಳನ್ನು ಅಲ್ಲಿಯೇ ಬಿಟ್ಟು ಬಂದಿರಿ ( ಅಭಿವ್ಯಕ್ತಿ -ಸಾಧಾರಣ) ಮೇ-2021

**26.** " ನಿಜವಾದ ಶಿಕ್ಷಕನಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರಿಯರಾಗುತ್ತಾರೆ.

( ಅಭಿವ್ಯಕ್ತಿ -ಸಾಧಾರಣ)

**27.** "ನನ್ನ ಕಾಫೀ ಕೂಡ ತುಂಬಾ ಚೆನ್ನಾಗಿರುತ್ತದೆ" ( ಅಭಿವ್ಯಕ್ತಿ -ಸಾಧಾರಣ)

**28.** " ನಿಮಗೆಲ್ಲಾ ಒಳ್ಳೆಯ ಕಾಫಿ ಮಾಡಿಕೊಂಡು ಬರುತ್ತೇನೆ". ( ಅಭಿವ್ಯಕ್ತಿ-ಸಾಧಾರಣ) ಜುಲೈ2025

**29**. "ನೀವು ಗಮನಿಸಿದ್ದೀರಾ ? ನೀವೆಲ್ಲಾ ಎಂಥ ಕಪ್ಪು ಆರಿಸಿಕೊಂಡಿದ್ದೀರಿ " ?

( ಅಭಿವ್ಯಕ್ತಿ -ಸಾಧಾರಣ) ಜೂನ್ -2023

**30.** " ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ' ( ಅಭಿವ್ಯಕ್ತಿ -ಸಾಧಾರಣ) ಏಪ್ರಿಲ್-2024, ಆಗಸ್ಟ್-2024

**31.** "ಕಪ್ಪುಗಳ ಚಿಂತೆ ಬೇಡ ಕಾಫೀ ಆಸ್ವಾದಿಸಿ". ( ಅಭಿವ್ಯಕ್ತಿ -ಸಾಧಾರಣ) ಏಪ್ರಿಲ್-2023

**VI ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:-**

**32.** ಗುರುಗಳು ಸುಖ ಜೀವನದ ಪಾಠವನ್ನು ವಿದ್ಯಾರ್ಥಿಗಳಿಗೆ ಹೇಗೆ ಮನವರಿಕೆ ಮಾಡಿಕೊಟ್ಟರು ? ( ಅಭಿವ್ಯಕ್ತಿ -ಸಾಧಾರಣ)

**33**. ಸುಖ ಜೀವನ ವ್ಯಕ್ತಿಯ ಒಳಗಿದೆಯೇ ಅಥವಾ ಹೊರಗಿದೆಯೇ ? ಚರ್ಚಿಸಿ ( ಅಭಿವ್ಯಕ್ತಿ - ಕಠಿಣ)

**VII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:- (ಗ್ರಹಿಕೆ- ಸಾಧಾರಣ) ಏಪ್ರಿಲ್-2024**

**34.** " ಪುಸ್ತಕಗಳು ಜ್ಞಾನ ಭಂಡಾರದ ಕೀಲಿಕೈ ಇದ್ದಂತೆ" ಎಂಬ ಮಾತು ಹಳೆಯದಾದರೂ ಅದು ಚಿರಂತನ ಸತ್ಯ . ಜಗತ್ತಿನ ಎಲ್ಲಾ ಕಾಲದ ಜ್ಞಾನಿಗಳು ತಮ್ಮ ಸಮಸ್ತ ಜ್ಞಾನವನ್ನು ಪುಸ್ತಕದ ರೂಪದಲ್ಲಿ ತಮ್ಮ ಹಾಗೂ ಮುಂದಿನ ಪೀಳಿಗೆಗೆ ಬಳುವಳಿಯಾಗಿ ಕೊಟ್ಟು ಹೋಗಿರುತ್ತಾರೆ. ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ನಿಲುಕಬಹುದಾದ ಅಮೂಲ್ಯ ಸಂಪತ್ತು ಇದು. ಈ ನಿಧಿಯ ಮೌಲ್ಯದ ಅರಿವು ಇದ್ದವರು ಅದನ್ನು ಬಾಚಿ ಬಳಿದುಕೊಂಡು ತಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿ ಕೊಳ್ಳುತ್ತಲೇ ಬಂದಿದ್ದಾರೆ. ಬೊಗಸೆಗಟ್ಟಲೆ ತುಂಬಿಕೊಂಡು ಎಷ್ಟು ಸವಿದರೂ ಎಂದು ಮುಗಿಯದ ಆಳವಾದ ಸಿಹಿನೀರಿನ ಕೊಳಗಳು ಈ ಪುಸ್ತಕಗಳು ಅಜ್ಞರಿಗೆ ಪುಸ್ತಕಗಳಲ್ಲಿ ಅಡಗಿದ ನಿಧಿಯ ಅರಿವು ಇರುವುದಿಲ್ಲ. ತಾತ್ಕಾಲಿಕ ಸುಖ ಕೊಡುವಂತಹ ಹಣ, ವೈಭವ, ಅಂತಸ್ತು, ಕೀರ್ತಿ, ಹಲಅಧಿಕಾರ ಇತ್ಯಾದಿ ಅರ್ಥಹೀನ ಪ್ರಲೋಭನೆಗಳನ್ನು ಅವರು ಬೆನ್ನಟ್ಟುತ್ತಾರೆ. ಒಂದು ಒಳ್ಳೆಯ ಪುಸ್ತಕವು ಕಷ್ಟಕಾಲದಲ್ಲಿ ಸ್ನೇಹಿತನಾಗುತ್ತಾನೆ , ಸಮಸ್ಯೆಗಳಿಗೆ ಪರಿಹಾರ ಹೇಳುತ್ತದೆ. ಏಕಾಕಿತನದ ಬಾರವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಎಂತಹ ಆಳವಾದ ದುಃಖವನ್ನು ಮರೆಯಲು ಸಹಾಯ ಮಾಡುತ್ತದೆ. ಪುಸ್ತಕದಿಂದ ಈ ಎಲ್ಲಾ ಲಾಭಗಳನ್ನು ಹೊಂದಬೇಕಾದಲ್ಲಿ ವ್ಯಕ್ತಿ ಒಬ್ಬ ಸಹೃದಯಿಯಾಗಿರುವುದು ಅವಶ್ಯ . ಜೀವನದ ಬಗ್ಗೆ ರಚನಾತ್ಮಕ ದೃಷ್ಟಿಯುಳ್ಳ , ಮೌಲ್ಯಗಳನ್ನು ಗೌರವಿಸುವ, ಒಳ್ಳೆಯದನ್ನು ಮತ್ತು ಸುಂದರವಾದುದನ್ನು ಪ್ರೀತಿಸುವ ಮನಸ್ಸು ಹಾಗೂ ಹೃದಯ ವ್ಯಕ್ತಿಗೆ ಇರಬೇಕು. ಅಂದಾಗಲೇ ಆತ ಪುಸ್ತಕಗಳನ್ನು ಓದುವ ಹಾಗೂ ಪ್ರೀತಿಸುವ ಮತ್ತು ಅವುಗಳಿಂದ ವ್ಯಕ್ತಿತ್ವವನ್ನು ಉನ್ನತಗೊಳಿಸಿಕೊಳ್ಳುವ ಸಾಧ್ಯತೆ ಇರುತ್ತದೆ.

**ಪ್ರಶ್ನೆಗಳು**

ಅ) ಒಂದು ಒಳ್ಳೆಯ ಪುಸ್ತಕದಿಂದಾಗುವ ಪ್ರಯೋಜನಗಳೇನು ?

ಆ) ನಮ್ಮ ಅರಿವಿನ ಪರಧಿಯನ್ನು ವಿಸ್ತರಿಸಿಕೊಳ್ಳುವುದು ಹೇಗೆ? ತಿಳಿಸಿ.

**VIII ಕೆಳಗಿನ ವಿಷಯಗಳನ್ನು ಕುರಿತು ಪ್ರಬಂಧ ಬರೆಯಿರಿ:-**

**35.** ಮೌಲ್ಯ ಶಿಕ್ಷಣದ ಮಹತ್ವ (ಅಭಿವ್ಯಕ್ತಿ- ಕಠಿಣ) ಮೇ-2025

**36**. ವಾಯು ಮಾಲಿನ್ಯದಿಂದಾಗುವ ಪರಿಣಾಮಗಳು . (ಅಭಿವ್ಯಕ್ತಿ- ಕಠಿಣ) ಜೂನ್-2022

## ಗದ್ಯಭಾಗ 6. ಗಂಗೆಯಲ್ಲಿ ದೀಪಮಾಲೆ

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| ಗದ್ಯ: ಗಂಗೆಯಲ್ಲಿ ದೀಪಮಾಲೆ | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಒಟ್ಟು |
|---|---|---|---|---|---|
| ಪ್ರಶ್ನೆಗಳು | 19 | 06 | 10 | - | 35 |
| ಅಂಕಗಳು | 21 | 13 | 38 | - | 72 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತು ನಿಷ್ಟ | 10 | 10 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 08 | 08 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 05 | 10 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 06 | 18 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 04 | 16 |
| 6 | ದೀರ್ಘ ಉತ್ತರ 3 ( 5 ಅಂಕದ ಪ್ರಶ್ನೆ) | 2 | 10 |
| | ಒಟ್ಟು | 35 | 72 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1**.ಸುಮ್ಮನೆ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ (ಸ್ಮರಣೆ- ಸುಲಭ)

ಎ) ಕ್ರಿಯಾರ್ಥಕಾವ್ಯಯ ಬಿ) ಭಾವಸೂಚಕಾವ್ಯಯ

ಸಿ) ಸಾಮಾನ್ಯ-ಅವ್ಯಯ ಡಿ) ಕೃದಂತ ಅವ್ಯಯ

**2**. ಇವುಗಳಲ್ಲಿ ಭಾವಸೂಚಕ ಅವ್ಯಯದಪದವಾಗಿದೆ. ಉದಾಹರಣೆ (ಸ್ಮರಣೆ- ಸುಲಭ)

ಎ) ಅಯ್ಯೋ ! ಬಿ) ಬೇಕು

ಸಿ) ಚೆನ್ನಾಗಿ ಡಿ) ಆದ್ದರಿಂದ

**3**. ಜುಳುಜುಳು ಪದವು ಈ ವ್ಯಾಕರಣಾಂಶವಾಗಿದೆ. ಉದಾಹರಣೆ. (ಸ್ಮರಣೆ- ಸುಲಭ)

ಎ) ದ್ವಿರುಕ್ತಿ ಬಿ) ಅನುಕರಣಾವ್ಯಯ

ಸಿ) ಜೋಡುನುಡಿ ಡಿ) ನಿಡಿಗಟ್ಟು

**4.** 'ಹೊಚ್ಚಹೊಸ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ. (ಸ್ಮರಣೆ- ಸುಲಭ)

ಎ) ಜೋಡುನುಡಿ ಬಿ) ನುಡಿಗಟ್ಟು

ಸಿ) ಅನುಕರಣಾವ್ಯಯ ಡಿ) ದ್ವಿರುಕ್ತಿ

**5.** ಈ ಪದಗಳಲ್ಲಿ ಜೊಡುನುಡಿಗೆ ಉದಾಹರಣೆ, ಉದಾಹರಣೆ. (ಸ್ಮರಣೆ- ಸುಲಭ)

ಎ) ಸಿಹಿಕಹಿ ಬಿ) ಕೈಕೊಡು

ಸಿ) ತುತ್ತತುದಿ ಡಿ) ದಡದಡ

**6.** ಬ್ರಹ್ಮ ಪದದ ತದ್ಭವ ರೂಪ. (ಸ್ಮರಣೆ- ಸುಲಭ)

ಎ) ಬರಮ ಬಿ) ಬೊಮ್ಮ

ಸಿ) ಬ್ರಹ್ಮರು ಡಿ) ಸೃಷ್ಟಿಕರ್ತ

**7.** ಕ್ರಿಯಾರ್ಥಕಾವ್ಯಯದ ಪದವಿದು. (ಸ್ಮರಣೆ- ಸುಲಭ)

ಎ) ಅಥವಾ ಬಿ) ಆಹಾ!

ಸಿ) ಸಾಕು ಡಿ) ಅದೇ

**8**. 'ನಾನೇ' ಪದವು ಈ ವ್ಯಾಕರಣಾಂಶವಾಗಿದೆ. (ಸ್ಮರಣೆ- ಸುಲಭ)

ಎ) ತದ್ವಿತಾಂತ ಅವ್ಯಯ ಬಿ) ಅವಧಾರಣಾರ್ಥಕ

ಸಿ) ಕ್ರಿಯಾರ್ಥಕ ಅವ್ಯಯ ಡಿ) ಸಾಮಾನ್ಯ ಅವ್ಯಯ

**9.** ರಾಯ ಪದದ ತತ್ಸಮ ರೊಪ. (ಸ್ಮರಣೆ- ಸುಲಭ)

ಎ) ರಾಜ ಬಿ) ರವಿ

ಸಿ) ರಾಹು ಡಿ) ರಾಗ

**10.** ಶರಣ ಪದದ ಅನ್ಯಲಿಂಗ ರೂಪ (ಸ್ಮರಣೆ- ಸುಲಭ)

ಎ) ಶರಣೆ ಬಿ) ಶರಣಿ

ಸಿ) ಶರಣು ಡಿ) ಶರಣಾ

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:-**

**11**. ಹರಿದ್ವಾರದಲ್ಲಿ ಏನನ್ನು ನೋಡಬೇಕೆಂದು ಲೇಖಕರ ಗುರಿಯಾಗಿತ್ತು? (ಸ್ಮರಣೆ- ಸುಲಭ)

**12.**ಹೂಯಾನ್‌ತ್ಸಾಂಗ್ ಹರಿದ್ವಾರವನ್ನು ಏನೆಂದು ಕರೆದಿದ್ದಾನೆ? (ಸ್ಮರಣೆ- ಸುಲಭ) ಜೂನ್-2024

**13**. ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು? (ಸ್ಮರಣೆ- ಸುಲಭ)

**14**. ಯಾವುದು ಗಂಗೆಯ ದಡದ ಆವರಣಗಳನ್ನು ತರಂಗಿತವಾಗಿಸಿತು? (ಸ್ಮರಣೆ-ಸುಲಭ)

**15.** ಚೀನಾ ದೇಶದ ಬೌದ್ಧ ಯಾತ್ರಿಕ ಯಾರು? (ಸ್ಮರಣೆ- ಸುಲಭ)

**16**. ಹ್ಯೂಯೆನ್‌ತ್ಸಾಂಗ್ ಬರೆದ ಗ್ರಂಥ ಯಾವುದು? (ಸ್ಮರಣೆ- ಸುಲಭ)

**17.** ಶಂತನುವಿನ ತಂದೆಯ ಹೆಸರೇನು? (ಸ್ಮರಣೆ- ಸುಲಭ)

**III ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:-**

**18.** ಅರ್ಜುನನನ್ನು ಸೆಳೆದುಕೊಂಡು ಹೋದ ನಾಗಲೋಕದ ಕನ್ಯೆ ಯಾರು? (ಗ್ರಹಿಕೆ-ಸಾಧಾರಣ)

**19**. ಹರಿದ್ವಾರವನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ? (ಗ್ರಹಿಕೆ-ಸಾಧಾರಣ) ಜೂನ್-2024

**20.** ಹರಿದ್ವಾರಕ್ಕೆ ಕಪಿಲಸ್ಥಾನ ಎಂದು ಹೆಸರು ಬರಲು ಕಾರಣವೇನು? (ಗ್ರಹಿಕೆ-ಸಾಧಾರಣ) ಮೇ-2025/ಜುಲೈ-2025

**21**. ಮಹಾಭಾರತದಲ್ಲಿ ಗಂಗಾದ್ವಾರದ ಬಗ್ಗೆ ಉಲ್ಲೇಖಗೊಂಡಿರುವ ಪ್ರಸಂಗಗಳನ್ನು ತಿಳಿಸಿ? (ಗ್ರಹಿಕೆ-ಸಾಧಾರಣ ಏಪ್ರಿ-2024

**22.** ನಿಸರ್ಗದ ಆರಾಧನೆಯನ್ನು ಕವಿ ಹೇಗೆ ಸಮರ್ಥಿಸಿಕೊಳ್ಳುತ್ತಾರೆ? (ಗ್ರಹಿಕೆ-ಸಾಧಾರಣ)

**23.** ಭಾರತದ ಏಳು ಪ್ರಾಚೀನ ಪವಿತ್ರ ನಗರಗಳು ಯಾವುವು?

**IV. ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**24.** ಡಾ// ಜಿ.ಎಸ್.ಶಿವರುದ್ರಪ್ಪ (ಸ್ಮರಣೆ- ಸುಲಭ)

**V. ಈ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ:-**

**25.** " ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು"

(ಗ್ರಹಿಕೆ-ಸಾಧಾರಣ)

**VI. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.:-**

**26**. "ಪುರಾಣ ಚರಿತ್ರೆ ಹಾಗೂ ವಾಸ್ತವಗಳು ಒಂದರ ಜತೆಗೊಂದು ಬಿಡಿಸಲಾಗದಂತೆ ಹಣೆದುಕೊಂಡಿವೆ ಇಲ್ಲಿ" ( ಅಭಿವ್ಯಕ್ತಿ-ಸಾಧಾರಣ)

**27**." ಉತ್ತರದ ಎತ್ತರಗಳಿಂದ ಇಳಿದ ಗಂಗೆ ಬಯಲನ್ನು ಪ್ರವೇಶಿಸುವ ದ್ವಾರವೂ ಇದೇ"

(ಅಭಿವ್ಯಕ್ತಿ-ಸಾಧಾರಣ)

**28**. "ದೀಪಗಳನ್ನು ತೇಲಿ ಬಿಡುವ ಈ ಆಟ ನಡೆದೇ ಇತ್ತು" (ಅಭಿವ್ಯಕ್ತಿ-ಸಾಧಾರಣ)

**29**. "ಈ ಅಪೂರ್ವ ದೃಶ್ಯ ಅವರ್ಣನಿಯವಾದದ್ದು (ಅಭಿವ್ಯಕ್ತಿ-ಸಾಧಾರಣ)

**VII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

**30**. ಗಂಗೆಯಲ್ಲಿ ದೀಪಮಾಲೆಯ ಸಂದರ ದೃಶ್ಯವನ್ನು ಲೇಖಕರು ವರ್ಣಿಸಿರುವ ರೀತಿಯನ್ನು ವಿವರಿಸಿ. (ಅಭಿವ್ಯಕ್ತಿ-ಕಠಿಣ)

**31**. ಗಂಗೆಯಲ್ಲಿ ದೀಪಮಾಲೆ ಪಾಠದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ:-

(ಅಭಿವ್ಯಕ್ತಿ-ಕಠಿಣ)

**VIII. ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ**

**32.**ಶೈಕ್ಷಣಿಕ ಪ್ರವಾಸ (ಅಭಿವ್ಯಕ್ತಿ- ಕಠಿಣ) ಏಪ್ರಿಲ್-2020/ ಏಪ್ರಿಲ್-2025

**33.** ದೂರದರ್ಶನದ ಪ್ರಯೋಜನಗಳು.     (ಅಭಿವ್ಯಕ್ತಿ- ಕಠಿಣ )  ಜೂನ್-2022/ಏಪ್ರಿಲ್-2023/ ಏಪ್ರಿಲ್-2025

**IX.  ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ:-**

**34.** ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಧನ್ವೀರ್' ಎಂದು ಭಾವಿಸಿಕೊಂಡು  ನಿಮ್ಮ ಶಾಲೆಯಲ್ಲಿ ಆಚರಿಸುವ 'ವನಮಹೋತ್ಸವ ' ಕಾರ್ಯಕ್ರಮಕ್ಕೆ ಸಸಿಗಳನ್ನು ನೀಡುವಂತೆ ಕೋರಿ ಅರಣ್ಯ  ಇಲಾಖೆಯ ಅರಣಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.  (ಅಭಿವ್ಯಕ್ತಿ-ಸಾಧಾರಣ) ಏಪ್ರಿಲ್-2022)

**ಅಥವಾ**

**35**. ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸುಮ' ಎಂದು ಭಾವಿಸಿಕೊಂಡು , ನಿಮ್ಮ ಶಾಲೆಯಲ್ಲಿ ನಡೆಯುವ 'ಪೋಷಕರ ಸಭೆ'ಗೆ ಬರುವಂತೆ ಕುಣಿಗಲ್‌ನ ಬನಶಂಕರಿ ನಗರದ ನಿವಾಸಿಯಾದ 'ಗಂಗಾಧರ' ಎಂಬ ಹೆಸರಿನ ತಂದೆಯವರಿಗೊಂದು ಪತ್ರವನ್ನು ಬರೆಯಿರಿ.  (ಅಭಿವ್ಯಕ್ತಿ-ಸಾಧಾರಣ) ಏಪ್ರಿಲ್-2022

.

## ಗದ್ಯಭಾಗ . 7 ನನ್ನ ಗೋಪಾಲ

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| ಗದ್ಯ: ನನ್ನ ಗೋಪಾಲ | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಒಟ್ಟು |
|---|---|---|---|---|---|
| ಪ್ರಶ್ನೆಗಳು | 19 | 06 | 10 | - | 35 |
| ಅಂಕಗಳು | 21 | 13 | 34 | - | 68 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತು ನಿಷ್ಟ | 10 | 10 |
| 2 | ಕಿರು ಉತ್ತರ 1 (1 ಅಂಕದ ಪ್ರಶ್ನೆ) | 08 | 08 |
| 3 | ಕಿರು ಉತ್ತರ 2 (2 ಅಂಕದ ಪ್ರಶ್ನೆ) | 05 | 10 |
| 4 | ದೀರ್ಘ ಉತ್ತರ 1 (3 ಅಂಕದ ಪ್ರಶ್ನೆ) | 08 | 24 |
| 5 | ದೀರ್ಘ ಉತ್ತರ 2 (4 ಅಂಕದ ಪ್ರಶ್ನೆ) | 04 | 16 |
| 6 | ದೀರ್ಘ ಉತ್ತರ 3 (5 ಅಂಕದ ಪ್ರಶ್ನೆ) | - | - |
| | ಒಟ್ಟು | 35 | 68 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ಗೋಪಾಲನು ಬನದಲ್ಲಿ ಹೂಗಳನ್ನು ಬಿಡಿಸಿದನು.ಈ ವಾಕ್ಯದಲ್ಲಿರುವ ಕ್ರಿಯಾಪದ

(ಸ್ಮರಣೆ- ಸುಲಭ)

ಎ) ಬನದಲ್ಲಿ    ಬಿ) ಬಿಡಿಸಿದನು

ಸಿ) ಹೂಗಳನ್ನು    ಡಿ) ಗೋಪಾಲನು

**2.** ಒಂದು ಕ್ರಿಯೆಯ ಪೂರ್ಣ ಅರ್ಥವನ್ನು ಕೊಡುವ ಪದಕ್ಕೆ ಹೀಗೆನ್ನುವರು.

(ಸ್ಮರಣೆ- ಸುಲಭ)

ಎ) ಧಾತು  ಬಿ) ಕರ್ಮಪದ

ಸಿ) ಕ್ರಿಯಾಪದ  ಡಿ) ಕರ್ತೃಪದ

**3.** ಈ ಪದಗಳಲ್ಲಿರುವ ಅಕರ್ಮಕಧಾತು ಪದ. (ಸ್ಮರಣೆ- ಸುಲಭ)

ಎ) ಮಲಗು  ಬಿ) ಮಾಡು

ಸಿ) ಓದು  ಡಿ) ರಕ್ಷಿಸು

**4.** ಬನದಲ್ಲಿ ಏನಮ್ಮ ಸೊಗಸು! ಈ ವಾಕ್ಯದಲ್ಲಿರುವ ಲೇಖನ ಚಿಹ್ನೆ. (ಸ್ಮರಣೆ- ಸುಲಭ)

ಎ) ಪ್ರಶ್ನಾರ್ಥಕ  ಬಿ) ಪೂರ್ಣವಿರಾಮ

ಸಿ) ಆಶ್ಚರ್ಯಸೂಚಕ  ಡಿ) ಅಲ್ಪವಿರಾಮ

**5**. 'ಬೈಗು' ಪದದ ಅರ್ಥ.  (ಸ್ಮರಣೆ- ಸುಲಭ)

ಎ) ಬೆಳಗು  ಬಿ) ಸಂಜೆ

ಸಿ) ಮಧ್ಯಾಹ್ನ  ಡಿ) ಬೆಳಿಗ್ಗೆ

**6.** 'ಸ್ನಾನಮಾಡು' ಪದವು ಈ ಸಮಾಸಕ್ಕೆ ಉದಾಹರಣೆ. (ಸ್ಮರಣೆ- ಸುಲಭ)

ಎ) ಕ್ರಿಯಾಸಮಾಸ  ಬಿ) ತತ್ಪುರುಷ

ಸಿ) ದ್ವಿಗು ಸಮಾಸ  ಡಿ) ಗಮಕಸಮಾಸ

**7.** 'ಸಂಜೆ' ಪದದ ತದ್ಭವ ರೂಪ.  (ಸ್ಮರಣೆ- ಸುಲಭ)

ಎ) ಸಜೆ  ಬಿ) ಸಂಧ್ಯಾ

ಸಿ) ಸಾಯಂಕಾಲ  ಡಿ) ಸಜ್ಜೆ

**8.** ಇವುಗಳಲ್ಲಿ ಕರ್ಮಧಾರೆ ಸಮಾಸ ಪದವಿದು. (ಸ್ಮರಣೆ- ಸುಲಭ)

ಎ) ಗಂಜಿಯುಂಡು  ಬಿ) ಹೊಂಬೆಳಕು

ಸಿ) ಹಿಂದಲೆ  ಡಿ) ಗಿಡಮರಬಳ್ಳಿ

**9**. 'ಕರುಣೆ' ಪದದ ವಿರುದ್ಧಾರ್ಥಕ ಪದವಿದು. (ಸ್ಮರಣೆ- ಸುಲಭ)

ಎ) ನಿಷ್ಕರುಣೆ  ಬಿ) ನಿರಾಕರಣೆ

ಸಿ) ಅಕರುಣೆ  ಡಿ) ಅಪಕರುಣೆ.

**10.** ಇವುಗಳಲ್ಲಿ ಲೋಪಸಂಧಿಗೆ ಉದಾಹರಣೆ.  (ಸ್ಮರಣೆ- ಸುಲಭ)

ಎ) ಕಂಬನಿ  ಬಿ) ಕೋಟ್ಯಂತರ

ಸಿ) ಕೊಳಲೂದಿ  ಡಿ) ಲಕ್ಷ್ಮೀಶ.

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:-**

**11**. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು?  (ಸ್ಮರಣೆ- ಸುಲಭ)

**12**. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು? (ಸ್ಮರಣೆ- ಸುಲಭ)
ಏಪ್ರಿಲ್-2023/ ಜೂನ್-2023/ಮೇ-2025

**13.** ಗೋಪಾಲನ ಗೆಳೆಯನ ಹೆಸರೇನು? (ಸ್ಮರಣೆ- ಸುಲಭ)

**14**. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು?
(ಸ್ಮರಣೆ- ಸುಲಭ)

**15.** ಗೋಪಾಲನು ಹೊಸ ಪಂಚೆಯನ್ನು ಬಯಸಿದ್ದೇಕೆ? (ಸ್ಮರಣೆ- ಸುಲಭ) ಏಪ್ರಿಲ್ -2025

**16** ಬನದ ಗೋಪಾಲ ಯಾರು? (ಸ್ಮರಣೆ- ಸುಲಭ)

**17.** ಮನೆಗಿಂತ ಯಾವುದು ಸೊಗಸು ಎಂದು ಗೋಪಾಲ ಹೇಳುತ್ತಾನೆ?

**18**. ಗೋಪಾಲನು ತನ್ನ ತಾಯಿಗೆ ಬುಟ್ಟಿಯಲ್ಲಿ ಏನನ್ನು ತೋರಿಸುತ್ತಾನೆ?

**III ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:-**

**19**. ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಎಳಿಸಿದಳು? (ಗ್ರಹಿಕೆ-ಸಾಧಾರಣ)

**20.** ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು? (ಗ್ರಹಿಕೆ-ಸಾಧಾರಣ)
ಜೂನ್-2023/ ಮೇ-2025

**21**. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು? (ಗ್ರಹಿಕೆ-ಸಾಧಾರಣ)

**22**. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು? (ಗ್ರಹಿಕೆ-ಸಾಧಾರಣ)

**23**. ಗೋಪಾಲನು ಶಾಲೆಯಿಂದ ಹಿಂತಿರುಗಿ ಬರುವಾಗ ಅಣ್ಣನನ್ನು ಹೇಗೆ ಹುಡುಕಿದನು?
(ಗ್ರಹಿಕೆ-ಸಾಧಾರಣ)

**IV ಈ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ,ಕೃತಿ ಮತ್ತು ಬಿರುದು,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**24.** ಕುವೆಂಪು (ಸ್ಮರಣೆ- ಸುಲಭ) ಏಪ್ರಿಲ್-2023

**V ಈ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.**

**25.** ಹೂ ಬನ ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಮನೋಹರವಾಗಿತ್ತು.

(ಗ್ರಹಿಕೆ-ಸಾಧಾರಣ) ಜೂನ್-2024

**VI ಕೆಳಗೆ ಕೊಟ್ಟಿರುವ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ:-**

**26.** ಬೆಳೆಯುವ ಸಿರಿ ಮೊಳಕೆಯಲ್ಲಿ.    (ಅಭಿವ್ಯಕ್ತಿ- ಸಾಧಾರಣ) ಏಪ್ರಿಲ್-2018

**27**. ತುಂಬಿದ ಕೊಡ ತುಳುಕುವುದಿಲ್ಲ.  (ಅಭಿವ್ಯಕ್ತಿ- ಸಾಧಾರಣ) ಮಾರ್ಚ್-2025

**VII ಕೆಳಗಿನ ಪ್ರಶ್ನೆ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳೊಂದಿಗೆ ವಿವರಿಸಿ:-**

**28.** "ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು" (ಅಭಿವ್ಯಕ್ತಿ- ಸಾಧಾರಣ)

**29**. "ಆ ಗೋಪಾಲನು ಕೊಡಬೇಕು ನಾವು ಉಣಬೇಕು "(ಅಭಿವ್ಯಕ್ತಿ- ಸಾಧಾರಣ) ಜೂನ್-2024 / ಆಗಸ್ಟ್-2024

**30.** "ಆ ಮಗುವಿಗೆ ಬಡತನದ ಬವಣೆಯೇಕೆ "? (ಅಭಿವ್ಯಕ್ತಿ- ಸಾಧಾರಣ)

**31.** "ಅಮ್ಮನ ಮಾತು ಸುಳ್ಳಾಗಲಾರದು "(ಅಭಿವ್ಯಕ್ತಿ- ಸಾಧಾರಣ) ಜುಲೈ-2025

**VIII ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**32.** ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವೇನು?
(ಅಭಿವ್ಯಕ್ತಿ- ಕಠಿಣ) ಏಪ್ರಿಲ್-2024

**33.** ಗೋಪಾಲನಿಗೆ ಇದ್ದ ಕಷ್ಟವೇನು? ಅದು ಹೇಗೆ ಪರಿಹಾರ ವಾಯಿತು?
(ಅಭಿವ್ಯಕ್ತಿ- ಕಠಿಣ)

**VIII ಕೆಳಗಿನ ವಿಷಯಗಳನ್ನು ಕುರಿತು ಹದಿನೈದು ವಾಕ್ಯ ಮೀರದಂತೆ ಪ್ರಬಂಧ ಬರೆಯಿರಿ:-**

**34**. ಅಂತರ್ಜಾಲದ ಅನುಕೂಲಗಳು (ಅಭಿವ್ಯಕ್ತಿ- ಕಠಿಣ)

**35**. ಸ್ವಚ್ಛಭಾರತ ಆಂದೋಲನದಲ್ಲಿ ಯುವ ಜನತೆಯ ಪಾತ್ರ (ಅಭಿವ್ಯಕ್ತಿ- ಕಠಿಣ)

ಜೂನ್-2018.

## ಗದ್ಯಭಾಗ. 8 ಸೌಜನ್ಯ

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| ಗದ್ಯ: ಸೌಜನ್ಯ | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಒಟ್ಟು |
|---|---|---|---|---|---|
| ಪ್ರಶ್ನೆಗಳು | 15 | 04 | 11 | - | 30 |
| ಅಂಕಗಳು | 17 | 08 | 41 | - | 66 |

**ಪ್ರಶ್ನಾನುಸಾರ ಪ್ರಾ ಖ್ಯತೆ:**

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತು ನಿಷ್ಟ | 05 | 05 |
| 2 | ಕಿರು ಉತ್ತರ 1 (1 ಅಂಕದ ಪ್ರಶ್ನೆ) | 09 | 09 |
| 3 | ಕಿರು ಉತ್ತರ 2 (2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 (3 ಅಂಕದ ಪ್ರಶ್ನೆ) | 06 | 18 |
| 5 | ದೀರ್ಘ ಉತ್ತರ 2 (4 ಅಂಕದ ಪ್ರಶ್ನೆ) | 04 | 16 |
| 6 | ದೀರ್ಘ ಉತ್ತರ 3 (5 ಅಂಕದ ಪ್ರಶ್ನೆ) | 02 | 10 |
| | ಒಟ್ಟು | 30 | 66 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1** ಸೌಜನ್ಯ ಪದದ ಸಮಾನಾರ್ಥಕ ಪದ. (ಸ್ಮರಣೆ- ಸುಲಭ)

ಎ) ಪ್ರೀತಿ ಬಿ) ಸಜ್ಜನಿಕೆ

ಸಿ) ರೀತಿ ಡಿ) ಸಹಜ

**2.** ಇವುಗಳಲ್ಲಿ ಅನ್ಯದೇಶ್ಯ ಪದ. (ಸ್ಮರಣೆ- ಸುಲಭ)

ಎ) ಕಾಗದ ಬಿ) ಟಿಕೇಟ್

ಸಿ) ಅರಣ್ಯ ಡಿ) ಕೊಡಲಿ

**3.** ಕೆಳಗಿನ ಪದಗಳಲ್ಲಿ ನುಡಿಗಟ್ಟಿಗೆ ಉದಾಹರಣೆ. (ಸ್ಮರಣೆ- ಸುಲಭ)

ಎ) ಪಟಪಟ ಬಿ) ಮುಖಗಂಟುಹಾಕು

ಸಿ) ಸಿಹಿಕಹಿ ಡಿ) ಬನ್ನಿ ಬನ್ನಿ

**4.** ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ ಇಲ್ಲಿ ವೈದ್ಯರು ಎಂಬುದು ಈ ವ್ಯಾಕರಣಾಂಶಕ್ಕೆ ಸೇರಿದೆ. (ಸ್ಮರಣೆ- ಸುಲಭ)

ಎ) ರೂಢನಾಮ ಬಿ) ಅಂಕಿತನಾಮ

ಸಿ) ಸರ್ವನಾಮ ಡಿ) ಅನ್ವರ್ಥನಾಮ

**05.** 'ಸ್ವರ್ಗ' ಪದದ ವಿರುದ್ಧಪದ. (ಸ್ಮರಣೆ- ಸುಲಭ)

ಎ) ಸಗ್ಗ ಬಿ) ನರಕ

ಸಿ) ಸುಗ್ಗಿ ಡಿ) ಸರಕು

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:-**

**6.** ನಮ್ಮ ದೈನಂದಿನ ಬದುಕಿನಲ್ಲಿ ಅಪರೂಪವಾಗಿರುವುದು ಯಾವುದು? (ಸ್ಮರಣೆ- ಸುಲಭ) ಏಪ್ರಿಲ್-2025/ಜುಲೈ-2025

**7.** ರೋಗಿಗಳು ಯಾರ ಬಳಿ ಹೋಗುತ್ತಾರೆ? (ಸ್ಮರಣೆ- ಸುಲಭ)

**8.** ಸೌಜನ್ಯ ಹೇಗೆ ಅರಳಬೇಕು? (ಸ್ಮರಣೆ- ಸುಲಭ)

**9.** ಸೌಜನ್ಯದಿಂದ ಬೇರೆಯವರಿಗೆ ಏನಾಗುತ್ತದೆ? (ಸ್ಮರಣೆ- ಸುಲಭ)

**10.** ನಮ್ಮ ಹಿರಿಯರು ನಮಗೆ ಏನು ಕಾಣಿಸಿದ್ದಾರೆ? (ಸ್ಮರಣೆ- ಸುಲಭ)

**11.** ಸಮಾಜ ಜೀವನದ ಬಾಳಿನ ಸೂತ್ರ ಯಾವುದು? (ಸ್ಮರಣೆ- ಸುಲಭ)

**12** ಎಂತಹ ಮಾತಿನಲ್ಲಿ ಸೌಜನ್ಯದ ಸ್ವರೂಪ ವ್ಯಕ್ತವಾಗುತ್ತದೆ? (ಸ್ಮರಣೆ- ಸುಲಭ)

**13.** ಮಾನವೀಯ ಸಂಬಂಧ ಯಾವುದನ್ನು ಅಪೇಕ್ಷಿಸುತ್ತದ? (ಸ್ಮರಣೆ- ಸುಲಭ)

**14.** ಜನರು ಯಾರ ಬಳಿ ಹೋಗುತ್ತಾರೆ? (ಸ್ಮರಣೆ- ಸುಲಭ)

**III ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:-**

**15.** ಸಮಾಜ ಜೀವನದ ಪ್ರಧಾನ ಲಕ್ಷಣ ಯಾವುದು? (ಗ್ರಹಿಕೆ-ಸಾಧಾರಣ)

**16**. ಅಸೌಜನ್ಯ ನಡವಳಿಕೆಗೆ ಎರಡು ಉದಾಹರಣೆ ಕೊಡಿ? (ಗ್ರಹಿಕೆ-ಸಾಧಾರಣ ಆಗಸ್ಟ್- 2024

**17.** ಸೌಜನ್ಯ ವರ್ತನೆಯ ಗುರುತುಗಳು ಯಾವುವು? (ಗ್ರಹಿಕೆ-ಸಾಧಾರಣ) ಏಪ್ರಿಲ್-2024

**18.** ಸೌಜನ್ಯಶೀಲರ ಲಕ್ಷಣಗಳಾವುವು? (ಗ್ರಹಿಕೆ-ಸಾಧಾರಣ)

**IV ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು, ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**19.** ಡಾ|| ಹಾ|| ಮಾ ನಾಯಕ (ಸ್ಮರಣೆ-ಸಾಧಾರಣ) ಮೇ-2025

**V ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ:-**

**20.** "ಅತಿ ಆಸೆ ಗತಿ ಕೇಡು" (ಅಭಿವ್ಯಕ್ತಿ- ಸಾಧಾರಣ) ಜುಲೈ-2025

**21.** "ಮನಸಿದ್ದರೆ ಮಾರ್ಗ" (ಅಭಿವ್ಯಕ್ತಿ- ಸಾಧಾರಣ) ಏಪ್ರಿಲ್-2018/ ಏಪ್ರಿಲ್-2025

**VI ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:-**

**22**. "ವ್ಯಕ್ತಿಯ ನಡತೆ ನಡವಳಿಕೆಗಳು ಚಿತ್ರ ವಿಚಿತ್ರ" (ಅಭಿವ್ಯಕ್ತಿ- ಸಾಧಾರಣ)

**23.** "ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳು "(ಅಭಿವ್ಯಕ್ತಿ- ಸಾಧಾರಣ) ಜೂನ್-2024

**24**. "ಸೌಜನ್ಯದಿಂದ ನಮಗೆ ನಷ್ಟವಿಲ್ಲದೆ ಬೇರೆಯವರಿಗೆ ಲಾಭವಾಗುತ್ತದೆ" (ಅಭಿವ್ಯಕ್ತಿ- ಸಾಧಾರಣ)

**VII ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**25.** ಸಹಕಾರ ಬಾಳಿನ ಸೂತ್ರವೆಂಬುದನ್ನು ಸೌಜನ್ಯ ಲೇಖನದಲ್ಲಿ ಹೇಗೆ ವಿವರಿಸಲಾಗಿದೆ? (ಅಭಿವ್ಯಕ್ತಿ- ಕಠಿಣ)

**26.** ಸೌಜನ್ಯಶೀಲವಂತರ ನಡವಳಿಕೆಗಳು ಹೇಗಿರಬೇಕು? ವಿವರಿಸಿ. (ಅಭಿವ್ಯಕ್ತಿ- ಕಠಿಣ)

**VIII ಕೆಳಗಿನ ವಿಷಯಗಳನ್ನು ಕುರಿತು ಹದಿನೈದು ವಾಕ್ಯ ಮೀರದಂತೆ ಪ್ರಬಂಧ ಬರೆಯಿರಿ.**

**27.** ಜ್ಞಾನಾಭಿವೃದ್ಧಿಯಲ್ಲಿ ವೃತ್ತಪತ್ರಿಕೆಗಳ ಪಾತ್ರ. (ಅಭಿವ್ಯಕ್ತಿ- ಕಠಿಣ) ಜೂನ್-2024

**28.** ಗ್ರಂಥಾಲಯಗಳ ಮಹತ್ವ (ಅಭಿವ್ಯಕ್ತಿ- ಕಠಿಣ) ಆಗಸ್ಟ್-2024

**IX ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ:-**

**29**. ನಿಮ್ಮನ್ನು ಬೀದರಿನ ಸರ್ಕಾರಿ ಪ್ರೌಢಶಾಲೆ 'ಶ್ರಾವಣಿ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ವನಮಹೋತ್ಸವ ಆಚರಿಸಲು ಸಸಿಗಳನ್ನು ನೀಡುವಂತೆ ಕೋರಿ ಅರಣ್ಯ ಇಲಾಖೆಯ ಅರಣ್ಯ ಅಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ) ಏಪ್ರಿಲ್ 2022

ಅಥವಾ

**30**. ನಿಮ್ಮನ್ನು ಕಲಬುರ್ಗಿಯ ಸರ್ಕಾರಿ ಪ್ರೌಢಶಾಲೆಯ 'ವೈಭವ್' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ 'ಮಕ್ಕಳ ದಿನಾಚರಣೆ' ಕಾರ್ಯಕ್ರಮದ ವಿವರವನ್ನು ತಿಳಿಸಿ, ಧಾರವಾಡದ ಸಾಧನಕೇರಿ ನಿವಾಸಿಯಾದ 'ಮಹೇಶ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ)

ಏಪ್ರಿಲ್ 2022

## ಪದ್ಯ ಭಾಗ: 1 ಬೋಧಿವೃಕ್ಷದ ಹಾಡು

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| **ಪದ್ಯ: ಬೋಧಿವೃಕ್ಷದ ಹಾಡು** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** | **ಒಟ್ಟು** |
|---|---|---|---|---|---|
| ಪ್ರಶ್ನೆಗಳು | 17 | 07 | 06 | 02 | 32 |
| ಅಂಕಗಳು | 22 | 13 | 20 | 08 | 63 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತು ನಿಷ್ಟ | 10 | 10 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 07 | 07 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 06 | 18 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 05 | 20 |
| 6 | ದೀರ್ಘ ಉತ್ತರ 3 ( 5 ಅಂಕದ ಪ್ರಶ್ನೆ) | - | - |
| | ಒಟ್ಟು | 32 | 63 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1**.ನಡುರಾತ್ರಿ ಪದವನ್ನು ವಿಗ್ರಹ ವಾಕ್ಯ ಮಾಡಿದಾಗ ಆಗುವ ರೂಪ.( ಸ್ಮರಣೆ - ಸುಲಭ)

ಎ) ನಡುವಿನ + ರಾತ್ರಿ ಬಿ) ರಾತ್ರಿಯ + ನಡುವೆ

ಸಿ) ನಡು+ರಾತ್ರಿ ಡಿ) ರಾತ್ರಿ + ನಡು

**2**. ಕೆಳಗಿನ ಪದಗಳಲ್ಲಿ ಕ್ರಿಯಾ ಸಮಾಸಕ್ಕೆ ಉದಾಹರಣೆ. ( ಸ್ಮರಣೆ -ಸುಲಭ )

ಎ) ಹೊಸರಾಗ ಬಿ) ಅರಮನೆ

ಸಿ) ಹಿಂಡು ಗಟ್ಟಿ ಡಿ) ನಡುರಾತ್ರಿ

**3**. ' ಹಿಂಡು' ಈ ಪದದ ಅರ್ಥ. ( ಸ್ಮರಣೆ -ಸುಲಭ )

ಎ) ಗುಂಪು ಬಿ) ಆಸೆ

ಸಿ) ಕಾಡು ಡಿ) ರಾಶಿ

**4.** ಗಿಡಗಿಡವೂ ಅಪ್ಪಿಕೊಂಡು ಕುಣಿಯುವಂತೆ ಕಂಡಿತು . ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದ . ( ಸ್ಮರಣೆ -ಸುಲಭ )

ಎ) ಗಿಡಗಿಡವೂ ಬಿ) ಅಪ್ಪಿಕೊಂಡು

ಸಿ) ಕುಣಿಯುವಂತೆ ಡಿ) ಕಂಡಿತು

**5.** ವೀರ ಪದದ ತದ್ಭವ ರೂಪ . ( ಸ್ಮರಣೆ -ಸುಲಭ )

ಎ) ಶೂರ ಬಿ) ಧೀರ

ಸಿ) ಬೀರ ಡಿ) ಶೌರ್ಯ

**6.** ಅಡವಿ ಪದದ ತತ್ಸಮ ರೂಪ ( ಸ್ಮರಣೆ -ಸುಲಭ )

ಎ) ಕಾಡು ಬಿ) ಅಟವಿ

ಸಿ) ಕಾನನ ಡಿ) ಅರಣ್ಯ

**7.** ಮೋಹವನ್ನು ಪದವು ಈ ಸಂಧಿಗೆ ಉದಾಹರಣೆ ಯಾಗಿದೆ.( ಸ್ಮರಣೆ -ಸುಲಭ )

ಎ) ಲೋಪಸಂಧಿ ಬಿ) ಯಣ್ ಸಂಧಿ

ಸಿ) ಆಗಮ ಸಂಧಿ ಡಿ) ವೃದ್ಧಿಸಂಧಿ

**8.** ಕಾಡು ಕಾಡು ಪದವು ಈ ವ್ಯಾಕರಣದ ಈ ಅಂಶಕ್ಕೆ ಸೇರುತ್ತದೆ.( ಸ್ಮರಣೆ-ಸುಲಭ )

ಎ) ದ್ವಿರುಕ್ತಿ ಬಿ) ಪಡೆನುಡಿ

ಸಿ) ಅನುಕರಣಾವ್ಯಯ ಡಿ) ಜೋಡಿಪದ.

**9.** ಪ್ರೀತಿಯನ್ನು ಪದದಲ್ಲಿರುವ ವಿಭಕ್ತಿ ಪ್ರತ್ಯಯ . ( ಸ್ಮರಣೆ -ಸುಲಭ )

ಎ) ದ್ವಿತೀಯ ಬಿ) ಪ್ರಥಮ

ಸಿ) ಸಪ್ತಮಿ ಡಿ) ಷಷ್ಠಿ

**10.** ಹಕ್ಕಿ + ಒಂದು ಪದವನ್ನು ಕೂಡಿಸಿ ಬರೆದಾಗ . ( ಸ್ಮರಣೆ -ಸುಲಭ )

ಎ) ಹಕ್ಕಿಒಂದು ಬಿ) ಹಕ್ಕಿಯೆಂದು

ಸಿ) ಹಕ್ಕಿಯಿಂದ ಡಿ) ಹಕ್ಕಿಯೊಂದು

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:-**

**11**. ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?

(ಗ್ರಹಿಕೆ- ಸಾಧಾರಣ) ಏಪ್ರುಲ್-2023

**12.** ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು?

(ಸ್ಮರಣೆ - ಸಾಧಾರಣ) ಏಪ್ರಿಲ್-2024/ ಜೂನ್ -2024

**13.** ಸಿದ್ಧಾರ್ಥ ಕಾಡಿನಿಂದ ನಾಡಿನತ್ತ ಏಕೆ ಹೊರಟನು ?

(ಗ್ರಹಿಕೆ- ಸಾಧಾರಣ) ಮೇ-2025/ ಜುಲೈ-2025

**14.** ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು ? (ಸ್ಮರಣೆ - ಸಾಧಾರಣ)

**15.** ಸಿದ್ಧಾರ್ಥ ಯಾವುದರ ಮೋಹವನ್ನು ತೊರೆದನು ? (ಸ್ಮರಣೆ - ಸಾಧಾರಣ)

**16.** ಸಿದ್ಧಾರ್ಥನಿಗೆ ಮಹಾ ಬೆಳಕು ಎಲ್ಲಿ ಕಂಡಿತು ? (ಸ್ಮರಣೆ - ಸಾಧಾರಣ)

**17.** ಸಿದ್ಧಾರ್ಥನು ಯಾರನ್ನು ತೊರೆದನು ? (ಸ್ಮರಣೆ- ಸಾಧಾರಣ)

**III ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**18**. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದಾ ?

(ಗ್ರಹಿಕೆ- ಸಾಧಾರಣ)

**19**. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬಾ ಪ್ರೀತಿ ಹೇಗೆ ತುಂಬಿಕೊಂಡಿತು ?

(ಗ್ರಹಿಕೆ- ಸಾಧಾರಣ) ಜೂನ್ -2024

**20** ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥವೇನು ?

(ಗ್ರಹಿಕೆ- ಸಾಧಾರಣ) ಜುಲೈ-2025

**21**. ಸಿದಾರ್ಥನು ವೀರನಂತೆ ಎದ್ದು ಕತ್ತಲಲ್ಲಿ ನಡೆದನು ಎಂದು ಕವಿ ಹೇಗೆ ವರ್ಣಿಸಿ ?

(ಗ್ರಹಿಕೆ- ಸಾಧಾರಣ)

**IV ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**22.** ಬಸವರಾಜ ಸಬರದ. (ಸ್ಮರಣೆ - ಸಾಧಾರಣ)

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.:-**

**23** "ಗೊತ್ತು ಗುರಿಯಿಲ್ಲದೆ ಕತ್ತಲಲ್ಲಿ ನಡೆದನು" ( ಅಭಿವ್ಯಕ್ತಿ -ಸಾಧಾರಣ) ಏಪ್ರಿಲ್ -2024

**24.** "ಕಾಡ ತುಂಬಾ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು " ( ಅಭಿವ್ಯಕ್ತಿ -ಸಾಧಾರಣ)

**25.** ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ನಡೆದನು"( ಅಭಿವ್ಯಕ್ತಿ -ಸಾಧಾರಣ) ಮೇ-2025

**26** "ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು" ( ಅಭಿವ್ಯಕ್ತಿ -ಸಾಧಾರಣ)

**VI. ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ:- ( ಪ್ರಶಂಸೆ- ಕಠಿಣ) ಏಪ್ರಿಲ್- 2023**

**27**. ಮರವ ಅಪ್ಪಿದಂತ ಬಳ್ಳಿ ಹೊವ ಮುಡಿದು ನಕ್ಕಿತು
ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು
ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆಯಿತು
ಬೆಳ್ಳಕ್ಕಿ ಹಿಂಡುಗಟ್ಟಿ ಬಾನಿಗೇಣಿ ಹಾಕಿತು.

**28** . ಕಾಡಿನಿಂದ ಎದ್ದು ಅವನು ನಾಡಿನತ್ತ ಹೊರಟನು
ಪ್ರೀತಿಯಿಂದ ಹುಡುಕಿಕೊಂಡು ಜನರ ಕಡೆಗೆ ಬಂದನು
ತಪಸಿಗಿಂತ ಜೀವ ಪ್ರೀತಿ ದೊಡ್ಡದೆಂದು ತಿಳಿದನು

ಬದುಕಿನ ಗೂಢಾರ್ಥವರಿತು ಬುದ್ಧನಾಗಿ ಬಂದನು.

**VII. ಈ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.**

**29.** ಕಾಡು ತುಂಬಾ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು. (ಗ್ರಹಿಕೆ- ಸಾಧಾರಣ)

**VIII ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ .**

( ಸ್ಮರಣೆ -ಸುಲಭ )

**30.** ಏಕಾಂಗಿ________________ ಕಾಡು ಕಾಡು __________________

____________________________ **ಅಥವಾ** ______________________________

____________________________ _______________________________

__________________ ನಡೆದನು. ______________________ ಕಂಡಿತು.

**IX ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**31**. ಸಿದ್ಧಾರ್ಥನು ಬುದ್ಧನಾದ ಪರಿ ಹೇಗೆ ? ವಿವರಿಸಿ .( ಅಭಿವ್ಯಕ್ತಿ -ಕಠಿಣ )

**32.** ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡು ಬಂದಿತು ?

( ಅಭಿವ್ಯಕ್ತಿ -ಕಠಿಣ )

## ಪದ್ಯ ಭಾಗ: 2 ಸವಿಚೈತ್ರ

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| ಪದ್ಯ: ಸವಿಚೈತ್ರ | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಒಟ್ಟು |
|---|---|---|---|---|---|
| ಪ್ರಶ್ನೆಗಳು | 16 | 05 | 06 | 02 | 29 |
| ಅಂಕಗಳು | 21 | 11 | 20 | 06 | 58 |

### ಪ್ರಶ್ನಾನುಸಾರ ಪ್ರಾಮುಖ್ಯತೆ:

| ಕ್ರ ಸಂ | ಪ್ರಶ್ನೆಯ ಸ್ವರೂಪ | ಪ್ರಶ್ನೆಗಳು | ಅಂಕಗಳು |
|---|---|---|---|
| 1 | ವಸ್ತು ನಿಷ್ಟ | 07 | 07 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 07 | 07 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 08 | 24 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 03 | 12 |
| | ಒಟ್ಟು | 29 | 58 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ಈ ಕೆಳಗಿನ ಪದಗಳಲ್ಲಿ ದ್ವಂದ್ವ ಸಮಾಸಕ್ಕೆ ಉದಾಹರಣೆಯಾದ ಪದ.

ಎ) ಸವಿಚೈತ್ರ ಬಿ) ಯುಗಾದಿ ( ಸ್ಮರಣೆ -ಸುಲಭ )

ಸಿ) ನೆಲಮುಗಿಲು ಡಿ) ಮೈಕೊಡವಿ

**2.** ಮುಖ ಪದದ ತದ್ಭವ ರೂಪ ( ಸ್ಮರಣೆ -ಸುಲಭ )

ಎ) ಮೋರೆ ಬಿ) ಮೊಗ

ಸಿ) ಮುಕ        ಡಿ) ವದನ

**3.** ಜೀವೋಲ್ಲಾಸ ಪದವು ಈ ಸಂಧಿಗೆ ಉದಾಹರಣೆಯಾಗಿದೆ. ( ಸ್ಮರಣೆ -ಸುಲಭ )

ಎ) ಗುಣಸಂಧಿ    ಬಿ) ಯಣ್ ಸಂಧಿ

ಸಿ) ಲೋಪಸಂಧಿ        ಡಿ) ಸವರ್ಣದೀರ್ಘಸಂಧಿ

**4.** ಮೈಕೊಡವಿ ಪದದ ವಿಗ್ರ ರೂಪ ( ಸ್ಮರಣೆ -ಸುಲಭ )

ಎ) ಮೈ + ಕೊಡವಿ        ಬಿ) ಮೈಯಿಂದ + ಕೊಡವಿ

ಸಿ) ಮೈಯನ್ನು + ಕೊಡವಿ   ಡಿ) ಮೈ + ಗೊಡವಿ

**5**. ಸಿಹಿ ಪದದ ವಿರುದ್ದ ಪದ . ( ಸ್ಮರಣೆ -ಸುಲಭ )

ಎ) ಕಹಿ        ಬಿ) ಒಗರು

ಸಿ) ವಿಷ        ಡಿ) ಹುಳಿ

**6.** ಎಲ್ಲೆಲ್ಲಿ ಪದವನ್ನು ಬಿಡಿಸಿ ಬರೆದಾಗ ( ಸ್ಮರಣೆ -ಸುಲಭ )

ಎ) ಎಲ್ಲಾ +ಎಲ್ಲಿ        ಬಿ) ಎಲ್ಲಿ + ಎಲ್ಲಿ

ಸಿ) ಎಲ್ಲಾ +ಎಲ್ಲಾ        ಡಿ) ಎಲ್ಲಿ + ಅಲ್ಲಿ

**7**. ಕೆಳಗಿನ ಪದಗಳಲ್ಲಿ ಅನುಕರಣಾವ್ಯಯಕ್ಕೆ ಉದಾಹರಣೆ . ( ಸ್ಮರಣೆ -ಸುಲಭ )

ಎ) ಚಿಲಿ-ಪಿಲಿ        ಬಿ) ಲಗುಬಗೆ

ಸಿ) ಸಿಹಿಕಹಿ        ಡಿ) ಬಗೆಬಗೆ

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :-**

**8.** ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ ? ( ಸ್ಮರಣೆ-ಸಾಧಾರಣ)

**9.** ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ? ( ಸ್ಮರಣೆ-ಸಾಧಾರಣ)   ಏಪ್ರಿಲ್-2025/ ಮೇ-2025

**10.** ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ ( ಸ್ಮರಣೆ-ಸಾಧಾರಣ)

ಏಪ್ರಿಲ್ -2025/ ಜುಲೈ-2025

**11**. ಸವಿ ಚೈತ್ರದ ಸೊಬಗು ಏನು?  ( ಸ್ಮರಣೆ-ಸಾಧಾರಣ)

**12.** ಯುಗಾದಿಯಲ್ಲಿ ಯಾವುದನ್ನು ಹಂಚುವ ಸಂಪ್ರದಾಯವಿದೆ ? ( ಸ್ಮರಣೆ-ಸಾಧಾರಣ) ಆಗಸ್ಟ್-2024

**13**. ಬೆಲ್ಲ ಬೇವಿಗೆ ಸೇರಿ ಏನಾಗುತ್ತದೆ? ( ಸ್ಮರಣೆ-ಸಾಧಾರಣ

**14.** ಮೈಕೊಡವಿ ಎದ್ದ ಪಕ್ಷಿ-ಪ್ರಾಣಿಗಳು ಯಾವುದಕ್ಕೆ ಹೊರಟಂತಿದೆ? ( ಸ್ಮರಣೆ-ಸಾಧಾರಣ

**III  ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು  ವಾಕ್ಯದಲ್ಲಿ ಉತ್ತರ ಬರೆಯಿರಿ:-**

**15**.ಯುಗದ ಆದಿ ತಂದ ಸಂಭ್ರಮವೇನು? (ಗ್ರಹಿಕೆ-ಸಾಧಾರಣ)  ಮೇ-2025

**16.** ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ?

**17.** ಚೈತ್ರದಲ್ಲಿ ಪ್ರಾಣಿ  ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು ?

**18**. ಚೈತ್ರದಲ್ಲಿ ನೆಲ ಮುಗಿಲು  ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ? ಆಗಸ್ಟ್-2024

**IV.  ಈ ಕವಿ/ ಸಾಹಿತಿಯ  ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**19.**  ಬಸವರಾಜ ಸಾದರ                    (ಸ್ಮರಣೆ-ಸಾಧಾರಣ)

**V  ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.:-**

**20.** “ ನೆಲದಮ್ಮ ನವವಧುವೆ ಆದಳಿಂತು”       ( ಅಭಿವ್ಯಕ್ತಿ- ಸಾಧಾರಣ)

**21.** “ನೆಲಮುಗಿಲ ವಾಲಗವೆ ನಡೆದಂತಿವೆ “( ಅಭಿವ್ಯಕ್ತಿ- ಸಾಧಾರಣ)

**22**. “ಎಲ್ಲರೆದೆಗಳ ತುಂಬ ಸವಿಚೈತ್ರವು “( ಅಭಿವ್ಯಕ್ತಿ- ಸಾಧಾರಣ)

**23**. “ಚಿಲಿಪಿಲಿಯ ಕಲರವಕೆ ಮತ್ತೇರಿದೆ” ( ಅಭಿವ್ಯಕ್ತಿ- ಸಾಧಾರಣ)

**VI   ಕೆಳಗಿನ ಪದ್ಯಭಾಗವನ್ನು ಓದಿಕೊಂಡು , ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ:-      ( ಪ್ರಶಂಸೆ- ಕಠಿಣ)  ಜುಲೈ-2025**

**24.** ಯುಗದ ಆದಿಯು ಬಂತು  ಸೊಗದ ಸುಗ್ಗಿಯ ತಂತು

ಜಗಕೆಲ್ಲ ಹೊಸ ಕಳೆಯು ತುಂಬಿತೆಂತು !

ಬಗೆಬಗೆಯ ಬಣ್ಣಗಳ  ಬರೆದ ಚಿತ್ರದ ಹಾಗೆ

ನೆಲದಮ್ಮ ನವವಧುವೆ ಆದಳಿಂತು.

**25.** ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು **(ಏಪ್ರಿಲ್-2025)**

ಲಗುಬಗೆಯ ದಗದಕ್ಕೆ  ಹೊರಟಂತಿದೆ

ಹೊಸತು ಜೀವೋಲ್ಲಾಸ ಚಿಗಿತ ಭಾವ ವಿಲಾಸ

ನೆಲ ಮುಗಿಲ ವಾಲಗವೆ ನಡೆದಂತಿದೆ.

**VII  ಕೆಳಗಿನ  ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಸಮನ್ವಯಗೊಳಿಸಿ ಬರೆಯಿರಿ:-**

**26 .** " ನೆಲದಮ್ಮ  ನವವಧುವಿನಂತೆ ಸುಂದರವಾಗಿ ಕಾಣುತ್ತಾಳೆ.   ( ಗ್ರಹಿಕೆ- ಸಾಧಾರಣ)

**VIII  ಕೆಳಗಿನ  ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ .**

( ಸ್ಮರಣೆ -ಸುಲಭ ) ಜೂನ್-2023/ ಏಪ್ರಿಲ್-2024/ ಜೂನ್ -2024

**27**  ಕೊರಡ ______________________ ಯುಗದ ಹಿಂದಿನ ____________________

______________________________ **ಅಥವಾ** ____________________________________

______________________________ ____________________________________

______________________ ಮತ್ತೇರಿದೆ. _________________________ ಸವಿಚೈತ್ರವು

**IX  ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**28**. ಚೈತ್ರದಲ್ಲಾಗುವ ಪ್ರಕೃತಿ ಬದಲಾವಣೆಗಳಾವುವು ?  ( ಅಭಿವ್ಯಕ್ತಿ- ಸಾಧಾರಣ )

**29.** ಕವಿ ಯುಗದ ಆದಿಯನ್ನು ಸವಿಚೈತ್ರ ಎಂದು ಏಕೆ ಬಣ್ಣಿಸಿದ್ದಾರೆ?

**ಪದ್ಯ ಭಾಗ: 3 ಸದ್ದು ಮಾಡದಿರು**

**ಉದ್ದಿಷ್ಟಾನು ಸಾರ ಪ್ರಾಮುಖ್ಯತೆ:**

| **ಪದ್ಯ: ಸದ್ದು ಮಾಡದಿರು** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** | **ಒಟ್ಟು** |
|---|---|---|---|---|---|
| ಪ್ರಶ್ನೆಗಳು | 10 | 07 | 05 | 02 | 24 |
| ಅಂಕಗಳು | 12 | 12 | 17 | 06 | 47 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತು ನಿಷ್ಟ | 06 | 06 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 06 | 06 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 03 | 06 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 07 | 21 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 02 | 08 |
| | ಒಟ್ಟು | 24 | 47 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1**.ಧ್ವನಿ ಪದದ ತದ್ಭವ ರೂಪ ( ಸ್ಮರಣೆ -ಸುಲಭ )

ಎ) ಧ್ವನಿ ಬಿ) ದಾನಿ

ಸಿ) ದನಿ ಡಿ) ಶಬ್ದ

**2.** ರೇವು ಪದದ ಅರ್ಥ ( ಸ್ಮರಣೆ -ಸುಲಭ )

ಎ) ಆಟೋ ನಿಲ್ದಾಣ　　　　ಬಿ) ಬಸ್ ನಿಲ್ದಾಣ

ಸಿ) ಹಡಗು ನಿಲ್ದಾಣ　　　　ಡಿ) ರೈಲುನಿಲ್ದಾಣ

**3.** ‘ಜೀವ‘ ಪದದ ವಿರುದ್ಧಾರ್ಥಕ ಪದ　( ಸ್ಮರಣೆ -ಸುಲಭ )

ಎ) ಸಜೀವ　　　　ಬಿ) ನಿರ್ಜೀವ

ಸಿ) ಅಜೀವ　　　　ಡಿ) ಜೀವನ

**4**.‘ ಮೌನಿಯಾಗು ‘ ಈ ಸಂಧಿ ಪದವನ್ನು ಬಿಡಿಸಿ ಬರೆದಾಗ ( ಸ್ಮರಣೆ -ಸುಲಭ )

ಎ) ಮೌನಿ+ ಆಗು　　　　ಬಿ) ಮೌನಿ + ಯಾಗು

ಸಿ) ಮೌನಿ + ವಾಗು　　　　ಡಿ) ಮೌನಿ + ಅಗು

**5.** ದೀಪದೆದುರಿಗೆ ಪದವು ಈ ಸಂಧಿಗೆ ಉದಾಹರಣೆ　( ಸ್ಮರಣೆ -ಸುಲಭ )

ಎ) ಲೋಪಸಂಧಿ　　　　ಬಿ) ಆಗಮ ಸಂಧಿ

ಸಿ) ಆದೇಶ ಸಂಧಿ　　　　ಡಿ) ಸ್ವರ ಸಂಧಿ

**6.** ಸಿಡುಕು-ದುಡುಕು ಪದವು ವ್ಯಾಕರಣದ ಈ ಅಂಶಕ್ಕೆ ಉದಾಹರಣೆಯಾಗಿದೆ. ( ಸ್ಮರಣೆ - ಸುಲಭ )

ಎ) ದ್ವಿರುಕ್ತಿ　　　　ಬಿ) ಅನುಕರಣಾವ್ಯಯ

ಸಿ) ಪಡೆನುಡಿ　　　　ಡಿ) ಜೋಡಿಪದ

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :-**

**7.** ತಿಮಿರಕ್ಕೆ ವೈರಿ ಯಾವುದು ? ( ಸ್ಮರಣೆ – ಸಾಧಾರಣ) ಏಪ್ರಿಲ್-2024, ಆಗಸ್ಟ್-2024 ಜುಲೈ-2025

**8.** ಕವಿ ಮಾನವನ ಬದುಕನ್ನು ಇಬ್ಬನಿಯಂತೆ ಇರಬೇಕು ಎಂದು ಏಕೆ ಬಯಸುತ್ತಾನೆ ?

(ಗ್ರಹಿಕೆ-ಸಾಧಾರಣ )

**9**. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?

(ಗ್ರಹಿಕೆ-ಸಾಧಾರಣ ) ಜೂನ್ -2023/ಜೂನ್-2024/ ಮೇ-2025

**10.** ತಟ್ಟೆಯಲ್ಲಿ ಕರ್ಪೂರ ಹೇಗೆ ಕರಗುತ್ತದೆ ? (ಗ್ರಹಿಕೆ-ಸಾಧಾರಣ )

**11.** ಮದ್ದು ಯಾವಾಗ ಸಿಡಿದಬ್ಬರಿಸುತ್ತದೆ ? ( ಸ್ಮರಣೆ – ಸಾಧಾರಣ )

**12.** ಏನನ್ನು ತೊರೆದು ಮೌನಿಯಾಗಬೇಕು ? ( ಸ್ಮರಣೆ – ಸಾಧಾರಣ )

**III ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**13.** ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ನಿದರ್ಶನಗಳಾವುವು ? ( ಗ್ರಹಿಕೆ-ಸಾಧಾರಣ)

**14.**ಕೂಗಾಟದ ಬದುಕು ನಿಷ್ಪ್ರಯೋಜಕ ಎಂಬುದಕ್ಕೆ ಕವಿ ನೀಡುವ ನಿದರ್ಶನಗಳು ಯಾವುವು ? ( ಗ್ರಹಿಕೆ-ಸಾಧಾರಣ)

**15**. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ ? (ಗ್ರಹಿಕೆ-ಸಾಧಾರಣ)

**IV. ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**16.** ಸಿ ಪಿ ಕೃಷ್ಣಕುಮಾರ್ ( ಸಿ.ಪಿ.ಕೆ ) ( ಸ್ಮರಣೆ -ಸಾಧಾರಣ) ಜೂನ್ -2023/ ಜುಲೈ-2025

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.:-**

**17.** " ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು" (ಅಭಿವ್ಯಕ್ತಿ- ಸಾಧಾರಣ ) ಆಗಸ್ಟ್-2024/ ಮೇ-2025

**18**. "ಸಿಡುಕು-ಮಿಡುಕನು ತೊರೆದು ಮೌನಿಯಾಗು" (ಅಭಿವ್ಯಕ್ತಿ- ಸಾಧಾರಣ ) ಜೂನ್ -2024/ ಏಪ್ರಿಲ್-2025

**19.** " ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲ್ " (ಅಭಿವ್ಯಕ್ತಿ- ಸಾಧಾರಣ ) ಏಪ್ರಿಲ್-2023

**VI. ಕೆಳಗಿನ ಪದ್ಯಭಾಗವನ್ನು ಓದಿಕೊಂಡು , ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ:- ( ಪ್ರಶಂಸೆ- ಕಠಿಣ)**

**20**. ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು

ದೀಪದೆದುರಿಗೆ ತಿಮಿರ ಸರಿಯುವಂತೆ

ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು

ಕೂಗಾಡಿ, ಹಾರಾಡಿ ಫಲವದೇನು?

**21.** ಹಸಿ ಸೌದೆ ಬುಸುಗುಟ್ಟಿ ದನಿಯನೆತ್ತುವುದಲ್ತೆ **( ಪ್ರಶಂಸೆ- ಕಠಿಣ) ಜುಲೈ-2025**

ಕಿಡಿಸೋಕೆ ಮದ್ದು ಸಿಡಿದಬ್ಬರಿಪುದು

ಅಂತಿರದೆ ರವಿಕರಕೆ ಕರಗುವಿಬ್ಬನಿವೊಲಿರು

ಸಿಡುಕು – ಮಿಡುಕನು ತೊರೆದು ಮೌನಿಯಾಗು !

**VII ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಸಮನ್ವಯಗೊಳಿಸಿ ಬರೆಯಿರಿ:-**

**22.** "ದೀಪದೆದುರಿಗೆ ತಿಮಿರ ಸರಿಯುವಂತೆ " ( ಗ್ರಹಿಕೆ- ಸಾಧಾರಣ )

**VIII ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**23**. ಸದ್ದು ಮಾಡದಿರು ಕವಿತೆ ನೀಡುವ ಸಂದೇಶವೇನು ? ( ಅಭಿವ್ಯಕ್ತಿ-ಸಾಧಾರಣ)

**24.** ಬದುಕಿನಲ್ಲಿ ಶಾಂತಿ ಮತ್ತು ಸದ್ದು ಇವುಗಳಲ್ಲಿ ಯಾವುದು ಹೆಚ್ಚು ಸುಖ ನೀಡುತ್ತದೆ ?

ಏಕೆ? ( ಅಭಿವ್ಯಕ್ತಿ -ಸಾಧಾರಣ )

## ಪದ್ಯ ಭಾಗ: 4 ಗುರಿ

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| **ಪದ್ಯ: ಗುರಿ** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** | **ಒಟ್ಟು** |
|---|---|---|---|---|---|
| ಪ್ರಶ್ನೆಗಳು | 12 | 05 | 09 | 02 | 28 |
| ಅಂಕಗಳು | 17 | 11 | 28 | 06 | 62 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತು ನಿಷ್ಟ | 05 | 05 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 06 | 06 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 09 | 27 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 04 | 16 |
| | ಒಟ್ಟು | 28 | 62 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ‘ವ್ಯಸನ‘ ಪದದ ತದ್ಭವ ರೂಪ ( ಸ್ಮರಣೆ -ಸುಲಭ )

ಎ) ಬೇಸರ ಬಿ) ಬೆಸನ

ಸಿ) ಚಿಂತೆ ಡಿ) ಮಸಗು

**2.** 'ಹಗಲಿರುಳು' ಪದವು ಈ ಸಂಧಿಗೆ ಉದಾಹರಣೆ. ( ಸ್ಮರಣೆ -ಸುಲಭ )

ಎ) ಆದೇಶ ಸಂಧಿ ಬಿ) ಆಗಮ ಸಂಧಿ

ಸಿ) ಲೋಪ ಸಂಧಿ ಡಿ) ಗುಣ ಸಂಧಿ

**3**. 'ಅಂಬುಜ' ಪದದ ಅರ್ಥ . ( ಸ್ಮರಣೆ -ಸುಲಭ )

ಎ) ತಾವರೆ ಬಿ) ನೈದಿಲೆ

ಸಿ) ಗುಲಾಬಿ ಡಿ) ಪಾರಿಜಾತ

**4.** 'ಹೇಡಿ' ಪದದ ವಿರುದ್ಧ ಪದ . ( ಸ್ಮರಣೆ -ಸುಲಭ )

ಎ) ವೀರ ಬಿ) ಬೀರ

ಸಿ) ಮಾರ ಡಿ) ಅಂಜುಬುರುಕ

**5.** 'ಹೆಗ್ಗುರಿ' ಪದವನ್ನು ಬಿಡಿಸಿ ಬರೆದಾಗ ( ಸ್ಮರಣೆ -ಸುಲಭ )

ಎ) ಹಿರಿದು+ಗುರಿ ಬಿ) ಹಿರಿಯರ +ಗುರಿ

ಸಿ) ಹಿರಿ +ಗುರಿ ಡಿ) ಹಿಗ್ಗಿನ +ಗುರಿ

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :-**

**6** ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ ? ( ಸ್ಮರಣೆ-ಸಾಧಾರಣ) ಜುಲೈ-2025

**7** ನಮ್ಮ ದುಡಿಮೆಯ ಹೂ ಫಲಿಸುವುದು ಯಾವಾಗ ? ( ಸ್ಮರಣೆ-ಸಾಧಾರಣ)

**8** ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು ? ( ಸ್ಮರಣೆ-ಸಾಧಾರಣ) ಏಪ್ರಿಲ್-2025/ಜೂನ್-2023

**9** ಹಗಲಿರುಳು ಯಾವುದಕ್ಕೆ ಹೋರಾಡಬೇಕು ? ( ಸ್ಮರಣೆ-ಸಾಧಾರಣ) ಏಪ್ರಿಲ್-2024/ ಆಗಸ್ಟ್-2024

**10** ಮನವು ಯಾವ ಸುಳಿಗೆ ಸಿಲುಕಿದೆ ? ( ಸ್ಮರಣೆ-ಸಾಧಾರಣ)

**11** ಬದುಕು ಸಾರ್ಥಕವಾಗುವುದು ಯಾವಾಗ ? ( ಸ್ಮರಣೆ-ಸಾಧಾರಣ)

**III ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**12** ನಮ್ಮ ಬದುಕು ಕೆಸರಿನ ಕಮಲದಂತಿರಬೇಕು ಏಕೆ ? ( ಗ್ರಹಿಕೆ-ಸಾಧಾರಣ )

**13** ಅಡಿಗರು ಯಾವುದನ್ನು ಹೇಡಿತನ ಹಾಗೂ ಹೆಣ್ತನ ಎಂದು ಕರೆದಿದ್ದಾರೆ ? ( ಗ್ರಹಿಕೆ-ಸಾಧಾರಣ )

**14** ಜೀವನದಲ್ಲಿ ಒಂದೇ ಗುರಿ ಇರಬೇಕು ? ಏಕೆ ? ( ಗ್ರಹಿಕೆ-ಸಾಧಾರಣ )

**15** ಜೀವನದಲ್ಲಿ ಒಂದೇ ಗುರಿ ಇರಬೇಕು ಎಂಬುದಕ್ಕೆ ಅಡಿಗರು ನೀಡುವ ನಿದರ್ಶನಗಳು ಯಾವುವು ? ( ಗ್ರಹಿಕೆ-ಸಾಧಾರಣ )

**IV ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. ( ಸ್ಮರಣೆ – ಸಾಧಾರಣ)**

**16** ಎಂ ಗೋಪಾಲಕೃಷ್ಣ ಅಡಿಗ

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.:-**

**17** " ಗಾಳಿ ಬಂದೊಡನೆ ಶರಣೆಂಬ ಹೆಣ್ತನವು " ( ಅಭಿವ್ಯಕ್ತಿ- ಸಾಧಾರಣ)

**18** " ಒಂದೇ ಹೆಗುರಿಗೆ ಹೋರಾಡು ಹಗಲಿರುಳು " ( ಅಭಿವ್ಯಕ್ತಿ- ಸಾಧಾರಣ) ಜುಲೈ-2025

**19** "ಪರಹಿತಕೆ ಬಳಲುತ್ತಿರಲದುವೆ ಜೀವನವು " ( ಅಭಿವ್ಯಕ್ತಿ- ಸಾಧಾರಣ)

**20** ಒಂದು ಜೀವನಕೇಕೆ ಹಲವು ಸಾದ್ಯಗಳು ( ಅಭಿವ್ಯಕ್ತಿ- ಸಾಧಾರಣ) ಏಪ್ರಿಲ್-2024

**VI ಕೆಳಗಿನ ಪದ್ಯಭಾಗವನ್ನು ಓದಿಕೊಂಡು , ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ:- ( ಪ್ರಶಂಸೆ- ಕಠಿಣ) ಜೂನ್-2023**

**21** ಅಳಿಯಾಸೆಗಳ ಸುಳಿಗೆ ಸಿಲುಕಿದೆಲೆ ಮನವೇ
ನೆಲೆಯಿರದೆ ತೊಳಲುವುದು ಮನುಜ ಜೀವನವೇ ?

ನೆನೆಬೇಕು , ಕೊನೆಬೇಕು ನರನ ಬಾಳುವೆಗೆ

ದಿನದ ಗೈಮೆಯ ಹೂವು ಫಲಿಸಿ ಬರುವುದಕೆ.

**22 .** ನರನೊಳಗೆ ನಾರಾಯಣನ ರೂಪು ಕಂಡು

ತಿರೆಯೊಳಗೆ ಸುರಪುರದ ಮೈಸಿರಿಯನುಂಡು

ಪರಹಿತಕೆ ಬಳಲುತಿರಲದುವೆ ಜೀವನವು

ಪೆರತೇನನೆಸಗಿದರು  ನಮಗೆ ಲಾಂಛನವು .

**VII.  ಕೆಳಗಿನ  ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಸಮನ್ವಯಗೊಳಿಸಿ ಬರೆಯಿರಿ:-**

**23.** " ಗುರಿ ಇಲ್ಲದ ಜೀವನ ಚುಕ್ಕಾಣಿಯಿಲ್ಲದ ದೋಣಿಯಂತೆ  "      ( ಗ್ರಹಿಕೆ- ಸಾಧಾರಣ )

**VIII   ಕೆಳಗಿನ  ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ .**

( ಸ್ಮರಣೆ -ಸುಲಭ ) ಏಪ್ರಿಲ್-2023/ ಮೇ-2025

**24**  ಒಂದು ಬಾಣಕೆ ________________

______________________________

______________________________

______________________ ಹಗಲಿರುಳು

**ಅಥವಾ**

ಕೆಸರೊಳಿದ್ದರು  _____________

______________________________

______________________________

______________________ ಸಾರ್ಥಕತೆಗೆ

**IX  ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:- (ಅಭಿವ್ಯಕ್ತಿ-ಕಠಿಣ)**

**25.** ಅಡಿಗರ ಪ್ರಕಾರ ಜೀವನವು  ಯಾವಾಗ ಸಾರ್ಥಕವಾಗುತ್ತದೆ ?  (ಅಭಿವ್ಯಕ್ತಿ-ಸಾಧಾರಣ)

**26.** ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಸ್ವಾರಸ್ಯವಾಗಿ ಬರೆಯಿರಿ.

(ಅಭಿವ್ಯಕ್ತಿ-ಸಾಧಾರಣ) ಜೂನ್-2024

**27**. ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆದೇಶಿಸಿರುವುದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.      (ಅಭಿವ್ಯಕ್ತಿ-ಸಾಧಾರಣ) ಜೂನ್-2024

**X.   ಕೆಳಗಿನ ವಿಷಯಕ್ಕೆ 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

**28**.   ನನ್ನ ಜೀವನದ ಗುರಿ       (ಅಭಿವ್ಯಕ್ತಿ-ಕಠಿಣ)

**ಪದ್ಯ ಭಾಗ: 5 ಮೂಡಲ್ ಕುಣಿಗಲ್ ಕೆರೆ.**

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ:**

| **ಪದ್ಯ: ಮೂಡಲ್ ಕುಣಿಗಲ್ ಕೆರೆ** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** | **ಒಟ್ಟು** |
|---|---|---|---|---|---|
| ಪ್ರಶ್ನೆಗಳು | 14 | 06 | 06 | 01 | 27 |
| ಅಂಕಗಳು | 14 | 14 | 21 | 04 | 53 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತು ನಿಷ್ಟ | 06 | 06 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 08 | 08 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 05 | 15 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 04 | 16 |
| | ಒಟ್ಟು | 27 | 53 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ‘ಹೊಂಬಾಳೆ‘ ಪದವು ಈ ಸಮಾಸಕ್ಕೆ ಉದಾಹರಣೆ . ( ಸ್ಮರಣೆ -ಸುಲಭ )

ಎ) ತತ್ಪುರುಷ ಸಮಾಸ ಬಿ) ದ್ವಿಗು ಸಮಾಸ

ಸಿ) ಕರ್ಮಧಾರೆಯ ಸಮಾಸ ಡಿ) ಅಂಶಿ ಸಮಾಸ

**2.** ‘ಸೀರೆ‘ ಪದದ ತತ್ಸಮ ರೂಪ . . ( ಸ್ಮರಣೆ -ಸುಲಭ )

ಎ) ಬಟ್ಟೆ ಬಿ) ಚೀರಾ

ಸಿ) ವಸ್ತು ಡಿ) ನಾರಿ

**3.** 'ಬರ್ತಾನೆ' ಪದದ ಗ್ರಾಂಥಿಕ ರೂಪ. . ( ಸ್ಮರಣೆ -ಸುಲಭ )

ಎ) ಬರುವನು ಬಿ) ಬರಲಿ

ಸಿ) ಬರುತ್ತಾನೆ ಡಿ) ಬಂದನು

**4.** 'ಮೂಡಣ' ಎಂದರೆ . . ( ಸ್ಮರಣೆ -ಸುಲಭ )

ಎ) ಉತ್ತರ ದಿಕ್ಕು ಬಿ) ದಕ್ಷಿಣ ದಿಕ್ಕು

ಸಿ) ಪೂರ್ವ ದಿಕ್ಕು ಡಿ) ಪಶ್ಚಿಮ ದಿಕ್ಕು

**5.** 'ಯೋಗಿ' ಪದದ ತದ್ಭವ ರೂಪ . . ( ಸ್ಮರಣೆ -ಸುಲಭ )

ಎ) ಸನ್ಯಾಸಿ ಬಿ) ಜೋಗಿ

ಸಿ) ಋಷಿ ಡಿ) ಜಂಗಮ

**6**. 'ಕಬ್ಬಕ್ಕಿ' ಪದದ ವಿಗ್ರಹರೂಪ . . ( ಸ್ಮರಣೆ -ಸುಲಭ )

ಎ) ಕರಿ+ ಹಕ್ಕಿ ಬಿ) ಕರಿಯ + ಹಕ್ಕಿ

ಸಿ) ಕಪ್ಪಾದ + ಹಕ್ಕಿ ಡಿ) ಕಪ್ಪು +ಹಕ್ಕಿ

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :-**

**7.** ಜನಪದರು ಕೆರೆ ಹೇಗೆ ಬಾಗಿದೆ ಎಂದು ಹೇಳಿದ್ದಾರೆ ? (ಸ್ಮರಣೆ-ಸಾಧಾರಣ) ಆಗಸ್ಟ್-2024/ಏಪ್ರಿಲ್-2025/ ಮೇ -2025

**8.** ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ.?

(ಸ್ಮರಣೆ-ಸಾಧಾರಣ) ಏಪ್ರಿಲ್-2024/ಜೂನ್-2024

**9.** ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ ? (ಸ್ಮರಣೆ-ಸಾಧಾರಣ)

**10**. ಕೆರೆಯಲ್ಲಿ ಯಾವ ಮೀನುಗಳಿದ್ದವು ? (ಸ್ಮರಣೆ-ಸಾಧಾರಣ)

**11**. ಕುಣಿಗಲ್ ಕೆರೆ ಯಾವ ಜಿಲ್ಲೆಯಲ್ಲಿದೆ ? (ಸ್ಮರಣೆ-ಸಾಧಾರಣ)

**12.** ಸ್ಥಳ ಪುರಾಣದ ಪ್ರಕಾರ ಕುಣಿಗಲ್ ಕೆರೆಯನ್ನು ಕಟ್ಟಿಸಿದ ಚಕ್ರವರ್ತಿ ಯಾರು ? (ಸ್ಮರಣೆ-ಸಾಧಾರಣ)

**13**. ಜನಪದ ಸಾಹಿತ್ಯದ ರಚನಕಾರರು ಯಾರು ? (ಸ್ಮರಣೆ-ಸಾಧಾರಣ)

**14**. ಭಾವ ಬಣ್ಣದ ಸೀರೆಯನ್ನು  ಏಕೆ ತಂದನು  ? (ಸ್ಮರಣೆ-ಸಾಧಾರಣ)  ಜುಲೈ-2025

**III  ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು  ವಾಕ್ಯದಲ್ಲಿ ಉತ್ತರ ಬರೆಯಿರಿ:-**

**15.** ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು ?  (ಗ್ರಹಿಕೆ-ಸಾಧಾರಣ)  ಏಪ್ರಿಲ್-2023

**16.** ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣಗಳೇನು ?  (ಗ್ರಹಿಕೆ-ಸಾಧಾರಣ)  ಜೂನ್-2023 / ಜೂನ್-2024/ಜುಲೈ-2025

**17**. ಕಬ್ಬಕ್ಕಿಗಳು ಬಾಯಿ ಬಿಡಲು ಕಾರಣಗಳೇನು ?      (ಗ್ರಹಿಕೆ-ಸಾಧಾರಣ)  ಏಪ್ರಿಲ್-2025

**18.** ಬೊಬ್ಬೆ ಹೊಡೆದಾವೆ ಬಾಳೆ ಮೀನು ಈ ಸಾಲಿನ ಅರ್ಥವನ್ನು ವಿವರಿಸಿ.  (ಗ್ರಹಿಕೆ-ಸಾಧಾರಣ)  ಮೇ-2023

ಆಗಸ್ಟ್-2024

**IV  ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.:-**

**19**." ಭಾವ ತಂದಾನೆ ಬಣ್ಣದ ಸೀರೆ "       (ಅಭಿವ್ಯಕ್ತಿ-ಸಾಧಾರಣ)      ಆಗಸ್ಟ್ -2024

**20**. ಕಬ್ಬಕ್ಕಿ ಬಾಯ ಬಿಡುತಾವೆ"      (ಅಭಿವ್ಯಕ್ತಿ-ಸಾಧಾರಣ)      ಏಪ್ರಿಲ್ -2024

**21**."ಬೊಬ್ಬೆ ಹೊಡೆದಾವೆ ಬಾಳೆ ಮೀನು" (ಅಭಿವ್ಯಕ್ತಿ-ಸಾಧಾರಣ)

**V  ಕೆಳಗಿನ  ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಲಕ್ಷಣ ಬರೆದು ಸಮನ್ವಯಗೊಳಿಸಿ ಬರೆಯಿರಿ:-**

**22**. ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ .   ( ಗ್ರಹಿಕೆ-ಸಾಧಾರಣ)

ಏಪ್ರಿಲ್-2023

**23**. ಕುಣಿಗಲ್ ಕೆರೆ ನಿಂಬೆ ಹಣ್ಣಿನಂತೆ ತುಂಬಿದೆ . ( ಗ್ರಹಿಕೆ-ಸಾಧಾರಣ)

**VI  ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:-**

**24.** ಕುಣಿಗಲ್ ಕೆರೆ ಜೀವಸಂಕುಲಕ್ಕೆ ಆಶ್ರಯವಾಗಿರುವುದನ್ನು ಗೀತೆಯಲ್ಲಿ ಯಾವ ರೀತಿ ವರ್ಣಿಸಲಾಗಿದೆ ? (ಅಭಿವ್ಯಕ್ತಿ-ಕಠಿಣ)

**25.** ಮೂಡಲ್ ಕುಣಿಗಲ್ ಕೆರೆ ಗೀತೆಯ ಭಾವಾರ್ಥವನ್ನು ಬರೆಯಿರಿ. (ಪ್ರಶಂಸೆ-ಕಠಿಣ)

**VII ಕೆಳಗಿನ ವಿಷಯಕ್ಕೆ 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

**26.** ಜಲ ಸಂರಕ್ಷಣೆ . (ಅಭಿವ್ಯಕ್ತಿ-ಕಠಿಣ) ಏಪ್ರಿಲ್ -2018

**27.** ಕೆರೆಗಳ ಮಹತ್ವ (ಅಭಿವ್ಯಕ್ತಿ-ಕಠಿಣ) ಏಪ್ರಿಲ್ -2019

**ಪದ್ಯ ಭಾಗ: 6 ವಚನಗಳು**

**ಉದ್ದಿಷ್ಟಾನುಸಾರ ಪ್ರಾಮುಖ್ಯತೆ:**

| **ಪದ್ಯ: ವಚನಗಳು** | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** | **ಒಟ್ಟು** |
|---|---|---|---|---|---|
| ಪ್ರಶ್ನೆಗಳು | 16 | 05 | 05 | 01 | 27 |
| ಅಂಕಗಳು | 19 | 12 | 17 | 04 | 52 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತು ನಿಷ್ಟ | 05 | 05 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 10 | 10 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 03 | 06 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 06 | 19 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 03 | 12 |
| | ಒಟ್ಟು | 27 | 52 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ವೇದಾಂತವನೋದಿ ಪದವು ಈ ಸಂಧಿಗೆ ಉದಾಹರಣೆಯಾಗಿದೆ . ( ಸ್ಮರಣೆ -ಸುಲಭ )

ಎ) ಆಗಮಸಂಧಿ ಬಿ) ಆದೇಶ ಸಂಧಿ

ಸಿ) ಲೊಪಸಂಧಿ ಡಿ) ಗುಣಸಂಧಿ

**2**. ಶಬ್ದ ಪದದ ವಿರುದ್ಧ ಪದ ( ಸ್ಮರಣೆ -ಸುಲಭ )

ಎ) ನಿಶ್ಯಬ್ದ ಬಿ) ಅಶಬ್ದ

ಸಿ) ದುಶ್ಯಬ್ದ ಡಿ) ಪ್ರಶಬ್ದ

**3**. 'ಮೃಗ' ಪದದ ತದ್ಭವ ರೂಪ ( ಸ್ಮರಣೆ -ಸುಲಭ )

ಎ) ಮಗ ಬಿ) ಪ್ರಾಣಿ

ಸಿ) ಮಿಗ ಡಿ) ಖಗ

**4.** 'ಸ್ಥಾವರ' ಪದದ ಅರ್ಥ ( ಸ್ಮರಣೆ -ಸುಲಭ )

ಎ) ಸ್ಥಾವರ ಬಿ) ತಾವರೆ

ಸಿ) ಚಲಿಸುವ ಡಿ) ಚಲಿಸದ

**5.** ಕಾಡು ಪದದ ಸಮನಾರ್ಥಕ ಪದ. ( ಸ್ಮರಣೆ -ಸುಲಭ )

ಎ) ಅರಣ್ಯ ಬಿ) ಬೆಟ್ಟ

ಸಿ) ಮೇಡು ಡಿ) ಗುಡ್ಡ

**II ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :-**

**6**. ಬಸವಣ್ಣನವರ ಪ್ರಕಾರ ನಶಿಸುವುದು ಯಾವುದು ? (ಸ್ಮರಣೆ-ಸಾಧಾರಣ) ಜುಲೈ- 2024, ಆಗಸ್ಟ್ -2024

**7.** ಸೊನ್ನಲಿಗ ಸಿದ್ದರಾಮರ ವಚನದ ಪ್ರಕಾರ ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ ? (ಸ್ಮರಣೆ-ಸಾಧಾರಣ) ಏಪ್ರಿಲ್-2023, ಜೂನ್-2023

**8.** ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ದರಾಮ ಹೇಳುತ್ತಾರೆ.? (ಸ್ಮರಣೆ-ಸಾಧಾರಣ) ಆಗಸ್ಟ್- 2024

**9.** ಸಂತೆಯೊಳಗೊಂದು ಮನೆಯನ್ನು ಮಾಡಿದರೆ ಯಾವುದಕ್ಕೆ ಅಂಜಬಾರದು ? (ಸ್ಮರಣೆ-ಸಾಧಾರಣ) ಏಪ್ರಿಲ್-2024, ಏಪ್ರಿಲ್-2025, ಮೇ-2025

**10**. ಬೆಟ್ಟದ ಮೇಲೆ ಮನೆಯ ಮಾಡಿ ಯಾವುದಕ್ಕೆ ಅಂಜಬಾರದು. (ಸ್ಮರಣೆ-ಸಾಧಾರಣ)

**11**. ಲೋಕದೊಳಗೆ ಹುಟ್ಟಿದ ಬಳಿಕ ಯಾವುದಕ್ಕೆ ಕೋಪ ತಾಳದೆ ಸಮಾಧಾನಿಯಾಗಿರಬೇಕು ? (ಸ್ಮರಣೆ-ಸಾಧಾರಣ)

**12**. ಬಸವಣ್ಣನವರ ವಚನಗಳ ಅಂಕಿತ ಯಾವುದು ? (ಸ್ಮರಣೆ-ಸಾಧಾರಣ)

**13.** ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ದರಾಮ ಹೇಳುತ್ತಾನೆ ? (ಸ್ಮರಣೆ-ಸಾಧಾರಣ)

**14.**. ಅಕ್ಕಮಹಾದೇವಿ ವಚನಗಳ ಅಂಕಿತ ಯಾವುದು ? (ಸ್ಮರಣೆ-ಸಾಧಾರಣ)

**15.** ಸೊನ್ನಲಿಗೆ ಸಿದ್ದರಾಮರ ವಚನಗಳ ಅಂಕಿತ ಯಾವುದು ? (ಸ್ಮರಣೆ-ಸಾಧಾರಣ)

**III ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ:-**

16. ಲೋಕದಲ್ಲಿ ಕೇಳಿಬರುವ ಸ್ತುತಿ ನಿಂದನೆಗಳನ್ನು ಅಕ್ಕಮಹಾದೇವಿಯು ಯಾವುದಕ್ಕೆ ಹೋಲಿಸಿದ್ದಾರೆ ? (ಗ್ರಹಿಕೆ-ಸಾಧಾರಣ) ಏಪ್ರಿಲ್-2023
17. ಬಸವಣ್ಣನವರು 'ದೇಹವೇ ದೇಗುಲ ' ವೆಂಬ ಕಲ್ಪನೆಯನ್ನು ಹೇಗೆ ವರ್ಣಿಸಿದ್ದಾರೆ?

(ಗ್ರಹಿಕೆ-ಸಾಧಾರಣ) ಜೂನ್-2023, ಏಪ್ರಿಲ್-2024

**18** .ವೇಷ ಆಚರಣೆಯ ಬಗ್ಗೆ ಸಿದ್ದರಾಮರ ಚಿಂತನೆಯನ್ನು ತಿಳಿಸಿ?

(ಗ್ರಹಿಕೆ-ಸಾಧಾರಣ) ಆಗಸ್ಟ್ -2024

**IV ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ.:-**

19 "ಶಿರವೇ ಹೊನ್ನ ಕಳಸವಯ್ಯ" (ಅಭಿವ್ಯಕ್ತಿ-ಸಾಧಾರಣ)

20 "ವೇಷ ಧರಿಸಿ ಫಲವೇನಯ್ಯ " (ಅಭಿವ್ಯಕ್ತಿ-ಸಾಧಾರಣ) ಏಪ್ರಿಲ್-2025

21 "ಬೆಟ್ಟದ ಮೇಲೊಂದು ಮನೆಯಮಾಡಿ ಮೃಗಗಳಿಗೆಂಜಿದೊಡೆಂತಯ್ಯಾ"

**V ಕೆಳಗಿನ ಪದ್ಯಭಾಗವನ್ನು ಓದಿಕೊಂಡು , ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ:- ( ಪ್ರಶಂಸೆ- ಕಠಿಣ) ಜೂನ್-2024/ಮೇ-2025**

**22.** ವೇಷಧರಿಸಿ ಫಲವೇನಯ್ಯ
ವೇಷದಂತಾಚರಣೆ ಇಲ್ಲದನ್ನಕ್ಕ
ವೇದಾಂತವನೋದಿ ಫಲವೇನಯ್ಯ
ಬ್ರಹ್ಮ ತಾನಾಗದನ್ನಕ್ಕ
ನಾನಾ ಕೆರೆಯ ತೋಡಿ ಫಲವೇನಯ್ಯ
ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ (ಅಭಿವ್ಯಕ್ತಿ-ಸಾಧಾರಣ)

**VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ , ಲಕ್ಷಣ ಬರೆದು ಸಮನ್ವಯಗೊಳಿಸಿ ಬರೆಯಿರಿ:- ( ಗ್ರಹಿಕೆ-ಸಾಧಾರಣ)**

**23.** ಎನ್ನ ಕಾಲೇ ಕಂಬ

**24.** ದೇಹವೇ ದೇಗುಲ

**VII ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ .**

**25.** ಉಳ್ಳವರು ಶಿವಾಲಯವ ಮಾಡುವರು! (ಸ್ಮರಣೆ -ಸುಲಭ ) ಜುಲೈ-2025

________________________________

________________________________

________________________________

________________________________

ಸ್ಥಾವಕ್ಕಳಿವುಂಟು , ಜಂಗಮಕ್ಕಳಿವಿಲ್ಲ!

**ಅಥವಾ**

ಬೆಟ್ಟದ ಮೇಲೊಂದು ಮನೆಯ ಮಾಡಿ

________________________________

________________________________

________________________________

________________________________

ಬಂದಡೆ ಮನದಲ್ಲಿ ಕೋಪದ ತಾಳದೆ ಸಮಾಧಾನಿಯಾಗಿರಬೇಕು.

**VIII ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ:- (ಅಭಿವ್ಯಕ್ತಿ-ಕರಿಣ)**

**26 ಬಾ**ಹ್ಯ ಹಾಗೂ ಆಂತರಿಕ ನಡವಳಿಕೆಗಳಲ್ಲಿ ಸಾಮ್ಯತೆ ಇರಬೇಕೆಂದು ಸಿದ್ಧರಾಮನು ತನ್ನ ವಚನಗಳಲ್ಲಿ ಹೇಗೆ ಪ್ರತಿಪಾದಿಸಿದ್ದಾಪನೆ?

**27** ಅಕ್ಕಮಹಾದೇವಿ ತನ್ನ ಬದುಕು ಫಲದಾಯಕವಾಗುವುದನ್ನು ಯಾವ ?

ನಿದರ್ಶನಗಳೊಂದಿಗೆ ಸಮರ್ಥಿಸುತ್ತಾಳೆ?

## ಪದ್ಯ ಭಾಗ: 7 ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| **ಪದ್ಯ:** ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ | **ಸ್ಮರಣೆ** | **ಗ್ರಹಿಕೆ** | **ಅಭಿವ್ಯಕ್ತಿ** | **ಪ್ರಶಂಸೆ** | **ಒಟ್ಟು** |
|---|---|---|---|---|---|
| ಪ್ರಶ್ನೆಗಳು | 17 | 08 | 05 | 01 | 31 |
| ಅಂಕಗಳು | 22 | 20 | 16 | 04 | 62 |

**ಪ್ರಶ್ನಾನುಸಾರ ಪ್ರಾಮುಖ್ಯತೆ:**

| **ಕ್ರ ಸಂ** | **ಪ್ರಶ್ನೆಯ ಸ್ವರೂಪ** | **ಪ್ರಶ್ನೆಗಳು** | **ಅಂಕಗಳು** |
|---|---|---|---|
| 1 | ವಸ್ತು ನಿಷ್ಟ | 10 | 10 |
| 2 | ಕಿರು ಉತ್ತರ 1 ( 1 ಅಂಕದ ಪ್ರಶ್ನೆ) | 05 | 05 |
| 3 | ಕಿರು ಉತ್ತರ 2 ( 2 ಅಂಕದ ಪ್ರಶ್ನೆ) | 04 | 08 |
| 4 | ದೀರ್ಘ ಉತ್ತರ 1 ( 3 ಅಂಕದ ಪ್ರಶ್ನೆ) | 09 | 27 |
| 5 | ದೀರ್ಘ ಉತ್ತರ 2 ( 4 ಅಂಕದ ಪ್ರಶ್ನೆ) | 03 | 12 |
| | ಒಟ್ಟು | 31 | 62 |

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**

**1.** ‘ಭೂಮಿ‘ ಈ ಪದದ ಸಮನಾರ್ಥಕ ಪದ . ( ಸ್ಮರಣೆ -ಸುಲಭ )

ಎ) ನೇಸರ ಬಿ) ಧರಣಿ

ಸಿ) ಶಶಿ ಡಿ) ಕಾನನ

**2.** 'ಪೊಡವಿ' ಪದದ ತತ್ಸಮ ರೂಪ . ( ಸ್ಮರಣೆ -ಸುಲಭ )

ಎ) ಅಡವಿ ಬಿ) ಮನವಿ

ಸಿ) ಪೃಥ್ವಿ ಡಿ) ಅಟವಿ

**3.** ಈ ಕೆಳಗಿನ ಪದಗಳಲ್ಲಿ ಬಹುವ್ರೀಹಿ ಸಮಾಸಕ್ಕೆ ಉದಾಹರಣೆ ( ಸ್ಮರಣೆ -ಸುಲಭ )

ಎ) ಅರಮನೆ ಬಿ) ನಿಟ್ಟೋಟ

ಸಿ) ವನಜಮುಖಿ ಡಿ) ಬಲಗಡಲು

**4.** ಪದ್ಯಗಳನ್ನು ಓದುವಾಗ ಅರ್ಥಕ್ಕನುಸಾರವಾಗಿ ಅನುಸರಿಸುವ ನುಲುಗಡೆಯನ್ನು ಹೀಗೆನ್ನುವರು. . ( ಸ್ಮರಣೆ -ಸುಲಭ )

ಎ)ಯತಿ ಬಿ) ವಿರಾಮ

ಸಿ) ಗಣ ಡಿ) ಪ್ರಾಸ

**5.**' ಅರ್ಜುನ' ಈ ಪದದಲ್ಲಿರುವ ಮಾತ್ರೆಗಳ ಸಂಖ್ಯೆ. ( ಸ್ಮರಣೆ -ಸುಲಭ )

ಎ) ಮೂರು ಬಿ) ಆರು

ಸಿ) ನಾಲ್ಕು ಡಿ) ಎರಡು.

**6.** ಭಾಮಿನಿ ಷಟ್ಪದಿಯಲ್ಲಿರುವ ಸಾಲುಗಳ ಸಂಖ್ಯೆ. ( ಸ್ಮರಣೆ -ಸುಲಭ )

ಎ) ನಾಲ್ಕು ಬಿ) ಆರು

ಸಿ) ಎಂಟು ಡಿ) ಮೂರು.

**7.** ಒಂದು ಮಾತ್ರಾಕಾಲದಲ್ಲಿ ಉಚ್ಚಾರ ಮಾಡಲಾಗುವ ಅಕ್ಷರಗಳನ್ನು ಹೀಗೆನ್ನುವರು. ( ಸ್ಮರಣೆ -ಸುಲಭ )

ಎ)ಯತಿ ಬಿ) ಗಣ

ಸಿ)ಗುರು ಡಿ) ಲಘು.

**8.** ಆರು ಸಾಲುಗಳ ಪದ್ಯರಚನೆಯನ್ನು ಹೀಗೆನ್ನುವರು. ( ಸ್ಮರಣೆ -ಸುಲಭ )

ಎ)ತ್ರಿಪದಿ ಬಿ)ಚೌಪದಿ

ಸಿ) ಷಟ್ಪದಿ ಡಿ) ದ್ವಿಪದಿ.

**9.** ಮೋಹರ ಪದದ ಅರ್ಥ. ( ಸ್ಮರಣೆ -ಸುಲಭ )

ಎ)ಸೈನ್ಯ ಬಿ) ಆಸೆ

ಸಿ) ಮನಸ್ಸು ಡಿ)ಒಡಲು.

**10.** ಅದ್ಭುತ ಪದದ ತದ್ಭವ ರೂಪ. ( ಸ್ಮರಣೆ -ಸುಲಭ )

ಎ) ಅತ್ಯಂತ ಬಿ) ಅಭೂತ

ಸಿ) ಅನಂತ ಡಿ) ಅದುಬುತ.

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

**11.** ಕೌರವರ ಸೇನೆಯು ಉತ್ತಯರನಿಗೆ ಹೇಗೆ ಕಾಣಿಸಿತು? (ಸ್ಮರಣೆ-ಸಾಧಾರಣ)

**12**. ಉತ್ತರನು ನಿಟ್ಟೋಟದಲ್ಲಿ ಒಡಿದ್ದು ಏಕೆ? (ಸ್ಮರಣೆ-ಸಾಧಾರಣ)

**13.** ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ? (ಸ್ಮರಣೆ-ಸಾಧಾರಣ)

**14**. ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾರೆ? (ಸ್ಮರಣೆ-ಸಾಧಾರಣ)

**15**. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ? (ಸ್ಮರಣೆ-ಸಾಧಾರಣ)

**III ಈ ಕೆಳಗಿನ ಪ್ರಶ್ನೆಗಳಿಗೆ ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**16.** ಶತ್ರುಬಲಕೆ 'ನಮೋ' ಎಂದು ಉತ್ತರನು ಏಕೆ ಹೇಳಿದನು? (ಗ್ರಹಿಕೆ-ಸಾಧಾರಣ)

**17.** ಒಡಲು ಒಡೆವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು? (ಗ್ರಹಿಕೆ-ಸಾಧಾರಣ)

**18**. 'ಕಾದುನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು? (ಗ್ರಹಿಕೆ-ಸಾಧಾರಣ)

**19.** ಯುದ್ಧವನ್ನು ಮಾಡದೆಯೆ ಸುಖಪಡೆಯಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು? (ಗ್ರಹಿಕೆ-ಸಾಧಾರಣ)

**IV ಈ ಕವಿ/ ಸಾಹಿತಿಯ ಜನ್ಮಸ್ಥಳ , ಕಾಲ,ಕೃತಿ ಮತ್ತು ಬಿರುದು ,ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.**

**20.** ಕುಮಾರವ್ಯಾಸ (ಸ್ಮರಣೆ-ಸಾಧಾರಣ)

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳನ್ನು ಸಂದರ್ಭ ಮತ್ತು ಸ್ವಾರಸ್ಯವನ್ನು ವಿವರಿಸಿ**.

**21** "ಶಿವ ಶಿವ ಕಾದಿಗೆಲಿದೆವು" ( ಅಭಿವ್ಯಕ್ತಿ- ಸಾಧಾರಣ)

**22** .ನಿಟ್ಟೋಟದಲ್ಲಿ ಹಾಯ್ದನು ಬಿಟ್ಟ ಮಂಡೆಯಲಿ" ( ಅಭಿವ್ಯಕ್ತಿ- ಸಾಧಾರಣ)

**23**. "ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ" ( ಅಭಿವ್ಯಕ್ತಿ- ಸಾಧಾರಣ)

**24**. ಎಮ್ಮರ ಮನೆಯ ನಾರಿಯರೆ ಸಾಕು" ( ಅಭಿವ್ಯಕ್ತಿ- ಸಾಧಾರಣ)

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ, ಬರೆದು ಸಮನ್ವಯಗೊಳಿಸಿ.** (ಗ್ರಹಿಕೆ-ಸಾಧಾರಣ)

**25.** ಕೌರವನ ಸೇನೆಯು ಸಾಗರದಂತೆ ವಿಶಾಲವಾಗಿದೆ.

**26.** ವನಜಮುಖಿ.

**27**. ನಾಡನರಿ

**28.** ಬಲಗಡಲು

**VII ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** ( ಸ್ಮರಣೆ -ಸುಲಭ )

**29**. ಕಡೆಗೆ ಹಾಯುವು ಕಂಗಳೀ ಬಲ

______________________________

____________________________________

ಮೃಡನು ಶಿವ ಶಿವ ಕಾದಿಗೆಲಿದೆವು. ಬಲಕೆ ನಮೋಯೆಂದ

**ಅಥವಾ**

ಎಂದೊಡರ್ಜುನ ನಗುತ ರಥವನು.

ನೆಂದು ನಿಟ್ಟೋಟದಲ್ಲಿ ಹಾಯ್ದನು ಬಿಟ್ಟಮಂಡೆಯಲಿ

**VIII ಕೆಳಗಿನ ಪ್ರಶ್ನೆಗಳಿಗೆ ಎಂಟು- ಹತ್ತು ವಾಕ್ಯದಲ್ಲಿ  ಉತ್ತರಿಸಿ:- ( ಅಭಿವ್ಯಕ್ತಿ-ಕಠಿಣ)ಪ**

**30.** ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

**31.** ಅರ್ಜುನ ಮತ್ತು ಉತ್ತರನ ಗುಣ ಸ್ವಭಾವಗಳಲ್ಲಿ ಯಾವ ವ್ಯತ್ಯಾಸಗಳು ಕಂಡು ಬರುತ್ತದೆ?

## ಪೂರಕ ಓದು : 1  ಕಳ್ಳರ ಗುರು

## ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| **ಪೂರಕ ಓದು: ಕಳ್ಳರ ಗುರು** | **ಗ್ರಹಿಕೆ** | **ಒಟ್ಟು** |
|---|---|---|
| ಪ್ರಶ್ನೆಗಳು | 08 | 08 |
| ಅಂಕಗಳು | 16 | 16 |

**I.. ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು ?
   (ಗ್ರಹಿಕೆ- ಸಾಧಾರಣ)  ಏಪ್ರಿಲ್-2025
2. ವೈದ್ಯರ ಮನೆಯಿಂದ ಕಳುವಾದ  ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ?
   (ಗ್ರಹಿಕೆ- ಸಾಧಾರಣ)  ಜೂನ್ -2020
3. ಕಳ್ಳರ ಗುರುವಿನ ಮನಃ ಪರಿವರ್ತನೆ ಹೇಗಾಯಿತು ?  (ಗ್ರಹಿಕೆ- ಸಾಧಾರಣ)
4. ಕಳ್ಳರಗುರು ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರಗಳೇನು ?
   (ಗ್ರಹಿಕೆ- ಸಾಧಾರಣ)
5. ವೈದ್ಯರು ತನ್ನ ವೃತ್ತಿಯ ಕುರಿತು ಹೆಂಡತಿ ರತ್ನಳಿಗೆ ಏನು ಹೇಳಿದರು ?
   (ಗ್ರಹಿಕೆ- ಸಾಧಾರಣ)  ಜೂನ್-2022
6. ಭೀಮನಾಯಕನು ವೈದ್ಯರಿಗೆ ಕೃತಜ್ಞತೆಗಳನ್ನು ಸಲ್ಲಿಸಿದ ಬಗೆಯನ್ನು ವಿವರಿಸಿ ?
   (ಗ್ರಹಿಕೆ- ಸಾಧಾರಣ)  ಜೂನ್-2023
7. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು ?
   (ಗ್ರಹಿಕೆ- ಸಾಧಾರಣ)  ಮಾರ್ಚ್-2022
8. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ಏನೆಂದು ಹೇಳಿದನು?

## ಪೂರಕ ಓದು : 2  ಹೊಂಗೆ ಬೇವುಗಳ ಹಾಡು

## ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| **ಪೂರಕ ಓದು: ಹೊಂಗೆ ಬೇವುಗಳ ಹಾಡು** | **ಗ್ರಹಿಕೆ** | **ಒಟ್ಟು** |
|---|---|---|
| ಪ್ರಶ್ನೆಗಳು | 05 | 05 |
| ಅಂಕಗಳು | 10 | 10 |

**I.. ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಬದುಕ ಬದುವ ಬೇಲಿಯಲ್ಲಿ ಏನೇನು ಇದೆ ?

   (ಗ್ರಹಿಕೆ- ಸಾಧಾರಣ)
2. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ  ನೆನಪುಗಳಿವೆ?

   (ಗ್ರಹಿಕೆ- ಸಾಧಾರಣ) ಏಪ್ರಿಲ್-2023/ ಆಗಸ್ಟ-2024
3. ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ?

   (ಗ್ರಹಿಕೆ- ಸಾಧಾರಣ) ಜೂನ್-2020/ಮೇ-2025
4. ಮನುಕುಲದ  ಭವ್ಯ ಬದುಕು ಯಾವ ರೀತಿ ಅರಳಬೇಕಿದೆ  ?

   (ಗ್ರಹಿಕೆ- ಸಾಧಾರಣ) ಜೂನ್-2024/ಜುಲೈ-2025
5. ನಾಳಿನ ಚಿನ್ನದಂಥ ಬೆಳಕಿದೆ ಎಂದು ಕವಯಿತ್ರಿ ಯಾವ ರೀತಿ  ಹೇಳಿದ್ದಾರೆ?

   (ಗ್ರಹಿಕೆ- ಸಾಧಾರಣ)

## ಪೂರಕ ಓದು : 3 ಕನ್ನಡ ನಾಡು -ನುಡಿ-ಜನ

## ಉದ್ದಿಷ್ಟಾನು ಸಾರ ಪ್ರಾಮುಖ್ಯತೆ:

| **ಪೂರಕ ಓದು: ಕನ್ನಡ ನಾಡು - ನುಡಿ-ಜನ** | **ಗ್ರಹಿಕೆ** | **ಒಟ್ಟು** |
|---|---|---|
| ಪ್ರಶ್ನೆಗಳು | 03 | 03 |
| ಅಂಕಗಳು | 06 | 06 |

### I . ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1. ಕವಿಯ ಅಭಿವ್ಯಕ್ತಿಯಲ್ಲಿ ಕನ್ನಡ ನಾಡಿನ ವಿಸ್ತಾರವೇನು?
   (ಗ್ರಹಿಕೆ- ಸಾಧಾರಣ) ಮೇ-2025
2. ತಿರುಳ್ ಕನ್ನಡ ನಾಡು ಯಾವುದು ? (ಗ್ರಹಿಕೆ- ಸಾಧಾರಣ)
3. ಕನ್ನಡಿಗರ ಕಾವ್ಯ ರಚನಾ ಶೈಲಿಯನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?
   (ಗ್ರಹಿಕೆ- ಸಾಧಾರಣ) ಆಗಸ್ಟ್-2024/ಏಪ್ರಿಲ್-2025

## ಪೂರಕ ಓದು : 4   ಪಂಪಾ ತೀರದ ಪುಷ್ಪಗಳು

### ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

| **ಪೂರಕ ಓದು: ಪಂಪಾತೀರದ ಪುಷ್ಪಗಳು** | **ಗ್ರಹಿಕೆ** | **ಒಟ್ಟು** |
|---|---|---|
| ಪ್ರಶ್ನೆಗಳು | 04 | 04 |
| ಅಂಕಗಳು | 08 | 08 |

**I.. ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಮಾನವೀಯ ಸಂಸ್ಕೃತಿಯಲ್ಲಿ  ಹೂವು ಯಾವುದರ ಪ್ರತೀಕವಾಗಿದೆ ?
   (ಗ್ರಹಿಕೆ- ಸಾಧಾರಣ)  ಏಪ್ರಿಲ್2024
2. ಶಂಕರಾಚಾರ್ಯರ ಶಿಷ್ಯನು ಪದ್ಮಪಾದಾಚಾರ್ಯನೆಂದು ಹೆಸರಾದ ಪ್ರಸಂಗವನ್ನು ವಿವರಿಸಿ.   (ಗ್ರಹಿಕೆ- ಸಾಧಾರಣ)  ಜುಲೈ-2025
3. ವಾಲ್ಮೀಕಿಯು ಹೂಗಳ ಹುಟ್ಟನ್ನು ಹೇಗೆ ಬಣ್ಣಿಸಿದ್ದಾರೆ  ?   (ಗ್ರಹಿಕೆ- ಸಾಧಾರಣ)
4. ಪಂಪಾ ತೀರದ ಪುಷ್ಪಗಳು ಯಾವುವು ?  (ಗ್ರಹಿಕೆ- ಸಾಧಾರಣ)

## ಗದ್ಯ ಭಾಗ-1 ಒಣಮರದ ಗಿಳಿ

## :ಮಾದರಿ ಉತ್ತರಗಳು:

**I ಬಹು- ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1ಅಂಕ):**

**1**. (ಡಿ) 25

**2**. (ಬಿ) 10

**3**. (ಡಿ) 09

**4**. (ಸಿ) ಙ, ಞ, ಣ, ನ, ಮ

**5.** (ಬಿ) ಐ, ಔ

**6**. (ಎ) ಅಂ, ಅಃ

**7.** (ಸಿ) ಯೋಗವಾಹಗಳು

**8.** (ಎ) ಬಾಣ+ಅನ್ನು

**9**. (ಬಿ) ಗುಣಿತಾಕ್ಷರ

**10**. (ಬಿ) ಅಕ್ಷರ

**11.** (ಸಿ) ಲೋಪಸಂಧಿ

**12.** (ಎ) ಹೂಬುಟ್ಟಿ

**13.** (ಎ) ರಾಜ

**14.** (ಸಿ) 49

**15**. (ಬಿ) ಹ್ರಸ್ವಸ್ವರ

**16**. (ಬಿ) ಬೆಟ್ಟ

**17**. (ಎ) ಆಗಮ ಸಂಧಿ

**18.** (ಸಿ) ಕನ್ನಡ

**19.** (ಬಿ) ವಿಷ

**20**. (ಬಿ) ಇ, ಉ, ಋ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**21.** ಬೇಡನು ಪ್ರಾಣಿಗಳನ್ನು ಕೊಲ್ಲಲು ವಿಷ ಸವರಿದ ಬಾಣಗಳನ್ನುಸಿದ್ಧಮಾಡಿಕೊಳ್ಳುತ್ತಿದ್ದನು.

**22.** ವಿಷದ ಬಾಣವು ಜಿಂಕೆ ತಪ್ಪಿಸಿಕೊಂಡಿದ್ದರಿಂದ ಮರಕ್ಕೆ ತಗುಲಿತು.

**23.** ವಿಷದ ಬಾಣವು ಮರಕ್ಕೆ ತಗುಲಿದ್ದರಿಂದ ಮರವು ಒಣಗಿ ನಿಂತಿತು.

**24.** ಮರ ಒಣಗಿ ನಿಂತರೂ ಗಿಳಿ ಮರದ ಪೊಟರೆಯನ್ನು ಬಿಟ್ಟು ಹೋಗಲಿಲ್ಲ. ಅದಕ್ಕಾಗಿ ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು.

**25.** ಗಿಳಿಯ ತತ್ವನಿಷ್ಠೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು**.**

**26.** ಬೇಡನು ಜಿಂಕೆಯ ಬೆನ್ನಟ್ಟಿದನು.

**27**. ಬೇಡನು ಕಾಶಿ ಊರಲ್ಲಿ ವಾಸವಾಗಿದ್ದನು.

**28**. ಉಪಕಾರ ಸ್ಮರಣೆಯನ್ನು ಕಂಡು ಇಂದ್ರನಿಗೆ ಸಂತೋಷವಾಯಿತು.

**III ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು):**

**29**. "ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ, ಹಸಿರು ಬಣ್ಣದಿಂದ ಮುದ ನೀಡಿದೆ, ನೆರಳು ನೀಡಿದೆ. ಆದರೆ ಈಗ ದುರಾದೃಷ್ಟದಿಂದ ರೋಗ ಬಂದಿದೆ. ಈ ಸ್ಥಿತಿಯಲ್ಲಿ ಅದನ್ನು ಬಿಟ್ಟು ಹೋಗಬಾರದೆಂದು ನಿರ್ಧರಿಸಿದ್ದೇನೆ".

**30**. ಈ ಲೋಕದ ಈಗಿನ ಸನ್ನಿವೇಷದಲ್ಲಿ ಯಾರೇ ಆಗಿರಲಿ ಸುಖ-ಸಂಪತ್ತಿನ ಕಾಲದಲ್ಲಿ ಜೊತೆಗಿರುತ್ತಾರೆ. ದುರ್ಬರ ಘಳಿಗೆಯಲ್ಲಿ ಜೊತೆಯಲ್ಲಿರದೆ, ಬಿಟ್ಟು ಹೋಗುತ್ತಾರೆ. ಇದು ಸಾಮಾನ್ಯವಾದ ಲೋಕ ವರ್ತನೆಯಾಗಿದೆ.

**31**. "ದೇವರಾಜ, ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸಿರಿನಿಂದ ನಳನಳಿಸುವ, ಫಲ-ಪುಷ್ಪ, ಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸು! ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ ಎಂದು ಗಿಳಿಯು ಇಂದ್ರನನ್ನು ವರ ಕೇಳಿತು".

**32**. ಇಂದ್ರನಿಗೆ ಗಿಳಿಯನ್ನು ಕಂಡು ತುಂಬಾ ಸಂತೋಷವಾಯಿತು. ಗಿಳಿಯ ನಡತೆ ಕೂಡ ಸಾಮಾನ್ಯವಾದ ಲೋಕ ವರ್ತನೆಗೆ ವಿರುದ್ಧವಾಗಿದೆ ಎಂದುಕೊಂಡ. ಆ ಗಿಳಿಯ ತತ್ವ ನಿಷ್ಠೆಯನ್ನು ಮೆಚ್ಚಿಕೊಂಡ ಮನುಷ್ಯನ ಆದರ್ಶ ಬದುಕಿಗೆ ಈ ಸೂತ್ರ ಮಾದರಿಯಾಗಬಲ್ಲದು ಎಂದುಕೊಂಡ. ಹೀಗೆ ಪರಹಿತಾಕಾಂಕ್ಷಿಯಾಗಿರುವ ಗಿಳಿರಾಯನಿಗೆ ಏನಾದರೂ ವರವನ್ನು ಕೊಡಬೇಕು ಎಂದು ತೀರ್ಮಾನಿಸಿದ. ಅದರ ಶ್ರದ್ಧೆಯನ್ನು ಮೆಚ್ಚಿ "ಏನಾದರೂ ವರವನ್ನು ಕೇಳು ಕೊಡುತ್ತೇನೆ" ಎಂದು ಹೇಳುತ್ತಾ, ತನಗಾದ ಸಂತೋಷವನ್ನು ಪ್ರಕಟಿಸಿದನು.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ
ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ
ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ
**ಒಟ್ಟು 3 ಅಂಕಗಳು**

**33. ಅ.ರಾ ಮಿತ್ರ**ರವರು 1935 ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು ಎಂಬಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳು ರಾಮಣ್ಣ ಮಿತ್ರ. ಇವರು ಆರತಕ್ಷತೆ ಮತ್ತು ಇತರ ಪ್ರಬಂಧಗಳು, ನಾನೇಕೆ ಕೊರೆಯುತ್ತೇನೆ ಮತ್ತು ಇತರ ಪ್ರಬಂಧಗಳು, ಛಂದೋ ಮಿತ್ರ, ಕನ್ನಡ ಮೇಘದೂತ, ಮಹಾಭಾರತ ಪಾತ್ರ ಸಂಗತಿಗಳು, ವಚನಕಾರರು ಮತ್ತು ಶಬ್ದಕಲ್ಪ, ಒಳನೋಟಗಳು, ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, ಗೊರೂರು ಸಾಹಿತ್ಯ ಪ್ರಶಸ್ತಿ ಹಾಗೂ ಧರ್ಮಶ್ರೀ ನಗೆರಾಜ ಪ್ರಶಸ್ತಿಗಳು ಲಭಿಸಿವೆ.

**V ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು:**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ
ಸಂದರ್ಭದ ವಿವರಣೆ 1 ಅಂಕ
ಸ್ವಾರಸ್ಯ ಮತ್ತು ಶೈಲಿ 1 ಅಂಕ
**ಒಟ್ಟು 3 ಅಂಕಗಳು**

**34. “ಇಂಥ ಒಣ ಮರದಲ್ಲಿ ಏಕೆ ವಾಸಮಾಡುತ್ತಿದೀಯಾ? ”.**

**ಆಯ್ಕೆ :** ಈ ವಾಕ್ಯವನ್ನು ಅ.ರಾ ಮಿತ್ರ ಬರೆದಿರುವ 'ಮಹಾಭಾರತ ಪಾತ್ರ ಸಂಗತಿಗಳು' ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಈ ಮಾತನ್ನು ಇಂದ್ರನು ಗಿಳಿಗೆ ಹೇಳಿದನು. ಒಣಮರದಲ್ಲಿ ವಾಸವಾಗಿದ್ದ ಗಿಳಿಯ ತತ್ವನಿಷ್ಟೆಯನ್ನು ಕಂಡ ಇಂದ್ರನು ಏನಾದರು ವರವನ್ನು ಕೊಡಬೇಕೆಂದು ಯೋಚಿಸಿ ಗಿಳಿಯನ್ನು ಪ್ರಶ್ನಿಸುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಫಲ, ಪುಷ್ಪವಿರದ ಹಸಿರಿನ ಸಮೃದ್ಧಿಯಿಂದ ಒಣಮರದಲ್ಲಿ ಗಿಳಿಯು ವಾಸವಾಗಿರುವುದು ಇಲ್ಲಿ ಸ್ವಾರಸ್ಯವಾಗಿದೆ.

**35**. **"ಏನಾದರೂ ವರವನ್ನು ಕೇಳು ಕೊಡುತ್ತೇನೆ”.**

**ಆಯ್ಕೆ** : ಈ ವಾಕ್ಯವನ್ನು ಅ.ರಾ ಮಿತ್ರ ಬರೆದಿರುವ 'ಮಹಾಭಾರತ ಪಾತ್ರ ಸಂಗತಿಗಳು' ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಈ ಮಾತನ್ನು ಇಂದ್ರನು ಗಿಳಿಗೆ ಹೇಳಿದನು. ಒಣಮರದಲ್ಲಿ ವಾಸವಾಗಿದ್ದ ಗಿಳಿಯನ್ನು, ಅದರ ತತ್ವನಿಷ್ಠೆಯನ್ನು ಮೆಚ್ಚಿದ ಇಂದ್ರನು ಗಿಳಿಗೆ ಸಹಾಯ ಮಾಡಬೇಕೆಂದು ಯೋಚಿಸಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಇಂದ್ರನ ಮೆಚ್ಚುಗೆಯ ಮಾತುಗಳು ಹಾಗೂ ಗಿಳಿಯ ಪರಹಿತಾಕಾಂಕ್ಷೆಯ ಗುಣ ಇಲ್ಲಿ ಸ್ವಾರಸ್ಯವಾಗಿದೆ.

**36. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ".**

**ಆಯ್ಕೆ** : ಈ ವಾಕ್ಯವನ್ನು ಅ.ರಾ ಮಿತ್ರ ಬರೆದಿರುವ 'ಮಹಾಭಾರತ ಪಾತ್ರ ಸಂಗತಿಗಳು' ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ

**ಸಂದರ್ಭ :** ಈ ಮಾತನ್ನು ಗಿಳಿಯು ಇಂದ್ರನಿಗೆ ಹೇಳಿತು. ಇಂದ್ರನು ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿ ಏನಾದರೂ ವರವನ್ನು ಕೇಳು ಎಂದಾಗ ಗಿಳಿಯು ಮರದ ಪರಿಸ್ಥಿಗೆ ಮರುಗಿ, ಅದನ್ನು ಮೊದಲಿನಂತೆ ಮಾಡು ಎಂದು ಇಂದ್ರನಿಗೆ ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಗಿಳಿಯಲ್ಲಿನ ತತ್ವನಿಷ್ಟೆ ಹಾಗೂ ಪರಹಿತಾಕಾಂಕ್ಷೆಯ ಗುಣ ಇಲ್ಲಿಯ ಸ್ವಾರಸ್ಯವಾಗಿದೆ.

**37. "ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು".**

**ಆಯ್ಕೆ** : ಈ ವಾಕ್ಯವನ್ನು ಅ.ರಾ ಮಿತ್ರ ಬರೆದಿರುವ 'ಮಹಾಭಾರತ ಪಾತ್ರ ಸಂಗತಿಗಳು' ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಈ ಮಾತನ್ನು ಗಿಳಿಯು ಇಂದ್ರನಿಗೆ ಹೇಳಿತು. ಸುಖ-ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು, ದುರ್ಭರ ಗಳಿಗೆಯಲ್ಲಿ ಕೂಡ ಅವರ ಜೊತೆಗೇ ಇದ್ದು, ಉಪಕಾರ ಸ್ಮರಣೆ ಮಾಡಬೇಕು. ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ತಾವು ಒಬ್ಬರೇ ಚೆನ್ನಾಗಿರುವುದಲ್ಲದೆ ತನ್ನ ಜೊತೆಗಿರುವವರು ಚೆನ್ನಾಗಿರಬೇಕು ಎಂಬ ಉಪಕಾರ ಸ್ಮರಣೆ ಇಲ್ಲಿ ಸ್ವಾರಸ್ಯವಾಗಿದೆ.

**38. "ಹಲವಾರು ವರ್ಷದಿಂದ ಈ ಮರ ಆಶ್ರಯ ಕೊಟ್ಟಿದೆ".**

**ಆಯ್ಕೆ** : ಈ ವಾಕ್ಯವನ್ನು ಅ.ರಾ ಮಿತ್ರ ಬರೆದಿರುವ 'ಮಹಾಭಾರತ ಪಾತ್ರ ಸಂಗತಿಗಳು' ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಗಿಳಿಯು ಇಂದ್ರನ ಕುರಿತು ಹೇಳುವ ಮಾತು. ಈ ಮರವು ತನ್ನ ಹಸಿರು

ಬಣ್ಣದಿಂದ ನನ್ನ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ, ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಈ ಸ್ಥಿತಿಯಲ್ಲಿ ನಾನು ಈ ಮರವನ್ನು ಕೈಬಿಟ್ಟು ಬೇರೆ ಕಡೆಗೆ ಹೋಗಿ ಮರಕ್ಕೆ ಕೃತಘ್ನನಾಗಲೆ ಎಂದು ಹೇಳುತ್ತದೆ.

**ಸ್ವಾರಸ್ಯ :** ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ದುರ್ಭರ ಗಳಿಗೆಯಲ್ಲಿ ಕೂಡ ಅವರ ಜೊತೆಗೇ ಇದ್ದು ಉಪಕಾರ ಸ್ಮರಣೆ ಮಾಡಬೇಕೆಂಬುದು ಇಲ್ಲಿಯ ಸ್ವಾರಸ್ಯವಾಗಿದೆ.

**VI ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು:**

ಅಂಶಗಳನ್ನಾಧರಿಸಿ ಪರ್ಯಾಂಶಕ್ಕೆ 3 ಅಂಕಗಳು

ಭಾಷಾಶೈಲಿಗೆ, ಪದಬಂಧಗಳಿಗೆ 1 ಅಂಕ

**ಒಟ್ಟು 4 ಅಂಕಗಳು**

**39.** ಗಿಳಿಯು ಹಲವಾರು ವರ್ಷಗಳಿಂದ ಆ ಮರದಲ್ಲೇ ವಾಸ ಮಾಡುತ್ತಿತ್ತು. ಕ್ರಮೇಣ ಆ ಮರಕ್ಕೆ ರೋಗ-ರುಜಿನಗಳು ಬಂದು ಮರವು ಒಣಗಿದರೂ ಅದರ ಆಶ್ರಯವನ್ನು ತೊರೆದು ಹೋಗಲಿಲ್ಲ. ಜೊತೆಯಲ್ಲಿ ಇದ್ದು ಒಳ್ಳೆಯ ದಿನ ಬರಲಿ ಎಂದು ಹಾರೈಸತೊಡಗಿತು. ಅದರ ತತ್ವನಿಷ್ಠೆಯನ್ನು ಮೆಚ್ಚಿಕೊಂಡ ಇಂದ್ರನು "ಏನಾದರೂ ವರವನ್ನು ಕೇಳು" ಎಂದಾಗ ಮರ ಗಿಳಿಯು ಮರವು ಮೊದಲಿನಂತೆ ಫಲಪುಷ್ಪದಿಂದ ಹಸಿರಿನಿಂದ ಕೂಡಿ ನೆರಳನ್ನು ಕೊಡುವಂತೆ ದಯಪಾಲಿಸು ಎಂದು ಕೇಳಿತು. ನನಗೆ ಮರದ ಈಗಿನ ಸ್ಥಿತಿಯನ್ನು ನೋಡಲು ಆಗುವುದಿಲ್ಲ ಎಂದಿತು. ಗಿಳಿಯು ಎಂಥ ಜನ್ಮವನ್ನು ಬಯಸಿದ್ದರೂ ಎಂಥ ಭೋಗವನ್ನು ಬಯಸಿದ್ದರೂ ಇಂದ್ರನು ಕೊಡಲು ಸಿದ್ದನಾಗಿದ್ದ. ಆದರೆ ಗಿಳಿ ಕೇಳಿದ ವರವು ಸ್ವಾರ್ಥರಹಿತವಾಗಿತ್ತು. ಅದು ನರಲೋಕವರ್ತನೆಗೆ ವಿರುದ್ದವಾಗಿರುವುದರಿಂದ ಗಿಳಿ ಪರಹಿತಾಕಾಂಕ್ಷಿ ಎನಿಸಿಕೊಂಡಿದೆ.

**40.** ಗಿಳಿಯು ಮರ ಒಣಗಿ ನಿಂತರೂ ಆ ಮರದಲ್ಲೇ ವಾಸ ಮಾಡುತ್ತಿತ್ತು. ಹಾಗೆ ನಾವು ಸುಖ ಸಂಪತ್ತಿನ ಕಾಲದಲ್ಲಿ ಜೊತೆಗೆ ಇದ್ದು ದುರ್ಬರ ಗಳಿಗೆಯಲ್ಲೂ ಜೊತೆಯಲ್ಲೇ ಇರಬೇಕೆಂಬ ಗಿಳಿಯ ವರ್ತನೆಯು ನಮಗೆ ಕೃತಜ್ಞತೆಯನ್ನು ಕಲಿಸುತ್ತದೆ. ಕಷ್ಟದಲ್ಲಿರುವವರಿಗೆ ಜೊತೆಯಾಗಿದ್ದು ಸ್ವಾರ್ಥವನ್ನು ಬಿಡಬೇಕು ಬೇರೆಯವರ ಒಳಿತನ್ನು ಬಯಸುವುದು ಮಾನವನ ಕರ್ತವ್ಯ. ಅದರಿಂದ ನಮ್ಮ ಜೀವನದಲ್ಲಿ ಸುಖ ಸಂತೋಷಗಳು ಬರುತ್ತವೆ ಎಂಬುದನ್ನು ತಿಳಿಯಬಹುದು. ಸುಖ ಸಂಪತ್ತಿನ ಕಾಲದಲ್ಲಿ ಜೊತೆಯಲ್ಲಿ ಇದ್ದವರು ಕಷ್ಟಕಾಲದಲ್ಲೂ ಕೂಡ ಅವರ ಜೊತೆಗೇ ಇದ್ದು ಉಪಕಾರ ಸ್ಮರಣೆಯನ್ನು ಮಾಡಬೇಕು ಎಂಬ ಗುಣಗಳನ್ನು ಗಿಳಿಯ ವರ್ತನೆಯಿಂದ ಮಾನವನು ಕಲಿಯಬೇಕು.

**VII ಪ್ರಬಂಧ ಬರವಣಿಗೆ:**

**41**. ಕ್ರೀಡೆಗಳ ಮಹತ್ವ

**42**. ರಾಷ್ಟ್ರೀಯ ಹಬ್ಬಗಳ ಮಹತ್ವ

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

## ಗದ್ಯಪಾಠ 2. ಅಸಿ-ಮಸಿ-ಕೃಷಿ

## :ಮಾದರಿ ಉತ್ತರಗಳು:

**1. ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿ ಉತ್ತರಕ್ಕೆ 1ಅಂಕ):**

**1**. (ಬಿ) ಯುದ್ಧ

**2.** (ಬಿ) ಕಜ್ಜ

**3**. (ಸಿ) ಜೋಡುನುಡಿ

**4.** (ಬಿ) ಜುದ್ದ

**5.** (ಸಿ) ಸವರ್ಣದೀರ್ಘಸಂಧಿ

**6.** (ಎ) ಚಿನ್ನೂಲ

**7.** (ಬಿ) ವೀರೇಶ

**8.** (ಸಿ) ಚಕ್ರ

**9.** (ಎ) ಅನಾವೃಷ್ಟಿ

**10**. (ಸಿ) ಏಕೈಕ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**11**. ದೇಶದ ಉದ್ಧಾರ ಅಸಿ ಮಸಿ ಕೃಷಿಯನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ.

**12**. ಅಸಿ-ಎಂದರೆ ಯುದ್ಧ, ಯುದ್ಧ ಎಂದರೆ ಸೈನಿಕರು, ಮಸಿ-ಎಂದರೆ ಸಾಹಿತ್ಯ ರಚನೆ.

**13**. ಕೃಷಿಕ (ರೈತ) ಈ ನಾಡಿನ ಬೆನ್ನೆಲುಬು.

**14**. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು 'ರಂಗ ಜಂಗಮ' ಎಂದು ಖ್ಯಾತರಾಗಿದ್ದಾರೆ.

**15**. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ 'ಪಾ ಹ್ಯಾರಿಸ್' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**16**. ಸರ್ವಜ್ಞ ಹೇಳಿರುವಂತೆ ಕೋಟಿ ವಿದ್ಯೆಗಳಿಗಿಂತ ಮಿಗಿಲಾದುದು ಮೇಟಿ ವಿದ್ಯೆ.

**17**. ಅಸಿ, ಮಸಿಗಿಂತ ಮಹತ್ವವಾದುದು ಕೃಷಿ.

**18**. ಕೃಷಿ ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಪಂಡಿತಾರಾಧ್ಯ ಶಿವಾಚಾರ್ಯರು ಹೇಳುತ್ತಾರೆ.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು):**

**19**. ಸೈನಿಕರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಟ

ದೇಶ ಎಲ್ಲರನ್ನೂ ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದ್ದರಿಂದಲೇ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲವಾಗಿರಬೇಕು.

**20**. ರೈತರು ಒಂದೆಡೆ ನಿಸರ್ಗದ ಜೊತೆ ಹೋರಾಟ ಮಾಡಬೇಕು, ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ, ಉತ್ತಮ ಬೀಜ ಸಿಗುವುದಿಲ್ಲ, ಭೂಮಿ ಬರಡಾಗುತ್ತದೆ, ಕ್ರಿಮಿ ಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎಂಬ ಮನಸ್ಥಿತಿ, ಜೊತೆಗೆ ಬೆಂಬಲ ಬೆಲೆ ಸಿಗದೆ ಇರುವುದು. ಇವೆಲ್ಲ ರೈತರು ಎದುರಿಸುತ್ತಿರುವ ಸಮಸ್ಯೆಗಳು.

**21**. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಯಾರೂ ಬದುಕಲು ಸಾಧ್ಯವಿಲ್ಲ. ಅಕ್ಕಿ, ರಾಗಿ, ಟಮೊಟೊ ಯಾವುದೇ ಆಹಾರಗಳನ್ನು ಕಾರ್ಖಾನೆಗಳಿಂದ ತಯಾರಿಸಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕು.

**22**. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳುವ ವಚನವೆಂದರೆ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯುಂ ರಾಟೆ ನಡೆದುದಲ್ಲದೆ ದೇಶದಾಟವೇ ಕೆಡಗುಂ" ಎಂದು ಹೇಳಿದ್ದಾರೆ.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**23. ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿ**ರವರು ಕ್ರಿಸ್ತಶಕ 1951ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಹೆಡಿಯಾಲ ಗ್ರಾಮದಲ್ಲಿ ಜನಿಸಿದರು. ಇವರು 'ಜೀವನ ದರ್ಶನ', ಕೈದೀವಿಗೆ, 'ಹುಟ್ಟು ಸಾವುಗಳ ಮಧ್ಯೆ', 'ಸಮಾಧಿಯ ಮೇಲೆ', 'ಕಾಯಕ ದಾಸೋಹ' 'ಅಂತರಂಗ ಬಹಿರಂಗ', 'ಸ್ವಾಮಿ ವಿವೇಕಾನಂದ', ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ನಾಟಕ ಅಕಾಡೆಮಿಯ 'ಗೌರವ ಫೆಲೋಷಿಪ್', 'ರಾಜ್ಯೋತ್ಸವ ಪ್ರಶಸ್ತಿ , 'ಗೌರವ ಡಾಕ್ಟರೇಟ್' ಹಾಗೂ 'ಪಾಲ್ ಹ್ಯಾರಿಸ್' ಪ್ರಶಸ್ತಿಗಳು ಲಭಿಸಿವೆ.

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ 1 ಅಂಕ

**ಒಟ್ಟು 3 ಅಂಕಗಳು**

**24 "ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು ".**

**ಆಯ್ಕೆ :** ಈ ವಾಕ್ಯವನ್ನು ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ-ಮಸಿ-ಕೃಷಿ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಲೇಖಕರು ಕೃಷಿಯ ಮಹತ್ವವನ್ನು ತಿಳಿಸುವಾಗ ಹೇಳುವ ಮಾತಾಗಿದೆ. ಒಂದು ವೇಳೆ ಕೃಷಿಕನು ಯಾವ ಬೆಳೆಯನ್ನು ಬೆಳೆಯದೆ ಕೈಕಟ್ಟಿ ಕುಳಿತರೆ ಈ ಜಗತ್ತಿಗೆ ಉಳಿಗಾಲವಿಲ್ಲ. ಜಗತ್ತಿನಲ್ಲಿ ವಿಜ್ಞಾನ , ತಂತ್ರಜ್ಞಾನ ಎಷ್ಟೇ ಬೆಳೆದಿದ್ದರೂ ಅಕ್ಕಿ, ರಾಗಿ ಬೆಳೆಯಲು ಸಾಧ್ಯವಿಲ್ಲ. ಆದ್ದರಿಂದ ಲೇಖಕರು ವ್ಯವಸಾಯವೇ ಮುಖ್ಯ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ವ್ಯವಸಾಯವೇ ಮುಖ್ಯ, ವ್ಯವಸಾಯವಿಲ್ಲದೆ ದೇಶ ಪ್ರಗತಿ ಹೊಂದಲು ಅಸಾಧ್ಯ ಎಂಬುದು ಇಲ್ಲಿ ಸ್ವಾರಸ್ಯವಾಗಿದೆ.

**25**. "**ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ**".

**ಆಯ್ಕೆ** : ಈ ವಾಕ್ಯವನ್ನು ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ವ್ಯಕ್ತಿತ್ವ'ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ-ಮಸಿ-ಕೃಷಿ ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಲೇಖಕರು ರೈತರು ಎಷ್ಟೇ ನೋವು-ನಲಿವುಗಳನ್ನು ಅನುಭವಿಸಿದರೂ ದೇಶಕ್ಕಾಗಿ ಭರವಸೆಯೊಂದಿಗೆ ಬಾಳುತ್ತಿದ್ದಾರೆ ಎಂದು ಹೇಳುವ ಮಾತು. ಇಂದಿನ ದಿನಗಳಲ್ಲಿ ರೈತರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಳೆಯ ಅಭಾವ ಇಲ್ಲವೇ ಅತಿವೃಷ್ಟಿ, ಭೂಮಿ ಬರಡಾಗುತ್ತಿರುವುದು, ಕಳಪೆ ಬೀಜಗಳು ಇತ್ಯಾದಿ. ಹೀಗಾಗಿ ಈ ಬದುಕೇ ನಶ್ವರ ಎನ್ನುವ ಭಾವನೆ ರೈತರಲ್ಲಿ ಬಂದಿದ್ದರೆ ಆಶ್ಚರ್ಯಪಡಬೇಕಾಗಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ರೈತರಿಗೆ ಸಮಸ್ಯೆಗಳು ಎಷ್ಟೇ ಇದ್ದರೂ ಆಶಾವಾದಿಗಳಾಗಿ ಬದುಕನ್ನು ಸಾಗಿಸುತ್ತಿದ್ದಾರೆ ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ.

**26. "ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ".**

**ಆಯ್ಕೆ** : ಈ ವಾಕ್ಯವನ್ನು ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ-ಮಸಿ-ಕೃಷಿ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ರೈತರು ಯಾರಿಗೂ ಮೋಸ, ವಂಚನೆ ಮಾಡದೆ ರೈತರೆ ಮೋಸ ವಂಚನೆಗೆ ಒಳಗಾಗುತ್ತಿದ್ದಾರೆ ಎಂದು ಲೇಖಕರು ಹೇಳುವ ಮಾತು. ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಮಧ್ಯವರ್ತಿಗಳಿಂದ ಅನ್ಯಾಯಕ್ಕೊಳಗಾದರೂ, ರೈತರು ಮತ್ತೊಬ್ಬರಿಗೆ ಮೋಸ ಮಾಡುವುದಿಲ್ಲ. ಇಂಥ ಕೃಷಿಕನಿಗೆ ಬೇಕಾದ ಸತ್ವವನ್ನು ಸಾಹಿತ್ಯದ ಮೂಲಕವಾದರೂ ಉತ್ಸಾಹ ತುಂಬುವ ಕಾರ್ಯವನ್ನು ನಮ್ಮ ಸಾಹಿತಿಗಳು ಮಾಡಬೇಕು ಎಂದು ಹೇಳುವ ಸಂದರ್ಭದಲ್ಲ ಈ ಮಾತು ಬಂದಿದೆ.

**ಸ್ವಾರಸ್ಯ:** ರೈತರ ಮುಗ್ಧತೆ ಹಾಗೂ ಅವರ ಪ್ರಾಮಾಣಿಕತೆಯ ವಿಶೇಷತೆಯನ್ನುಇಲ್ಲಿಕಾಣಬಹುದು.

**27. "ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ".**

**ಆಯ್ಕೆ :** ಈ ವಾಕ್ಯವನ್ನು ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಅಸಿ-ಮಸಿ-ಕೃಷಿ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಲೇಖಕರು ಸಾಹಿತಿಗಳ ಬಗ್ಗೆ ಇರುವ ಗೌರವವನ್ನು ಕುರಿತು ಹೇಳುತ್ತಾರೆ. ಬರವಣಿಗೆ ಹೆಚ್ಚು ಶಕ್ತಿಶಾಲಿಯಾದುದು. ಇವತ್ತು ಸಾಹಿತಿಗಳಿಗೆ ನಾಡಿನಲ್ಲಿ ಅಪಾರ ಗೌರವ ಇರುವುದು ಬಸವಾದಿ ಶಿವಶರಣರ ವಚನಗಳು, ದಾಸರ ಕೀರ್ತನೆಗಳು, ಕುವೆಂಪು, ಬೇಂದ್ರೆಯಂತವರ ಕಾವ್ಯ ಇವತ್ತಿಗೂ ಜನರ ಮೇಲೆ ಪ್ರಭಾವ ಬೀರಲು ಅಲ್ಲಿರುವ ಸತ್ವವೇ ಕಾರಣವಾಗಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ**: ಸಾಹಿತಿಗಳಿಗೆ ನಾಡಿನಲ್ಲಿ ಅಪಾರ ಗೌರವ ಇರುವುದನ್ನು ನಾವು ಇಲ್ಲಿ ಕಾಣಬಹುದು.

**VI ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

ಗಾದೆ ಮಹತ್ವದ ವಿವರಣೆ 1 ಅಂಕ

ಅರ್ಥ ವಿವರಣೆ 1 ಅಂಕ

ಭಾಷಾ ಶೈಲಿಗೆ, ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**28**. ಪೆನ್ನು ಖಡ್ಗಕ್ಕಿಂತ ಹರಿತ.

**29.** ಒಕ್ಕಲಿಗ ಒಕ್ಕಿದರೆ ಜಗವೆಲ್ಲ ಬಿಕ್ಕುವುದು.

**30.** ಒಗ್ಗಟ್ಟಿನಲ್ಲಿ ಬಲವಿದೆ.

**31.** ಹಾಸಿಗೆ ಇದ್ದಷ್ಟು ಕಾಲು ಚಾಚು.

**VII ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.:**

**32**. ದೇಶದ ಸಂರಕ್ಷಣೆಯಲ್ಲಿ ಸೈನಿಕರ ಪಾತ್ರ ಹಿರಿದಾಗಿರುತ್ತದೆ. ಏಕೆಂದರೆ ಅವರು ತಮ್ಮ ತಾಯ್ನಾಡಿಗಾಗಿ ಸ್ವಂತ ಮನೆಯನ್ನು ತೊರೆದು, ಬಂಧು- ಬಾಂದವರಿಂದ ದೂರದಲ್ಲಿದ್ದು, ಗಡಿ ಕಾಯುತ್ತಾರೆ. ಅವರು ಪ್ರಬಲರಾಗಿದ್ದಾಗ ದೇಶದ ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಟ ದೇಶ ಎಲ್ಲರನ್ನು ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ, ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾಪಡೆ ತುಂಬಾ ಪ್ರಬಲವಾಗಿರಬೇಕು. ಅದಕ್ಕಾಗಿ ಎಷ್ಟೇ ಖರ್ಚಾದರೂ ಚಿಂತೆಯಿಲ್ಲ ಎಂಬ ಮನೋಭಾವನೆ ಸಹ ಇದೆ. ಅದೇ ಕಾರಣವೋ ಏನೋ ನಮ್ಮ ದೇಶದ ಬಜೆಟ್ ನಲ್ಲಿ ಹೆಚ್ಚಿನ ಭಾಗ ರಕ್ಷಣಾ ಇಲಾಖೆಗೆ ಮೀಸಲಾಗಿರುವುದನ್ನು ನೋಡಬಹುದು.

**33.** ಅಸಿ ನಂತರ ಪ್ರಮುಖ ಪಾತ್ರ ವಹಿಸುವುದು ಮಸಿ, ಮಸಿ ಎಂದರೆ ಸಾಹಿತ್ಯ ರಚನೆ. ' ಪೆನ್ನು ಖಡ್ಗಕ್ಕಿಂತ ಹರಿತ' ಎನ್ನುವ ಗಾದೆ ಮಾತಿನಂತೆ ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು ಅಂದರೆ ಬರವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕತೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲದು. ಒಂದು ಸರಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಹುದು. ಈ ನಿಟ್ಟಿನಲ್ಲಿ ಬರವಣಿಗೆ ಹೆಚ್ಚು ಶಕ್ತಿಶಾಲಿಯಾದುದು. ಇವತ್ತು ಸಾಹಿತಿಗಳಿಗೆ ನಾಡಿನಲ್ಲಿ ಅಪಾರ ಗೌರವ ಇರುವುದು ಆ ಸಾಹಿತ್ಯದ ಸತ್ವದಿಂದಲೆ. ಬಸವಣ್ಣ ಮುಂತಾದ ಶಿವಶರಣರ ವಚನಗಳು, ದಾಸರ ಕೀರ್ತನೆಗಳು, ಕುವೆಂಪು, ಬೇಂದ್ರೆಯಂಥವರ ಕಾವ್ಯಗಳು ಇವತ್ತಿಗೂ ಜನರ ಮೇಲೆ ಸತ್ಪರಿಣಾಮ ಬೀರಲು ಅಲ್ಲಿರುವ ಸತ್ವವೇ ಕಾರಣ. ಆದ್ದರಿಂದ ದೇಶದ ಸಮೃದ್ಧಿ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರ ಮಹತ್ವದ ಸ್ಥಾನವನ್ನು ವಹಿಸುತ್ತದೆ.

**34.** ಲೇಖಕರು ಅಸಿ ಮತ್ತು ಮಸಿಗಳಿಗಿಂತ ಮಹತ್ವವಾದುದು ಕೃಷಿ ಎಂದು ಹೇಳುತ್ತಾ ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲಾ ಬಿಕ್ಕುವುದು ಎನ್ನುವ ಮಾತನ್ನು ಉಲ್ಲೇಖಿಸಿದ್ದಾರೆ. ಇದರ ಅರ್ಥ ಒಂದು ವೇಳೆ ಕೃಷಿಯನ್ನು ಮಾಡದೆ ಕೃಷಿಕ ಸತ್ಯಾಗ್ರಹ ಮಾಡಿದರೆ ನಾವು ಭಿಕ್ಷುಕರಂತಾಗುತ್ತೇವೆ. ತಿನ್ನಲು ಆಹಾರವಿಲ್ಲದಂತೆ ನರಳುತ್ತೇವೆ. ಎಲ್ಲಾ ವರ್ಗದ

ಜನರು ಜೀವನಕ್ಕೆ ಕೃಷಿಯನ್ನೇ ಅವಲಂಬಿಸಿದ್ದಾರೆ. ಅಕ್ಕಿ ಪಡೆಯಲು , ರಾಗಿ ಬೆಳೆಯಲು ಕಾರ್ಖಾನೆಗಳಿಂದ ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತರು ಬೆವರು ಸುರಿಸಿ, ಭೂಮಿಯನ್ನು ಹದ ಮಾಡಿ ಬೆಳೆಯನ್ನು ಬೆಳೆಯಲೇ ಬೇಕು. ಹಾಗಾದರೆ ಮಾತ್ರ ದೇಶದ ಪ್ರಗತಿ ಸಾಧ್ಯ. ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು ಅಂದರೆ ವ್ಯವಸಾಯವೇ ಮೇಲು,. ಒಟ್ಟಾರೆ ನಾವೆಲ್ಲಾ ಸುಭಿಕ್ಷವಾಗಿ ಬಾಳಿ ಬದುಕಬೇಕಾದರೆ ಕೃಷಿಕನ ನಿಸ್ವಾರ್ಥ ಸೇವೆ ಅವಶ್ಯಕವಾಗಿದೆ. 'ರೈತ ದೇಶದ ಬೆನ್ನೆಲುಬು' ಎನ್ನುವುದು ಅಂದು, ಇಂದು, ಮುಂದು, ಎಂದೆಂದೂ ಸತ್ಯವಾದ ವಾಕ್ಯವಾಗಿದೆ.

**VIII ಗದ್ಯ ಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು. (ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು**)

**35. ಅ**) ಸ್ವಾತಂತ್ರ್ಯಾ ನಂತರ ಪಶ್ಚಿಮ ಘಟ್ಟಗಳ ಪತನ ಆರಂಭವಾಯಿತು. ಏರುತ್ತಿರುವ ಜನಸಂಖ್ಯೆ, ಕೃಷಿ ಭೂಮಿ ವಿಸ್ತರಣೆ, ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ, ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲ್ಚಿನ್ನಿ, ಜೇನು,ಭತ್ತ, ಧೂಪ, ದಂತ, ರಾಳ, ಭಗಿನೆ, ಬಿದಿರುಗಳಿಗೆ ಬೇಡಿಕೆ ಹೆಚ್ಚಾಗಿರುವುದು, ಹಣದಾಸೆಗೆ ಕಾಡು ದೋಚುವವರ ಸಂಖ್ಯೆ ಹೆಚ್ಚಾದುದರಿಂದ ಪಶ್ಚಿಮ ಘಟ್ಟಗಳು ಪತನವಾಗುತ್ತಿವೆ.

**35. ಆ).** ಪಶ್ಚಿಮ ಘಟ್ಟಗಳು ಸಮುದ್ರಕ್ಕೆ ಸಮೀಪವಾಗಿದ್ದು, ಸಂಪದ್ಭರಿತವಾಗಿವೆ. ನಾಲ್ಕು ಸಾವಿರ ವರ್ಷಗಳಿಂದಲೂ ತನ್ನ ಗೊಬ್ಬರದಿಂದಲೇ ಪುಷ್ಟಿಯಾಗುತ್ತಾ ನಿರಾಂತಕವಾಗಿ ಬೆಳೆಯುತ್ತಿದ್ದು, ಅನೇಕ ಬಗೆಯ ವಿಶಿಷ್ಟ ಮಸಾಲೆ, ಪರಿಮಳ ಸಸ್ಯಗಳು, ಔಷಧೀಯ ಗಿಡ ಮೂಲಿಕೆಗಳ ಮೂಲಕ ವಿದೇಶಿಯರ ಗಮನ ಸೆಳೆದಿದೆ.

**IX ಪತ್ರಲೇಖನ ಬರೆಯುವುದು**.

**36. ವ್ಯವಹಾರಿಕ/ ಮನವಿ ಪತ್ರ**

ಇಂದ,ಗೆ, ಸಂಬೋಧನೆ, ವಿಷಯ 1 ಅಂಕ

ಪತ್ರದ ಒಡಲು, ವಿಷಯ ನಿರೂಪಣೆ 2 ಅಂಕ

ವಂದನೆಯೊಂದಿಗೆ ಮಕ್ತಾಯ, ಇಂತಿ,ಸ್ಥಳ, ದಿನಾಂಕ 1 ಅಂಕ

ಭಾಷಾ ಶೈಲಿಗೆ, ಪದ ಬಳಕೆ ವಿನ್ಯಾಸ 1 ಅಂಕ

**ಒಟ್ಟು 5 ಅಂಕಗಳು**

**37. ಖಾಸಗಿ ಪತ್ರ/ಗೆಳೆಯನಿಗೆ**

ಇಂದ, ದಿನಾಂಕ, ಸಂಬೋಧನೆ, ಕ್ಷೇಮವಿಚಾರ 1 ಅಂಕ

ಪತ್ರದ ಒಡಲು, ವಿಷಯ ನಿರೂಪಣೆ 2 ಅಂಕ

ಮಕ್ತಾಯ, ಇಂತಿ, ಸಹಿ  ಹೊರ ವಿಳಾಸ  1 ಅಂಕ

ಭಾಷಾ ಶೈಲಿಗೆ, ಪದ ಬಳಕೆ ವಿನ್ಯಾಸ    1 ಅಂಕ

**ಒಟ್ಟು      5 ಅಂಕಗಳು**

## ಗದ್ಯಪಾಠ-3 ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ

## : ಮಾದರಿ ಉತ್ತರಗಳು:

1. **ಈ ಕೆಳಗಿನ ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿ ಉತ್ತರಕ್ಕೆ 1ಅಂಕ)**

**1**. (ಡಿ) ಗುಣವಾಚಕ

**2.** (ಎ) ಸರ್ವನಾಮ

**3**. (ಬಿ) ಗುಣವಾಚಕ

**4.** (ಬಿ) ದಿಗ್ವಾಚಕ

**5.** (ಸಿ) ಶಿಕ್ಷಕ

**6.** (ಸಿ) ಅವನು

**7.** (ಬಿ) ಆತ್ಮಾರ್ಥಕ

**8.** (ಸಿ) ಯಾರು

**9**. (ಬಿ) ಉಡುಪಿ

**10** (ಬಿ) ಐವರು

**11** (ಎ) ಕಣ್ಣೀರು

**12.** (ಸಿ) ತಿರಸ್ಕರಿಸು

**13** (ಡಿ) ಕುರುಡ

**14**. (ಸಿ) ಭಾವನಾಮ

**15**. (ಎ) ಸಂಧ್ಯಕ್ಷರ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**16.** ಪುಟ್ಟರಾಜರ ತಂದೆಯ ಹೆಸರು ರೇವಯ್ಯ ಮತ್ತು ತಾಯಿ ಸಿದ್ದಮ್ಮ.

**17**. ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಅಭಿಲಾಷೆಗೆ ತಕ್ಕಂತೆ ಜ್ಞಾನ ಕೊಡುವ ಶಕ್ತಿ ಇರುತ್ತದೆ.

**18.** ತಾಯಿ ಸಿದ್ದಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡಳು.

**19**. ಪುಟ್ಟರಾಜರು ಕನ್ನಡ, ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು.

**20**. ಪುಟ್ಟರಾಜರು ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸುವುದಕ್ಕಾಗಿ ಖಾದಿ ಬಟ್ಟೆ ತೊಟ್ಟರು.

**21**. ಪುಟ್ಟರಾಜರು ಬ್ರೈಲ್ ಲಿಪಿ ಕಲಿತರು.

**22**. ಪುಟ್ಟರಾಜರ ಮಾವನ ಹೆಸರು ಚಂದ್ರಶೇಖರಯ್ಯ.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**23**. ಬಾಲಕ ಪುಟ್ಟಯ್ಯನವರು ಹುಟ್ಟಿದ ಆರು ತಿಂಗಳಿಗೆ ಕಣ್ಣಿನ ರೋಗ ಬಂದಿತು. ಆಗ ಬರಿ ನಾಟಿ ವೈದ್ಯ ಇತ್ತು, ಅವರ ಕಣ್ಣು ಗುಡ್ಡಿಗೆ ನಾಯಿಯ ಮೈಯಲ್ಲಿರುವ ಹುಳು ಮುಟ್ಟಿಸಬೇಕೆಂದು ನಾಟಿ ವೈದ್ಯರು ಹೇಳಿದರು. ಆಗ ಮುಟ್ಟಿಸುವಾಗ ಹುಳು ಕೈಜಾರಿ ಕಣ್ಣಿನ ಒಳಗೆ ಬಿದ್ದುಬಿಟ್ಟವು. ಆಗ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡರು.

**24**. ಸಂಗೀತ ಲೋಕದ ಜಗದ್ಗುರು ಪಂಡಿತ ಪಂಚಾಕ್ಷರಿ ಗವಾಯಿಗಳ ಸಂಚಾರಿ ಸಂಗೀತ ಪಾಠಶಾಲೆ ಒಮ್ಮೆ ಗವಿಮಠದಲ್ಲಿ ಕ್ಯಾಂಪ್ ಮಾಡಿತ್ತು. ಅಲ್ಲಿಗೆ ಮಾವ ಚಂದ್ರಶೇಖರಯ್ಯನವರೊಂದಿಗೆ ಪುಟ್ಟಯ್ಯನು ಬಂದು ಗುರುಗಳಾದ ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಸ್ವೀಕರಿಸಿದರು.

**25.** ತಾಯಿ ಸಿದ್ದಮ್ಮ ಪುಟ್ಟರಾಜನನ್ನು "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ, ಹೆಂಡತಿ, ಮಕ್ಕಳು ಸಂಸಾರವೆಂಬ ಬಂಧನದಲ್ಲಿ ಬಂಧಿಯಾಗುವುದು ನಿನಗಿಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಮಗನೆ. ಗುರು ಪಂಚಾಕ್ಷರರು ತೋರುವ ಮಾರ್ಗದಲ್ಲಿ ನೀನು ನಡೆದು ಅಮರನಾಗು ಕಂದ" ಎಂದು ಆಶೀರ್ವದಿಸಿದಳು.

**26**. ಉನ್ನತವಾದ ಗುರಿಯನ್ನು ಸಾಧಿಸಲು ಯಾವುದೇ ರೀತಿಯ ದೈಹಿಕ ನ್ಯೂನತೆಗಳು ಎಂದೂ ಅಡ್ಡಿಯಾಗಲಾರವು. ಅಸಾಧ್ಯವಾದುದನ್ನು ಸಾಧಿಸಬೇಕೆಂಬ ಛಲವಿದ್ದರೆ ಗುರಿ ಸಾಧನೆ ಸುಲಭವಾಗುತ್ತದೆ. ನಿಮ್ಮ ಒಳ ಮನಸ್ಸು ಸದಾ ಕ್ರಿಯಾಶೀಲವಾಗಿದ್ದು, ನಿಮ್ಮ ಸಾಧನೆಗೆ ದೈಹಿಕ ಅಂಗವಿಕಲತೆಯನ್ನು ಮೆಟ್ಟಿನಿಲ್ಲುವ ವಿಶ್ವಾಸ ನಿಮ್ಮಲ್ಲಿದೆ ಎಂದು ವಿಶೇಷ ಚೇತನರಿಗೆ ಧೈರ್ಯ ತುಂಬಬಹುದು.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ
ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ
ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ
**ಒಟ್ಟು 3 ಅಂಕಗಳು**

**27. ರಮೇಶ್ ಗೌಡ ಎಂ.ಕೆ** ಅವರು 1975ರಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕು ಕಿತ್ತೂರು ಗ್ರಾಮದಲ್ಲಿ ಜನಿಸಿದರು. ಸರ್ಕಾರಿ ಕಾಲೇಜಿನ ಅಧ್ಯಾಪಕರಾದ ಇವರು ಅಮೃತಕ್ಕೆ ಹಾರಿದ ಗರುಡ (ಕಥಾ ಸಂಕಲನ), ರೂಪ ಬಯಲು (ಪ್ರಬಂಧ ಸಂಕಲನ), ಡಾ. ಪಂ. ಪು. ಗವಾಯಿಗಳು (ಜೀವನ ಚರಿತೆ) ಕೃತಿಗಳನ್ನು ಹಲವು ಲೇಖನಗಳನ್ನು ಬರೆದಿದ್ದಾರೆ. ಇವರಿಗೆ

ರತ್ನಾಕರವರ್ಣಿ, ಮುದ್ರಣ ದತ್ತಿ ಪ್ರಶಸ್ತಿ, ಕನಾರ್ಟಕ ಸಾಹಿತ್ಯ ಅಕಾಡೆಮಿಯಿಂದ ವರ್ಷದ 'ಉತ್ತಮ ಕೃತಿ' ಪ್ರಶಸ್ತಿಗಳು ಲಭಿಸಿವೆ.

**V ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**28. "ಪುಟ್ಟರಾಜರು ಕೋಗಿಲೆಯಂತೆ ಸುಮಧುರವಾಗಿ ಹಾಡುತ್ತಿದ್ದರು**."

**ಅಲಂಕಾರದ ಹೆಸರು** : ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**ಉಪಮೇಯ :** ಪುಟ್ಟರಾಜರು

**ಉಪಮಾನ :** ಕೋಗಿಲೆ

**ಉಪಮಾವಾಚಕ:** ಅಂತೆ

**ಸಮಾನಧರ್ಮ :** ಮಧುರವಾಗಿ ಹಾಡುತ್ತಿದ್ದರು

**ಸಮನ್ವಯ:** ಇಲ್ಲಿ ಉಪಮೇಯವಾದ ಪುಟ್ಟರಾಜರು ಉಪಮಾನವಾದ ಕೋಗಿಲೆಯಂತೆ ಹಾಡುತ್ತಿದ್ದರು ಎಂದು ಹೋಲಿಸಲಾಗಿದೆ.

**29. "ಪುಟ್ಟರಾಜ ಗವಾಯಿಯವರು ಸಂಗೀತ ಲೋಕದ ಧ್ರುವತಾರೆಯಂತೆ ಬೆಳಗುತ್ತಿದ್ದರು**."

**ಅಲಂಕಾರದ ಹೆಸರು :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**ಉಪಮೇಯ :** ಪುಟ್ಟರಾಜರು

**ಉಪಮಾನ :** ಸಂಗೀತ ಲೋಕದ ಧ್ರುವತಾರೆ

**ಉಪಮಾವಾಚಕ:** ಅಂತೆ

**ಸಮಾನಧರ್ಮ :** ಬೆಳಗುತ್ತಿದ್ದರು

**ಸಮನ್ವಯ :** ಇಲ್ಲಿ ಉಪಮೇಯವಾದ ಪುಟ್ಟರಾಜರು ಉಪಮಾನವಾದ ಸಂಗೀತ ಲೋಕದ ಧ್ರುವತಾರೆಯಂತೆ ಬೆಳಗುತ್ತಿದ್ದರು ಎಂದು ಹೋಲಿಸಲಾಗಿದೆ.

**VI ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**30. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ".**

**ಆಯ್ಕೆ:** ಈ ವಾಕ್ಯವನ್ನು ರಮೇಶ್ ಗೌಡ ಎಂ.ಕೆ ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಕೃತಿಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಗದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಪುಟ್ಟರಾಜರ ಸೋದರಮಾವ ಚಂದ್ರಶೇಖರಯ್ಯನವರು ಗವಾಯಿಗಳಿಗೆ ಹೇಳುವ ಮಾತು. ಬಾಲಕ ಪುಟ್ಟರಾಜರು ತನ್ನ ಮಾವನ ಹಾರ್ಮೋನಿಯಂ ನುಡಿಸುತ್ತಿದ್ದಾಗ , ಜನರೆಲ್ಲರೂ ಮನೆಯೊಳಗೆ ಬಂದು ಕುಳಿತರು. ಹೊಲಕ್ಕೆ ಹೋಗಿದ್ದ ಮಾವ ಮನೆಯ ಹೊರಗೆ ಜನರ ಗುಂಪನ್ನು ಕಂಡು, ಮನೆಯ ಒಳಗೆ ಹಾರ್ಮೋನಿಯಮ್ ನುಡಿಸುತ್ತಿದ್ದ ಬಾಲಕನ್ನು ನೋಡಿದರು. ಆಗ ಬಾಲಕ ಸೋದರಮಾವನ ಪಾದಗಳಿಗೆ ನಮಸ್ಕರಿಸಿದರು. ಮಾವ ಬಿಗಿಯಾಗಿ ಅಪ್ಪಿಕೊಂಡು "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ, ನಿನ್ನದು, ಅದು ನಿನ್ನ ಆಸ್ತಿ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ**: ಪುಟ್ಟರಾಜರು ಕುರುಡರಾಗಿದ್ದರೂ, ಹಾರ್ಮೋನಿಯಮ್ ಚೆನ್ನಾಗಿ ನುಡಿಸುವುದನ್ನು ಕಂಡು ಪ್ರೋತ್ಸಾಹ ನೀಡಿದ ಮಾವ ಚಂದ್ರಶೇಖರಯ್ಯನವರ ಉದಾರತೆಯು ಇಲ್ಲಿನ ಸ್ವಾರಸ್ಯವಾಗಿದೆ.

31. "**ಅವನು ಬಂದರೆ ಕರೆದುಕೊಂಡು ಹೋಗು ತಾಯಿ**".

**ಆಯ್ಕೆ:** ಈ ವಾಕ್ಯವನ್ನು ರಮೇಶ್ ಗೌಡ ಎಂ.ಕೆ ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಕೃತಿಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಗದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಗುರುಗಳಾದ ಪಂಚಾಕ್ಷರ ಗವಾಯಿಗಳು ಪಂಡಿತ ಪುಟ್ಟರಾಜ ಗವಾಯಿಗಳ ತಾಯಿ ಸಿದ್ದಮ್ಮರಿಗೆ ಹೇಳಿದ ಮಾತು. ಸಂಗೀತದ ಸಕಲ ವಿದ್ಯಗಳಲ್ಲಿ ಪಾರಂಗತನಾದ ಮುದ್ದು ಮಗನನ್ನು ನೋಡಿದ ತಾಯಿ ಸಿದ್ದಮ್ಮನವರಿಗೆ ಅಂತಃಕರಣ ತುಂಬಿ ಬಂತು. ಪಂಚಾಕ್ಷರ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡರು. ಆಗ ಗವಾಯಿಗಳು "ಅವನು ಬಂದರೆ ಕರೆದುಕೊಂಡು

ಹೋಗು ತಾಯಿ" ಎಂದು ವಾತ್ಸಲ್ಯ ಪೂರ್ಣವಾಗಿ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಪಂಚಾಕ್ಷರ ಗವಾಯಿಗಳ ವಾತ್ಸಲ್ಯಪೂರ್ಣತೆಯ ಹಿತನುಡಿ ಹಾಗೂ ಅವರ ವಿನಯತೆಯ ಮಾತುಗಳನ್ನು ಇಲ್ಲಿ ಕಾಣಬಹುದು.

**32. "ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ".**

**ಆಯ್ಕೆ:** ಈ ವಾಕ್ಯವನ್ನು ರಮೇಶ್ ಗೌಡ ಎಂ.ಕೆ ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಕೃತಿಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಗದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಪಂಡಿತ ಪುಟ್ಟರಾಜ ಗವಾಯಿಗಳು ತಾಯ ಸಿದ್ದಮ್ಮನಿಗೆ ಹೇಳುತ್ತಾರೆ. ತಾಯಿ ಸಿದ್ದಮ್ಮನವರು ಪುಟ್ಟಯ್ಯನೆಡೆಗೆ ಬಂದು ಮನೆಗೆ ಬರುವಂತೆ ಕೇಳಿಕೊಂಡರು. ಆದರೆ ಪುಟ್ಟಯ್ಯನ ಮನಸ್ಸು ದೃಢವಾಯಿತು. ತಾಯಿಗೆ ಮೃದುವಾದ ಮಾತುಗಳಿಂದಲೇ ತನ್ನಿಚ್ಛೆಯನ್ನು ಹೇಳಿದರು. ನನಗೆ ನನ್ನ ಸರ್ವಸ್ವವೂ ಗುರುಗಳೂ, ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಹೇಗೆ ನಿನ್ನ ಜೊತೆ ಬರಲಿ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಪುಟ್ಟಯ್ಯನವರು ತಮ್ಮ ಗುರುವಿನ ಮೇಲೆ ಇಟ್ಟಿದ್ದ ಭಕ್ತಿ ಹಾಗೂ ತಮ್ಮ ಸಮಸ್ತ ಜೀವನವನ್ನು ಸಮಾಜಕ್ಕೆ ಮುಡಿಪಾಗಿ ಇಟ್ಟಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

**33. "ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು".**

**ಆಯ್ಕೆ:** ಈ ವಾಕ್ಯವನ್ನು ರಮೇಶ್ ಗೌಡ ಎಂ.ಕೆ ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಕೃತಿಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಗದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಪಂಚಾಕ್ಷರ ಗವಾಯಿಗಳು ಮತ್ತು ಪಂಡಿತ ಪುಟ್ಟರಾಜ ಗವಾಯಿಗಳ ಬಗ್ಗೆ ಲೇಖಕರು ಹೇಳುವ ಮಾತು. ಪುಟ್ಟರಾಜ ಗವಾಯಿಗಳು ಗುರುಗಳಾದ ಪಂಚಾಕ್ಷರ ಗವಾಯಿಗಳ ಪ್ರೀತಿಯ ಶಿಷ್ಯರೆಲ್ಲರಲ್ಲಿ ಒಬ್ಬರಾದರು. ತನ್ನ ಎಲ್ಲಾ ಸಹಪಾಠಿಗಳಿಗಿಂತ ಬಲು ಬೇಗ ಗುರುಗಳನ್ನು ಗ್ರಹಿಸಿ, ಪಂಚಾಕ್ಷರಿ ಗುರುಗಳನ್ನು ಅನುಕರಿಸಿದರು. ಗುರು ಶಿಷ್ಯರಿಬ್ಬರೂ ಅಂಧರು, ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅವರ ಅಂತರಂಗದ ಕಣ್ಣು ಅರಳಿತ್ತು ಎಂದು ಲೇಖಕರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಗುರು ಶಿಷ್ಯರಿಬ್ಬರೂ ಅಂಧರಾಗಿದ್ದರೂ, ಅವರ ಅಂತರಂಗದ ಕಣ್ಣು ಅರಳಿತ್ತು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**VII ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

**34.** ಪುಟ್ಟರಾಜರು ಬಾಲ್ಯದಲ್ಲಿಯೇ ಅಂಧರಾಗಿದ್ದರು. ಬಾಹ್ಯ ಕಣ್ಣು ಅಳಿಸಿದ್ದರೂ, ಅಂತರಂಗದ ಕಣ್ಣು ಅರಳಿತ್ತು. ವಿವಿಧ ಶಾಸ್ತ್ರ ಗ್ರಂಥಗಳನ್ನು ಕಲಿತರು. ಪಾಣಿನಿಯ 'ಅಷ್ಟಾಧ್ಯಾ , ಶರ್ವವರ್ಮನ 'ಕಾತಂತ್ರ', ಕೇಶಿರಾಜನ ಶಬ್ದಮಣಿ ದರ್ಪಣ' ನಿಜಗುಣಶಿವಯೋಗಿಗಳ ಕೈವಲ್ಯ ಪದ್ಧತಿ' ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ದಾನುಶಾಸ್ತ್ರ, ಛಂದಶಾಸ್ತ್ರ, ಕನ್ನಡ ವ್ಯಾಕರಣ ಶಾಸ್ತ್ರವನ್ನು ಶಾಸ್ತ್ರಬದ್ಧವಾಗಿ ಕಲಿತು ಅವುಗಳಲ್ಲಿ ನಿಷ್ಣಾತರಾದರು. ಕಣ್ಣು ಕಾಣದ ಪುಟ್ಟರಾಜರು ಸದಾ ಕಾಲ ಬೇರೆಯವರ ಸಹಾಯ ಪಡೆದೆ ಓದಿಸುವ ಕೆಲಸದಿಂದ ಮುಕ್ತರಾಗಲು ಬ್ರೈಲ್ ಲಿಪಿ ಕಲಿತು ಅದರಲ್ಲಿ ಪಾರಂಗತರಾದರು. ಪುಟ್ಟರಾಜರು ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ಅಗಾಧ ಪಾಂಡಿತ್ಯ ಗಳಿಸುವುದರೊಂದಿಗೆ ಗಾಯನ, ವಾದನ, ಸಾಹಿತ್ಯ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿ ಜ್ಞಾನ ಯೋಗಿ, ಗಾನಯೋಗಿ ಎಂದು ಪ್ರಸಿದ್ಧರಾದರು. ಕನ್ನಡ ಸಂಸ್ಕೃತ, ಹಿಂದಿ ಭಾಷೆಗಳಲ್ಲಿ 75ಕ್ಕೂ ಅಧಿಕ ಕೃತಿಗಳನ್ನು ರಚಿಸಿ ತ್ರಿಭಾಷಾ ಕವಿಯಾದರು. ಇವರ ಸಾಧನೆಗೆ ನಾಡೋಜ, ಬಸವಶ್ರೀ, ಪದ್ಮಭೂಷಣ, ಗೌರವ ಡಾಕ್ಟರೇಟ್ ಪ್ರಶಸ್ತಿಗಳು ದೊರೆತಿವೆ. ಇವರ ಯಾವುದೇ ಸಾಧನೆಗಳಿಗೆ ಅಂಗವಿಕಲತೆ ಅಡ್ಡಿಯನ್ನುಂಟು ಮಾಡಲಿಲ್ಲ. ಸಾಧನೆಗೆ ಅಂಗಹೀನತೆ ಅಡ್ಡಿಯಾಗುವುದಿಲ್ಲವೆಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಾಗಿಲ್ಲ.

**35.** ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆ ಆಲೂರಿನಲ್ಲಿ ಕ್ಯಾಂಪ್ ಹಾಕಿದ ಸಂದರ್ಭದಲ್ಲಿ ತಾಯಿ ಸಿದ್ದಮ್ಮನವರು ಬೆಳೆದು ದೊಡ್ಡವನಾದ ಪುಟ್ಟರಾಜನನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮುದ್ದು ಮಗನನ್ನು ನೋಡಿದ ತಾಯಿಗೆ ಅತಃಕರಣ ತುಂಬಿ ಬಂತು. ಪಂಚಾಕ್ಷರಿ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡಳು. ಆಗ ಗವಾಯಿಗಳು "ಅವನು ಬಂದರೆ ಕರೆದುಕೊಂಡು ಹೋಗು ತಾಯಿ" ಎಂದು ವಾತ್ಸಲ್ಯ ಪೂರ್ಣವಾಗಿ ಹೇಳಿದರು. ಸಿದ್ದಮ್ಮನವರು ಪುಟ್ಟಯ್ಯನೆಡೆಗೆ ಬಂದು ಮನೆಗೆ ಬರುವಂತೆ ಕೇಳಿಕೊಂಡರು. ಆದರೆ ಪುಟ್ಟಯ್ಯನ ಮನಸ್ಸು ದೃಢವಾಯಿತು. ತಾಯಿಗೆ ಮೃದುವಾದ ಮಾತುಗಳಿಂದಲೇ ತನ್ನಿಚ್ಛೆಯನ್ನು ಹೇಳಿದರು. "ನನಗೆ ನನ್ನ ಸರ್ವಸ್ವವೂ ಗುರುಗಳು, ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸಿದೆ, ಹೇಗೆ ನಿನ್ನ ಜೊತೆ ಬರಲಿ ಎಂದು ತಾಯಿಯನ್ನು ಕೇಳಿದರು. ನಾನು ಎಲ್ಲಾ ಬಂಧನಗಳನ್ನು ತೊಡೆದು ಹಾಕಿರುವೆ. ಗುರು ಪಂಚಾಕ್ಷರರೆ ನನ್ನ ಸರ್ವಸ್ವ, ಅವರ ಆಜ್ಞಾಧಾರಕ ನಾನು. ನಿನ್ನ ಮಗನೆಂಬ ಭಾವವನ್ನು ತೊಡೆದುಹಾಕಿ ನನ್ನನ್ನು ಸಮಾಜಕ್ಕೆ ಅರ್ಪಿಸು ತಾಯಿ ಎಂದು ಹೇಳಿದರು. ಆಗ ತಾಯಿ ಸಿದ್ದಮ್ಮ ನನ್ನ ಜೊತೆ ಬರುವುದು ಬೇಡ ಮಗನೆ ಗುರು ಪಂಚಾಕ್ಷರರು ತೋರುವ ಮಾರ್ಗದಲ್ಲಿ ನೀನು ನಡೆದು ಅಮರನಾಗು ಕಂದ ಎಂದು ಹರಸಿದರು.

**36.** ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಮ್ ನುಡಿ  ವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ  ಮಾವನ ಹಾರ್ಮೋನಿಯಮ್ ಹಿಡಿದು ತಲ್ಲೀನನಾಗಿ ನುಡಿಸುತ್ತಿದ್ದಾಗ, ಹಾರ್ಮೋನಿಯಮ್ನಿಂದ ಹೊರಟ ನಾದ ಮನೆಯನ್ನು ತುಂಬಿ, ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನ ಸೋತ ಜನರು  ಮನೆಯೊಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಮನೆಯ ಹೊರಗೆ ಮತ್ತು ಒಳಗೆ ಜನರ ಗುಂಪನ್ನು ಕಂಡು, ಆಶ್ಚರ್ಯಚಕಿತರಾದರು. ಮನೆಯ ಒಳಗೆ ಹಾರ್ಮೋನಿಯಂ ನುಡಿಸುತ್ತಿರುವವರು ಯೋಗಿಗಳೇ ಇರಬಹುದೆಂದು ಭಾವಿಸಿ ಒಳಗೆ ಬಂದರು. ತಲ್ಲೀನನಾಗಿ ಹಾರ್ಮೋನಿಯಂ ನುಡಿಸುತ್ತಿದ್ದ ಪುಟ್ಟ ಬಾಲಕನನ್ನು ಕಂಡು ನಿಬ್ಬೆರಗಾದರು.  ಬಾಲಕನನ್ನು ಮಾವ ಬಿಗಿದಪ್ಪಿ ಮುದ್ದುಗರೆಯುತ್ತಾ ಆನಂದಭಾಷ್ಪ ಸುರಿಸಿ “ಮಗು  ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ, ನಿನ್ನದು, ನಿನ್ನದೇ,  ಅದು ನಿನ್ನ ಆಸ್ತಿ” ಎಂದು ಹೇಳಿದರು.

**VIII ಪ್ರಬಂಧ ಬರವಣಿಗೆ:**

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

**37**. ಪರಿಸರ ಸಂರಕ್ಷಣೆ ಇಂದಿನ ಅಗತ್ಯತೆ.

**38**. ಆರೋಗ್ಯ ಸುಧಾರಣೆಯಲ್ಲಿ ಯೋಗದ ಮಹತ್ವ.

## ಗದ್ಯ ಪಾಠ : 4 ಹಕ್ಕಿ ಗೂಡುಗಳ ನಿಗೂಢ ಜಗತ್ತು

## : ಮಾದರಿ ಉತ್ತರಗಳು:

**I. ಈ ಕೆಳಗಿನ ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿ ಉತ್ತರಕ್ಕೆ 1ಅಂಕ)**

**1.** (ಎ) ಧಾತು

**2.** (ಬಿ) ದ

**3.** (ಸಿ) ಬಂದಳು

**4**. (ಸಿ) ಕಾಣು

**5**. (ಬಿ) ವರ್ತಮಾನಕಾಲ

**6**. (ಬಿ) ದ್ವಿತೀಯ

**7**. (ಸಿ) ಅಧಿಕರಣ

**8.** (ಸಿ) ಅಲ್ಲಿ

**9**. (ಎ) ಮನೆಯಲ್ಲಿ

**10**. (ಬಿ) ನೋಡಿದನು

**11.** (ಎ) ದನಿ

**12**. (ಬಿ) ಚತುರ್ಥಿ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**13.** ಗುಹೆ, ಪೊಟರೆ, ಗೂಡು ಬಿಲದಂಥ ಜಾಗಗಳು ಸಸ್ತನಿಗಳ ಆಶ್ರಯ ತಾಣಗಳಾಗಿವೆ.

**14.** ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು 'ಸ್ಪರ್ಶ ಸಂಜೀವಿನಿ ಯ ಪಾಠ ಹೇಳುತ್ತವೆ.

**15**. ಹಕ್ಕಿ ಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನದ ಸಮನ್ವಯತೆ ಇದೆ.

**16.** ಹಕ್ಕಿಯ ದೇಹದ ಸ್ವರೂಪ, ಪರಿಸರದ ವೈಲಕ್ಷಣಗಳು ಬಲಿ, ಬೇಟೆ ಸಂಬಂಧಗಳು ಅದರ ಸಾಮರ್ಥ್ಯಕ್ಕೆ ಮಿತಿಯೊಡು ತ್ತವೆ.

**17**. ಅಮೆರಿಕಾದ ಗ್ಯಾನೆಟ್ ಕಡಲ ಹಕ್ಕಿ ಗಾಲ್ಫ್ ಚೆಂಡು, ನೀಲಿ ಶೀಶೆಯ ಚೂರು, ಈರುಳ್ಳಿ ಸಿಪ್ಪೆ ಮತ್ತು ಸಣ್ಣ ಬೊಂಬೆಯೊಂದನ್ನು ತಂದು ಗೂಡನ್ನು ಅಲಂಕರಿಸುತ್ತದೆ.

**18**. ನೀಲಿ ಸಾಮ್ರಾಟ ಮತ್ತು ಪ್ಯಾರಡೈಸ್ ಫ್ಲೈಕ್ಯಾಚರ್ (ಸಗ್ಗದಕ್ಕಿ) ಪಕ್ಷಿಗಳು ಬಟ್ಟಲಾಕಾರದಲ್ಲಿ ಗೂಡು ಕಟ್ಟುತ್ತವೆ.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**19**. ಹಕ್ಕಿ ಗೂಡಿನ ವಿಶೇಷತೆಗಳೆಂದರೆ ಅವು ಕೇವಲ ಕೀಟ, ಉರಗ ಸಂತತಿ ಮತ್ತು ಹಲವು ಸಸ್ತನಿಗಳಂತೆ ಸುಂದರವಾಗಿ ಗೂಡು ಕಟ್ಟುತ್ತವೆ. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಅವು ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲೂ ಭಿನ್ನವಾಧ ವಸ್ತುಗಳನ್ನು ಬಳಸಬಲ್ಲವು. ಒಳಗಡೆಯ ಗೋಡೆಯನ್ನು ಪ್ಲಾಸ್ಟರ್ ಮಾಡಬಲ್ಲವು.

**20.** ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶಗಳು ಮುಖ್ಯವಾಗಿ ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು, ಹವಾಮಾನ ವೈಪರೀತ್ಯವನ್ನು ಎದುರಿಸಲು ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು, ಬೇಟೆಯಾಡುವ ಪ್ರಾಣಿಗಳಿಂದ ರಕ್ಷಸಿಕೊಳ್ಳಲು ಹಕ್ಕಿಗಳು ಗೂಡನ್ನು ನಿರ್ಮಿಸುತ್ತವೆ.

**21.** ಹಕ್ಕಿಗಳು ನಭದಲ್ಲಿ ಹಾರಿ, ಪರ್ವತಗಳನ್ನು ಏರಿ, ಸಾಗರ ದ್ವೀಪಗಳನ್ನು ದಾಟಿ ತಮಗಿರುವ ಅಪೂರ್ವ ಹಾರಾಟ ಶಕ್ತಿಯಿಂದ ಎಲ್ಲೆಂದರಲ್ಲಿ ಗೂಡು ಕಟ್ಟುತ್ತವೆ. ಅಂದರೆ ಸಾಗರ, ದ್ವೀಪ, ಗಿರಿ ಶಿಖರದ ನೆತ್ತಿ, ನಿಬಿಡ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವ ಪ್ರದೇಶ ಹೀಗೆ ಎಲ್ಲಾ ಕಡೆ ಗೂಡು ಕಟ್ಟಬಲ್ಲವು.

**22.** ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಅವು ಗೂಡನ್ನು ಮನುಷ್ಯರಿರುವ ಕೇರಿಗಳಲ್ಲಿ ವಾಹನ ಸಂಚಾರ ಹೆಚ್ಚಿರುವ ಸ್ಥಳಗಳನ್ನೇ ಆಯ್ದುಕೊಳ್ಳುತ್ತವೆ. ಮನುಷ್ಯನು ಹಕ್ಕಿಗಳ ನೆಲೆಯನ್ನು ಅನೇಕ ಕಡೆ ಆಕ್ರಮಿಸಿಕೊಂಡ ನಂತರ ಹಲವಾರು ಹಕ್ಕಿಗಳು ಥಟ್ಟನೆ ಹೊಂದಿಕೊಂಡು ಟ್ರಾನ್ಸ್ಫಾರ್ಮರ್ ಬಳಿ, ಮೀಟರ್ ಪೆಟ್ಟಿಗೆಯಲ್ಲಿ ಅಷ್ಟೇ ಏಕೆ ವಿದ್ಯುತ್ ತಂತಿಗಳಲ್ಲಿ ತೂಗಾಡುವ ಗೂಡುಗಳನ್ನು ಕಟ್ಟಿರುವುದನ್ನು ಕಾಣುತ್ತೇವೆ.

**23**. ನೀಲಿ ಸಾಮ್ರಾಟ ಮತ್ತು ಪ್ಯಾರಡೈಸ್ ಫ್ಲೈ ಕ್ಯಾಚರ್ (ಸಗ್ಗದಕ್ಕಿ) ತಮ್ಮ ಗೂಡನ್ನು ಬಹು ಸುಂದರವಾಗಿ ಅಲಂಕಾರ ಮಾಡುತ್ತವೆ. ಕೇವಲ ಎರಡು ಒಣ ಕಡ್ಡಿಯನ್ನು ಅಪ್ಪಿ ಹಿಡಿದಂತೆ, ಗುರುತ್ವಾಕರ್ಷಕವಾಗಿ ಸಮತೋಲನವನ್ನು ಕಾಯ್ದಿಟ್ಟು  ಂಡು ಬಟ್ಟಲಾಕಾರದಲ್ಲಿ ಅವು ಗೂಡು ನಿರ್ಮಿಸಿ ಅವು ಹೊರ ಮೈಗೆ ಜೇಡರ ಮೊಟ್ಟೆಗಳ ಕೋಶಗಳನ್ನು ನಿರ್ದಿಷ್ಟ ಅಂತರದಲ್ಲಿ ಜೋಡಿಸಿ ಅಲಂಕರಿಸುತ್ತವೆ. ಕಾರಣ ಶತ್ರುಗಳ ಕಣ್ಣಿಗೆ ಗೂಡು ಗೋಚರಿಸಬಾರದೆಂಬುದು ಅದರ ಉದ್ದೇಶ ಆಗಿರುತ್ತದೆ.

**24**. ಹಕ್ಕಿಗೂಡಿನಲ್ಲಿ ನೋವಿದೆ. ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವು, ಗುಟುಕು ಪಡೆದು ಜೀವ ಕಣ್ತರೆಯುವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ, ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆಯಿದೆ. ಈ ಬದುಕಿನ ಎಲ್ಲಾ ಅನುಭವಗಳು ಹಕ್ಕಿಗೂಡಿನಲ್ಲಿವೆ.

**IV. ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

ಗಾದೆ ಮಹತ್ವದ ವಿವರಣೆ 1 ಅಂಕ

ಅರ್ಥ ವಿವರಣೆ 1 ಅಂಕ

ಭಾಷಾ ಶೈಲಿಗೆ, ಪದಬಂಧಗಳಿಗೆ 1 ಅಂಕ

**ಒಟ್ಟು 3ಅಂಕಗಳು**

**25**. "ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ".

**26.** "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ".

**V ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**27. "ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ."**

**ಅಲಂಕಾರದ ಹೆಸರು :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**ಉಪಮೇಯ :** ಮಗುವಿನ ಮುಖ

**ಉಪಮಾನ :** ಚಂದ್ರ

**ಉಪಮಾವಾಚಕ**: ಅಂತೆ

**ಸಮಾನಧರ್ಮ** : ಸೌಂದರ್ಯ ವರ್ಣನೆ

**ಸಮನ್ವಯ :** ಇಲ್ಲಿ ಉಪಮೇಯವಾದ ಮಗುವಿನ ಮುಖವನ್ನು ಉಪಮಾನವಾದ ಚಂದ್ರನಿಗೆ ಹೋಲಿಸಲಾಗಿದೆ.

**VI. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**28. "ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ."**

**ಆಯ್ಕೆ :** ಈ ವಾಕ್ಯವನ್ನು ಕೆ.ಪುಟ್ಟಸ್ವಾಮಿ ಕೃಪಾಕರ ಮತ್ತು ಸೇನಾನಿ ಅವರುಗಳು ಬರೆದಿರುವ 'ಜೀವಜಾಲ' ಎಂಬ ಕೃತಿಯಿಂದ ಆಯ್ದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಲೇಖಕರು ಮೀನು, ಕಪ್ಪೆ ಮತ್ತು ಸರೀಸೃಪಗಳ ಬಗ್ಗೆ ಹೇಳುವ ಮಾತಾಗಿದೆ. ಮೀನು, ಕಪ್ಪೆ, ಸರೀಸೃಪಗಳ ಮೊಟ್ಟೆಗಳು ಫಲಿತಗೊಳ್ಳುವುದಕ್ಕೆ ಮುಂಚೆ ಅವು ನಶಿಸಿ ಇಲ್ಲವೇ ಬೇರೆ ಪ್ರಾಣಿಗಳ ಅಥವಾ ಇತರೆ ಕಾರಣಗಳಿಂದ ನಾಶವಾಗಬಹುದು. ಎಂದು ಲೇಖಕರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವಿಗೆ ಹೊಂದಿಕೊಂಡು ಹಕ್ಕಿಗಳು ಹೋರಾಡುವುದನ್ನು ಇಲ್ಲಿ ಕಾಣಬಹುದು.

**29. "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು".**

**ಆಯ್ಕೆ :** ಈ ವಾಕ್ಯವನ್ನು ಕೆ.ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ ಅವರುಗಳು ಬರೆದಿರುವ 'ಜೀವಜಾಲ' ಎಂಬ ಕೃತಿಯಿಂದ ಆಯ್ದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ**: ಹಕ್ಕಿ ಗೂಡುಗಳ ಜೀವನ ಕ್ರಮದ ಕುರಿತು ಲೇಖಕರು ಹೇಳುವ ಮಾತಾಗಿದೆ. ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವು, ಗುಟುಕು ಪಡೆದು ಜೀವ ಕಣ್ತೆರೆಯುವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ, ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ ಕಾಣುತ್ತದೆ. ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನವನ್ನು ಅಲ್ಲಿ ಕಾಣಬಹುದು. ಹುಟ್ಟಿದ ಮಕ್ಕಳಿಗೆ ಪಾಠ ಹೇಳುವ ಶಾಲೆ ಅದು ಎಂದು ಲೇಖಕರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ**: ತಾಯಿ ಮಕ್ಕಳ  ಕೌಟುಂಬಿಕ ಐಕ್ಯತೆಯನ್ನು ಮತ್ತು ಬದುಕಿನ ಅನುಭವಗಳನ್ನು ಕಾಣಬಹುದು.

**30. "ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ**".

**ಆಯ್ಕೆ :** ಈ ವಾಕ್ಯವನ್ನು ಕೆ.ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ ಅವರುಗಳು ಬರೆದಿರುವ 'ಜೀವಜಾಲ' ಎಂಬ ಕೃತಿಯಿಂದ ಆಯ್ದ 'ಹಕ್ಕಿಗೂಡುಗಳ ನಿಗೂಢ ಜಗತ್ತು ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಲೇಖಕರು ಹಕ್ಕಿಗಳು ಗೂಡು ಕಟ್ಟುವ ರೀತಿಯನ್ನು ವಿವರಿಸುವ ಮಾತಾಗಿದೆ. ಹಕ್ಕಿಗಳು ಕೆಲವು ಕೀಟ ಉರಗ ಸಂತತಿ ಮತ್ತು ಹಲವು ಸಸ್ತನಿಗಳಿಗಿಂತ ತುಂಬಾ

ಕೌಶಲ್ಯದಿಂದ ಗೂಡು ಕಟ್ಟುವ ಚಾಕಚಕ್ಯತೆ ಇದೆ. ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲೂ ಭಿನ್ನವಾದ ವಸ್ತುಗಳನ್ನು ಬಳಸಬಲ್ಲವು. ಒಳಗೋಡೆಯನ್ನು ಪ್ಲಾಸ್ಟರ್ ಮಾಡಬಲ್ಲವು. ತನ್ನ ಗೂಡನ್ನು ಸೌಂದರ್ಯಗೊಳಿಸುವ ಮತ್ತು ವಾಸ್ತುಶಿಲ್ಪಿಯ ಕಲ್ಪನೆಗೂ ಮೀರಿ ತನ್ನ ಗೂಡನ್ನು ನಿರ್ಮಿಸಿಕೊಳ್ಳುತ್ತವೆ. ಎಂದು ತಿಳಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಹಕ್ಕಿಗಳು ತಮ್ಮ ಸಂತತಿಯ ನಿರ್ವಹಣೆಗೆ ಅಪ್ಪಟ ವಾಸ್ತುಶಿಲ್ಪಿಯಂತೆ ತಮ್ಮ ಗೂಡನ್ನು ನಿರ್ಮಿಸಿಕೊಳ್ಳುವ ಜಾಣ್ಮೆ ಇಲ್ಲಿಯ ಸ್ವಾರಸ್ಯವಾಗಿದೆ.

**31. "ಹಕ್ಕಿಗಳಿಗೆ ವಿಪರೀತ ಅಲಂಕಾರ ಪ್ರಜ್ಞೆ ಇದೆ".**

**ಆಯ್ಕೆ :** ಈ ವಾಕ್ಯವನ್ನು ಕೆ.ಪುಟ್ಟಸ್ವಾಮಿ ಕೃಪಾಕರ ಮತ್ತು ಸೇನಾನಿ ಅವರುಗಳು ಬರೆದಿರುವ 'ಜೀವಜಾಲ' ಎಂಬ ಕೃತಿಯಿಂದ ಆಯ್ದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ**: ಗೂಡಿನ ಒಳಭಾಗದಲ್ಲಿ ಶುಚಿತ್ವಕ್ಕೆ ಹೆಚ್ಚು ಮಹತ್ವ ನೀಡುತ್ತವೆ. ಗೂಡು ಎದ್ದು ಕಾಣದ ರೀತಿಯಲ್ಲಿ ರಚಿಸುತ್ತವೆ. ವರ್ಣಮಯ ಹೂ ದಳವನ್ನು ಅಥವಾ ಹೊಳೆವ ಕಲ್ಲುಗಳನ್ನು ಹೆಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಹಕ್ಕಿಗಳು ತಮ್ಮ ಗೂಡುಗಳನ್ನು ಅಲಂಕರಿಸಿ ಶುಚಿತ್ವಕ್ಕೆ ಮಹತ್ವ ನೀಡಿರುವುದು ಇಲ್ಲಿಯ ಸ್ವಾರಸ್ಯವಾಗಿದೆ.

**VII. ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**32.** ಹಕ್ಕಿಗೂಡುಗಳು ಪ್ರಕೃತಿಯಲ್ಲಿ ವಿಶೇಷ ಹಾಗೂ ವೈವಿಧ್ಯಮಯ ರಚನೆಗಳಾಗಿವೆ. ಹಕ್ಕಿಗಳಂತೆ ಅವು ಹಲವು ವಸ್ತುಗಳನ್ನು ಸಂಗ್ರಹಿಸಿ ಗೂಡುಗಳನ್ನು ನಿರ್ಮಿಸುವ ಕ್ರಮ ಬೇರೆ ಯಾವ ಪ್ರಾಣಿಗಳಲ್ಲೂ ಕಾಣುವುದಿಲ್ಲ. ಕ್ರಿಯೆಗೆ ಸ್ಪಷ್ಟ ಉದ್ದೇಶವಿರುತ್ತದೆ. ಅವು ರಕ್ಷಣೆಗಾಗಿ ಗೂಡನ್ನು ನಿರ್ಮಿಸುತ್ತವೆ. ಹವಾಮಾನ ವೈಪರೀತ್ಯಗಳನ್ನು ಎದುರಿಸಲು, ಮೊಟ್ಟೆ-ಮರಿಗಳನ್ನು ಕಾಪಾಡಲು, ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಸ್ಥಳಗಳನ್ನು ಹುಡುಕಿ ಗೂಡು ಕಟ್ಟುತ್ತವೆ. ಗೂಡು ಕಟ್ಟುವಷ್ಟೇ ಅದನ್ನು ಕಟ್ಟುವ ಸ್ಥಳದ ಆಯ್ಕೆಗೆ ಪ್ರಾಶಸ್ತ್ಯವೀಯುತ್ತವೆ. ಸಾಗರದ ದ್ವೀಪಗಳು, ಗಿರಿಶಿಖರದ ನೆತ್ತಿ, ಮನುಷ್ಯರು ಸುಳಿಯದ ನಿಬಿಡ ಅರಣ್ಯ, ಕಗ್ಗತ್ತಲ ಕಣಿವೆ, ಶೀತಲ ಧ್ರುವಪ್ರದೇಶ- ಹೀಗೆ ಎಲ್ಲ ಪರಿಸರಗಳಲ್ಲೂ ಅವು ಗೂಡುಗಳನ್ನು ಕಟ್ಟುತ್ತವೆ. ಬೇರೆ ಯಾವ ಪ್ರಾಣಿ ಸಮೂಹದಲ್ಲಿಯೂ ಈ ಸಾಮರ್ಥ್ಯ ಕಾಣಿಸುವುದಿಲ್ಲ. ಪರಿಸರದ ಬದಲಾವಣೆಗಳಿಗೂ ಅವು ಹೊಂದಿಕೊಳ್ಳುತ್ತವೆ. ಈಗೀಗ ಅವು ಮನುಷ್ಯರಿರುವ ಕೇರಿಗಳಲ್ಲಿ, ನಿಬಿಡ ವಾಹನ ಸಂಚಾರವಿರುವ ಸ್ಥಳಗಳಲ್ಲಿ ಗೂಡು ಕಟ್ಟುತ್ತಿವೆ. ಟ್ರಾನ್ಸಫಾರ್ಮರ್ ಬಳಿ, ಮೀಟರ್ ಪೆಟ್ಟಿಗೆಯಲ್ಲಿ, ವಿದ್ಯುತ್ ತಂತಿಗಳಲ್ಲೂ ತೂಗಾಡುವ ಗೂಡುಗಳನ್ನು ಈಗ ನೋಡಬಹುದಾಗಿದೆ.

**33**. ಹಕ್ಕಿಗಳು ಗೂಡಿನ ಒಳಭಾಗದಲ್ಲಿ ಶುಚಿತ್ವಕ್ಕೆ ಹೆಚ್ಚು ಮಹತ್ವ ನೀಡುತ್ತವೆ. ಗೂಡು ಎದ್ದುಕಾಣದ ರೀತಿಯಲ್ಲಿ ರಚಿಸುತ್ತವೆ. ಕೆಲವು ಹಕ್ಕಿಗಳಿಗೆ ವಿಪರೀತ ಅಲಂಕಾರ ಪ್ರಜ್ಞೆ ಇದೆ. ಅವು ಬಣ್ಣ ಬಣ್ಣದ ಹೂದಳವನ್ನೋ, ಹೊಳೆವ ಕಲ್ಲುಗಳನ್ನೋ ತಂದು ಗೂಡಿನ ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳು ಬಣ್ಣದ ಗಾಜಿನ ಚೂರು, ಚಿಂದಿಬಟ್ಟೆ ಮುಂತಾದುವನ್ನು ಗೂಡಿಗೆ ತರುತ್ತವೆ. ಅಮೆರಿಕಾದಲ್ಲಿ ಗ್ಯಾನೆಟ್ ಎಂಬ ಕಡಲ ಹಕ್ಕಿ ಗಾಲ್ಫ್ ಚೆಂಡು, ನೀಲಿ ಸೀಸೆಯ ಚೂರು, ಈರುಳ್ಳಿ ಸಿಪ್ಪೆ, ಸಣ್ಣ ಗೊಂಬೆಯೊಂದನ್ನು ತಂದು ಗೂಡನ್ನು ಅಲಂಕರಿಸಿದ್ದು 1942 ರಷ್ಟು ಹಿಂದೆಯೇ ವರದಿಯಾಗಿತ್ತು. ನಮ್ಮ ಕಾಡುಗಳಲ್ಲಿರುವ ನೀಲಿ ಸಾಮ್ರಾಟ ಮತ್ತು ಪ್ಯಾರಡೈಸ್ ಫ್ಲೈಕ್ಯಾಚರ್ (ಸಗ್ಗದಕ್ಕಿ) ತಮ್ಮ ಗೂಡುಗಳನ್ನು ಸುಂದರವಾಗಿ ಅಲಂಕರಿಸುತ್ತವೆ. ಎರಡು ಒಣ ಕಡ್ಡಿಗಳನ್ನು ಅಪ್ಪಿಹಿಡಿದಂತೆ ಬಟ್ಟಲಾಕಾರದಲ್ಲಿ ಅವು ಗೂಡು ಕಟ್ಟುತ್ತವೆ. ಹೊರಮೈಗೆ ನಿರ್ದಿಷ್ಟ ಅಂತರದಲ್ಲಿ ಜೋಡಿಸಿ ಅಲಂಕರಿಸುತ್ತವೆ. ಶತ್ರುಗಳ ಕಣ್ಣಿಗೆ ಗೂಡು ಕಾಣದಂತೆ ಮರೆಮಾಚುತ್ತವೆ. ಹೀಗೆ ಈ ಹಕ್ಕಿಗಳ ಗೂಡುಗಳು ಭದ್ರತೆ, ತಾಂತ್ರಿಕ ಪರಿಣತಿ, ಕಲಾತ್ಮಕ ಪ್ರಜ್ಞೆಯನ್ನು ಏಕಕಾಲಕ್ಕೆ ಒಟ್ಟಿಗೆ ಅಭಿವ್ಯಕ್ತಿಸುತ್ತವೆ.

**VIII. ಪ್ರಬಂಧ ಬರವಣಿಗೆ:**

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

**34**. ಕಂಪ್ಯೂಟರ್‌ನ ಉಪಯೋಗಗಳು

**35**. ರಾಷ್ಟ್ರೀಯ ಭಾವೈಕ್ಯತೆ

**IX ಪತ್ರಲೇಖನ ಬರೆಯುವುದು**.

**36. ವ್ಯವಹಾರಿಕ/ ಮನವಿ ಪತ್ರ**

ಇಂದ,ಗೆ, ಸಂಬೋಧನೆ, ವಿಷಯ 1 ಅಂಕ

ಪತ್ರದ ಒಡಲು, ವಿಷಯ ನಿರೂಪಣೆ 2 ಅಂಕಗಳು

ವಂದನೆಯೊಂದಿಗೆ ಮಕ್ತಾಯ, ಇಂತಿ,ಸ್ಥಳ, ದಿನಾಂಕ 1 ಅಂಕ

ಭಾಷಾ ಶೈಲಿಗೆ, ಪದ ಬಳಕೆ ವಿನ್ಯಾಸ 1 ಅಂಕ

**ಒಟ್ಟು 5 ಅಂಕಗಳು**

**37. ಖಾಸಗಿ ಪತ್ರ/ಗೆಳೆಯನಿಗೆ**

ಇಂದ, ದಿನಾಂಕ, ಸಂಬೋಧನೆ, ಕ್ಷೇಮವಿಚಾರ 1 ಅಂಕ

ಪತ್ರದ ಒಡಲು, ವಿಷಯ ನಿರೂಪಣೆ 2 ಅಂಕಗಳು

ಮಕ್ತಾಯ, ಇಂತಿ, ಸಹಿ ಹೊರ ವಿಳಾಸ 1 ಅಂಕ

ಭಾಷಾ ಶೈಲಿಗೆ, ಪದ ಬಳಕೆ ವಿನ್ಯಾಸ 1 ಅಂಕ

**ಒಟ್ಟು 5 ಅಂಕಗಳು**

## ಗದ್ಯ ಪಾಠ- 5 ಕಾಫೀ-ಕಪ್

### : ಮಾದರಿ ಉತ್ತರಗಳು:

**I ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

1. (ಎ) ಆಕ್ಷೇಪಣೆ
2. (ಎ) ಅತಿ+ಅಂತ
3. (ಬಿ) ಲೋಪಸಂಧಿ
4. (ಸಿ) ಕತ್ತುರಿ
5. (ಬಿ) ದ್ವಿರುಕ್ತಿ
6. (ಬಿ) ಸಪ್ತಮಿ
7. (ಡಿ) ಅರಮನೆ
8. (ಬಿ) ಕರ್ಮಧಾರಯ
9. (ಸಿ) ಮರದ+ಕಾಲು
10. (ಸಿ) ಹೊಂಬಾಳೆ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**11.** ಹೆಡ್ ಮಾಸ್ತರರು ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಕಂಡು ಸಂತೋಷಗೊಂಡರು.

**12**. ವಿದ್ಯಾರ್ಥಿಗಳು ಕಾಫೀ ಕುಡಿಯಲು ಬೆಲೆ ಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

**13**. ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಉತ್ತಮವಾದುದನ್ನು ಪಡೆಯಬೇಕು ಎನ್ನುವ ಆಸೆ.

**14**. ಗುರುಗಳು ಹೇಳಿದಂತೆ ಕಾಫೀ ಜೀವನ ಇದ್ದಂತೆ, ಕಾಫಿಯ ಕಪ್ಪು ಹಣ, ಅಂತಸ್ತು, ಅಧಿಕಾರದ ಪ್ರತೀಕಗಳು ಎಂದು ಹೇಳಿದ್ದಾರೆ.

**15**. ಕಾಫೀಗಿಂತ ಕಾಫಿಯ ಕಪ್ಪಿಗೆ ಹೆಚ್ಚು ಮಹತ್ವ ನೀಡಿರುವುದು ದುರ್ದೈವದ ಸಂಗತಿ ಎಂದು ಗುರುಗಳು ಬಣ್ಣಿಸಿದರು.

**16**. ಹಳೆಯ ವಿದ್ಯಾರ್ಥಿಗಳೆಲ್ಲ ಹೆಡ್ ಮಾಸ್ತರರ ಮನೆಗೆ ಹೋದರು.

**17**. ಮಕ್ಕಳ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಲ್ಲವರೆ ನಿಜವಾದ ಶ್ರೇಷ್ಠ ಗುರುಗಳು.

**18**. ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ 'ಕರುಣಾಳು ಬಾ ಬೆಳಕೆ'.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**19** ಹಿರಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು. ಒಂದಲ್ಲ ಒಂದು ತಕರಾರು. ಎಲ್ಲ ಕಡೆ ವ್ಯಾಪಾರ ಕಡಿಮೆಯಾಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತಿದೆ. ಹಣಕ್ಕೆ ಬೆಲೆಯೇ ಇಲ್ಲ, ಮಕ್ಕಳು ಬೆಳೆಯುತ್ತಿದ್ದಾರೆ. ಅವರನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ. ಈ ರೀತಿಯಾಗಿ ತೊಂದರೆಗಳ ಸರಮಾಲೆ ಬೆಳೆಯುತ್ತಿದೆ. ಎಂದು ಹೆಡ್ ಮಾಸ್ತರರ ಬಳಿ ತಮ್ಮ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು.

**20**. ಹೆಡ್ ಮಾಸ್ತರ್ ತಂದಿಟ್ಟ ಟ್ರೇನಲ್ಲಿ ಸುಮಾರು 30-35 ಕಪ್‌ಗಳಿದ್ದವು. ಅದರಲ್ಲಿ ಕೆಲವು ಅತ್ಯಂತ ಬೆಲೆಬಾಳುವಂತಹವು. ಚೈನಾ ಪಿಂಗಾಣಿಗಳು, ಕೆಲವು ಸುಂದರ ಗಾಜಿನವು, ಕೆಲವು ಪ್ಲಾಸ್ಟಿಕ್ ಕಪ್ಪುಗಳು, ಇನ್ನು ಕೆಲವು ಏನೂ ಬೆಲೆಬಾಳದ ಗಾಜಿನವು ಮತ್ತು ಕೆಲವು ಸ್ಟೀಲಿನ ಲೋಟಗಳು ಇದ್ದವು.

**21.** ಹೆಡ್ ಮಾಸ್ತರರು ' ಮಕ್ಕಳೇ ಒಂದು ಐದು ನಿಮಿಷ ಇರಿ, ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲ ವರ್ಷವಾಯಿತು. ಆದರೆ ನನ್ನ ಕಾಫೀ ಕೂಡ ತುಂಬ ಚೆನ್ನಾಗಿರುತ್ತದೆ. ಎಂದು ಹೇಳಿ ಜೋರಾಗಿ ನಕ್ಕು ಅಡುಗೆ ಮನೆಗೆ ಹೋದರು.

**22** "ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಈ ಕಾಫಿ ಮಾತ್ರ. ಕಪ್ಪುಗಳನ್ನಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ, ಅಲಂಕಾರಗಳ ಬೆನ್ನತ್ತಿ ಓಡಿ ಓಡಿ ಜೀವನವನ್ನು ಮರೆಯಬೇಡಿ. ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದು ಸಿಕ್ಕಿರಲಿಕ್ಕಿಲ್ಲ. ಆದರೆ ಸಿಕ್ಕಿರುವುದನ್ನು ಹೇಗೆ ಚೆನ್ನಾಗಿ ಆಸ್ವಾದಿಸಬೇಕು ಎನ್ನುವುದು ಗೊತ್ತಿದೆ. ಎಂದು ಗುರುಗಳು ಹೇಳಿದರು.

**IV. ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

ಗಾದೆ ಮಹತ್ವದ ವಿವರಣೆ 1 ಅಂಕ

ಅರ್ಥ ವಿವರಣೆ 1 ಅಂಕ

ಭಾಷಾ ಶೈಲಿಗೆ, ಪದಬಂಧಗಳಿಗೆ 1 ಅಂಕ

**ಒಟ್ಟು 3ಅಂಕಗಳು**

**23**. "ಕೈ ಕೆಸರಾದರೆ ಬಾಯಿ ಮೊಸರು".

**24.** "ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ".

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**25 "ಸಾಧಾರಣವಾದ ಕಪ್ಪುಗಳನ್ನು ಅಲ್ಲಿಯೇ ಬಿಟ್ಟು ಬಂದಿರಿ".**

**ಆಯ್ಕೆ** : ಈ ವಾಕ್ಯವನ್ನು ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿಯವರು ಬರೆದಿರುವ ಕರುಣಾಳು ಬಾ ಬೆಳಕೆ' ಎಂಬ ಕೃತಿಯಿಂದ ಆಯ್ದ 'ಕಾಫೀ-ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ**:ಈ ಮಾತನ್ನು ಗುರುಗಳು ತಮ್ಮ ಮನೆಗೆ ಬಂದಿದ್ದ ಹಳೆಯ ವಿದ್ಯಾರ್ಥಿಗಳನ್ನು ಕುರಿತು ಹೇಳುತ್ತಾರೆ. ಗುರುಗಳು ತಂದಿಟ್ಟ ಕಾಫಿಯನ್ನು ವಿದ್ಯಾರ್ಥಿಗಳು ಸಾಧ್ಯವಾದಷ್ಟು ಉತ್ತಮ ಕಪ್ಪುಗಳಿಗೆ ಹಾಕಿಕೊಂಡು ಕುಡಿಯುವುದನ್ನು ಗಮನಿಸಿದ ಗುರುಗಳು ಈ ಮಾತನ್ನು ಹೇಳುತ್ತಾರೆ. ಎಲ್ಲರಿಗೂ ಉತ್ತಮವಾದುದ್ದೇ ಬೇಕೆಂಬ ಮನೋಭಾವನೆ ಇದ್ದ ಕಾರಣ ಸಾಧಾರಣ ಕಪ್ಪುಗಳನ್ನು ಎಲ್ಲರೂ ಅಲ್ಲಿಯೇ ಬಿಟ್ಟು ಬಂದಿರಿ. ಇಂತಹ ಮನೋಭಾವನೆಯೇ ನಮ್ಮ ತೊಂದರೆಗಳಿಗೆ ನಿಜವಾದ ಕಾರಣ ಎಂದು ತಿಳಿಸುತ್ತಾರೆ.

**ಸ್ವಾರಸ್ಯ:** ಜೀವನದಲ್ಲಿ ಸದಾ ಉತ್ತಮವಾದುದ್ದನ್ನೇ ಪಡೆಯಬೇಕು ಎಂಬ ನಮ್ಮ ಮನೋಭಾವನೆಯು ನಮ್ಮ ಜೀವನದ ತೊಂದರೆಗಳಿಗೆ ಕಾರಣವಾಗುತ್ತದೆ ಎಂಬ ಸ್ವಾರಸ್ಯವು ಇಲ್ಲಿ ವ್ಯಕ್ತಗೊಂಡಿದೆ.

**26. "ನಿಜವಾದ ಶಿಕ್ಷಕನಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರಿಯರಾಗುತಾರೆ".**

**ಆಯ್ಕೆ** : ಈ ವಾಕ್ಯವನ್ನು ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿಯವರು ಬರೆದಿರುವ ಕರುಣಾಳು ಬಾ ಬೆಳಕೆ' ಎಂಬ ಕೃತಿಯಿಂದ ಆಯ್ದ 'ಕಾಫೀ-ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಲೇಖಕರು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವಿನ ಬಾಂಧವ್ಯವನ್ನು ಕುರಿತು ಹೇಳುತ್ತಾರೆ. ಗುರುಗಳು ತಂದೆಯ ಸ್ಥಾನದಲ್ಲಿ ನಿಂತು ನಮಗೆ ಮಾರ್ಗದರ್ಶನ ನೀಡುತ್ತಾರೆ. ಬದುಕಿನ ಪಾಠ ಕಲಿಸುತ್ತಾರೆ. ವಿದ್ಯಾರ್ಥಿಗಳ ಯಶಸ್ಸನ್ನು ಬಯಸುತ್ತಾರೆ. ಈ ಕಾರಣದಿಂದಲೇ ವಿದ್ಯಾರ್ಥಿಗಳು ಶಿಕ್ಷಕನಿಗೆ ಸ್ವಂತ ಮಕ್ಕಳಿಗಿಂತ ಹೆಚ್ಚು ಪ್ರಿಯರಾಗುತ್ತಾರೆ ಎಂದು ಲೇಖಕರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ನಿಜವಾದ ಗುರುಗಳಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರಿಯರಾಗುತ್ತಾರೆ. ಎಂಬುದು ಇಲ್ಲಿ ಸ್ವಾರಸ್ಯವಾಗಿದೆ.

**27. "ನನ್ನ ಕಾಫೀ ಕೂಡ ತುಂಬ ಚೆನ್ನಾಗಿರುತ್ತದೆ".**

**ಆಯ್ಕೆ :** ಈ ವಾಕ್ಯವನ್ನು ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿಯವರು ಬರೆದಿರುವ ಕರುಣಾಳು ಬಾ ಬೆಳಕೆ' ಎಂಬ ಕೃತಿಯಿಂದ ಆಯ್ದ 'ಕಾಫೀ-ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಹೆಡ್ ಮಾಸ್ತರರು ಹಳೆಯ ವಿದ್ಯಾರ್ಥಿಗಳಿಗೆ ಹೇಳಿದರು. ಹಳೆಯ ವಿದ್ಯಾರ್ಥಿಗಳು ಹೆಡ್ ಮಾಸ್ತರನ್ನು ನೋಡಲು ಮನೆಗೆ ಹೋದಾಗ ಹೆಡ್ ಮಾಸ್ತರರು ಅವರನ್ನು ಕುಳಿತುಕೊಳ್ಳಲು ಹೇಳಿ ಕಾಫೀ ಮಾಡಲು ಒಳಗೆ ಹೋಗುವಾಗ ಮಕ್ಕಳೇ ಒಂದು ನಿಮಿಷ ಇರಿ, ನಿಮಗೆಲ್ಲಾ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ, ನನ್ನ ಹೆಂಡತಿ ಹೋಗಿ ಕೆಲವು ವರ್ಷಗಳಾಯಿತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ**: ಹೆಡ್ ಮಾಸ್ತರರು ಹಳೆಯ ವಿದ್ಯಾರ್ಥಿಗಳಿಗೆ ಕಾಫೀ ಮಾಡಿಕೊಡಲು ಹೊರಟಿರುವುದು ಇಲ್ಲಿ ಸ್ವಾರಸ್ಯವಾಗಿದೆ.

**28. "ನಿಮಗೆಲ್ಲ ಒಳ್ಳೆಯ ಕಾಫಿ ಮಾಡಿಕೊಂಡು ಬರುತ್ತೇನೆ."**

**ಆಯ್ಕೆ :** ಈ ವಾಕ್ಯವನ್ನು ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿಯವರು  ಬರೆದಿರುವ ಕರುಣಾಳು ಬಾ ಬೆಳಕೆ' ಎಂಬ ಕೃತಿಯಿಂದ ಆಯ್ದ 'ಕಾಫೀ-ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ**: ಈ ಮಾತನ್ನು ಹೆಡ್ ಮಾಸ್ತರರು ತಮ್ಮ ಹಳೆಯ ವಿದ್ಯಾರ್ಥಿಗಳಿಗೆ ಹೇಳಿದರು. ತಮ್ಮನ್ನು ನೋಡಲು ಬಂದಿದ್ದ ಹಳೆಯ ವಿದ್ಯಾರ್ಥಿಗಳನ್ನು ಮನೆಯಲ್ಲಿ ಕೂರಿಸಿ ಮಾತನಾಡುತ್ತಿದ್ದರು. ಆ ಹಿರಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು. ಆಗ ಹೆಡ್ ಮಾಸ್ತರರು ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವು ವರ್ಷವಾಯಿತು. ಆದರೆ ನನ್ನ ಕಾಫೀ  ಕೂಡ ಚೆನ್ನಾಗಿರುತ್ತದೆ' ಎಂದು ವಿದ್ಯಾರ್ಥಿಗಳಿಗೆ ನಗುತ್ತಾ ಹೇಳಿ ಅಡುಗೆಮನೆಗೆ ಹೋಗುವಾಗ ಹೇಳುವ ಮಾತು.

**ಸ್ವಾರಸ್ಯ:** ಇಲ್ಲಿ ವಿದ್ಯಾರ್ಥಿಗಳ ಗುರುಭಕ್ತಿ ಹಾಗೂ ಗುರುವಿಗೂ ತಮ್ಮ ಹಳೆಯ ವಿದ್ಯಾರ್ಥಿಗಳ ಮೇಲಿನ ಪ್ರೀತಿ, ಸ್ವಾರಸ್ಯಕರವಾಗಿ ಮೂಡಿಬಂದಿದೆ.

**29. "ನೀವು ಗಮನಿಸಿದ್ದೀರಾ? ನೀವೆಲ್ಲ ಎಂಥ ಕಪ್ಪು ಆರಿಸಿಕೊಂಡಿದ್ದೀರಿ"?**

**ಆಯ್ಕೆ** : ಈ ವಾಕ್ಯವನ್ನು ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿಯವರು  ಬರೆದಿರುವ ಕರುಣಾಳು ಬಾ ಬೆಳಕೆ' ಎಂಬ ಕೃತಿಯಿಂದ ಆಯ್ದ 'ಕಾಫೀ-ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ**: ಈ ಮಾತನ್ನು ಹೆಡ್ ಮಾಸ್ತರರು ಹಳೆಯ ವಿದ್ಯಾರ್ಥಿಗಳಿಗೆ ಹೇಳಿದರು. ಹೆಡ್ ಮಾಸ್ತರರು  ಸುಮಾರು 30-35 ಕಾಫೀ ಕಪ್ಪುಗಳನ್ನು ತಂದು ಇಡುತ್ತಾರೆ. ಅವುಗಳಲ್ಲಿ ಕೆಲವು ಕಪ್ಪುಗಳು ಬೆಲೆ ಬಾಳುವಂತಹುದು, ಕೆಲವು ಸ್ಟೀಲಿನದ್ದು, ಕೆಲವು ಪಿಂಗಾಣಿಯದು. ಇನ್ನು ಕೆಲವು ಪ್ಲಾಸ್ಟಿಕ್ ನದ್ದಾಗಿರುತ್ತದೆ. ಆದರೆ ಎಲ್ಲರೂ ಬೆಲೆಬಾಳುವ ಕಪ್ಪನ್ನೇ ಆರಿಸಿಕೊಳ್ಳುತ್ತಾರೆ. ಇದನ್ನು ಗಮನಿಸಿದ ಹೆಡ್ ಮಾಸ್ತರರು ಈ ಮೇಲಿನ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ**: ಪ್ರತಿಯೊಬ್ಬ ವ್ಯಕ್ತಿಯೂ ಉತ್ತಮವಾದುದನ್ನೇ ಪಡೆಯಬೇಕು ಎನ್ನುವಲ್ಲಿ ಗಮನ ಹರಿಸುವುದು ಇಲ್ಲಿ ವಿಶೇಷವಾಗಿದೆ.

**30. "ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ".**

**ಆಯ್ಕೆ :** ಈ ವಾಕ್ಯವನ್ನು ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿಯವರು ಬರೆದಿರುವ ಕರುಣಾಳು ಬಾ ಬೆಳಕೆ' ಎಂಬ ಕೃತಿಯಿಂದ ಆಯ್ದ 'ಕಾಫೀ-ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಹೆಡ್ ಮಾಸ್ತರರು ವಿದ್ಯಾರ್ಥಿಗಳಿಗೆ ಹೇಳಿದ್ದಾರೆ. ಭಗವಂತ ನಮಗೆ ಕಾಫೀ ಮಾತ್ರ ಕೊಟ್ಟಿದ್ದಾರೆ.ಕಪ್ಪುಗಳನ್ನಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಜೀವನವನ್ನು ಆಸ್ವಾದಿಸಿ, ಅಲಂಕಾರಗಳ ಬೆನ್ನತ್ತಿ ಓಡಿ-ಓಡಿ ಜೀವನವನ್ನು ಮರೆಯಬೇಡಿ. ಕಾಫೀಯನ್ನು ಆಸ್ವಾದಿಸಿ ಎಂದು ಹೆಡ್‌ಮಾಸ್ತರರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಮನುಷ್ಯನ ಪ್ರಸ್ತುತ ನೈಜ ಬದುಕನ್ನು ಒಂದು ಕಾಫೀಗೆ ಮತ್ತು ಕಾಫೀಯ ಕಪ್ಪಿಗೆ ಹೋಲಿಸಿರುವುದು ಇಲ್ಲಿ ಸ್ವಾರಸ್ಯವಾಗಿದೆ.

**31. "ಕಪ್ಪುಗಳ ಚಿಂತೆ ಬೇಡ, ಕಾಫೀ ಆಸ್ವಾದಿಸಿ".**

**ಆಯ್ಕೆ :** ಈ ವಾಕ್ಯವನ್ನು ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರ್ಜಗಿಯವರು ಬರೆದಿರುವ ಕರುಣಾಳು ಬಾ ಬೆಳಕೆ' ಎಂಬ ಕೃತಿಯಿಂದ ಆಯ್ದ 'ಕಾಫೀ-ಕಪ್ಪು' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಹೆಡ್‌ಮಾಸ್ತರರು ತಮ್ಮ ಹಳೆಯ ವಿದ್ಯಾರ್ಥಿಗಳು ಉತ್ತಮವಾದ ಕಪ್ಪುಗಳನ್ನು ಆಯ್ಕೆ ಮಾಡಿಕೊಂಡಾಗ ಹೇಳುವ ಮಾತಿದು. ಮೊದಲು ನಮ್ಮ ಜೀವನವನ್ನು ಆಸ್ವಾದಿಸಿ, ಅಲಂಕಾರಗಳ ಬೆನ್ನತ್ತಿ ಓಡಿ ಓಡಿ ಜೀವನವನ್ನು ಮರೆಯಬೇಡಿ. ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದು ಸಿಕ್ಕಿರಲಿಕ್ಕಿಲ್ಲ ಎಂದು ಹೇಳುತ್ತಾರೆ.

**ಸ್ವಾರಸ್ಯ :** ಸಿಕ್ಕಿರುವುದನ್ನು ಹೇಗೆ ಚೆನ್ನಾಗಿ ಆಸ್ವಾದಿಸಬೇಕು ಎಂಬುದು ಇದರ ಸ್ವಾರಸ್ಯವಾಗಿದೆ.

**VI ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**32.** ಗುರುಗಳು ಸುಖ ಜೀವನದ ಪಾಠವನ್ನು ಕಾಫೀ- ಕಪ್ಪುಗಳಿಗೆ ಹೋಲಿಸುತ್ತಾ ಈ ರೀತಿಯಾಗಿ ಹೇಳಿದರು. "ಮಕ್ಕಳೇ! ನೀವೆಲ್ಲರೂ ಬೆಲೆ ಬಾಳುವ ಕಪ್ಪುಗಳನ್ನೇ ಆರಿಸಿಕೊಡಿದ್ದೀರಾ! ಸಾಧಾರಣ ಕಪ್ಪುಗಳನ್ನು ಅಲ್ಲಿಯೇ ಬಿಟ್ಟು ಬಂದಿರಿ. ಅಂದರೆ ನಿಮಗೆ ಇಷ್ಟವಾದುದನ್ನೇ ಪಡೆಯಬೇಕು ಎನ್ನುವ ಆಸೆ. ಬಹುಶಃ ಅದೇ ನಿಮ್ಮ ತೊಂದರೆಗೆ ಕಾರಣ. ಕಾಫೀ ಎಂದರೆ ಜೀವನ, ಕಪ್ಪು ಎಂದರೆ ಹಣ, ಅಂತಸ್ತು, ಅಧಿಕಾರ ಇದ್ದಂತೆ. ಅವೆಲ್ಲ ಜೀವನವನ್ನು ಧರಿಸಲು

ಬೇಕಾದ ಸಾಧನಗಳು ಅಷ್ಟೇ. ನೀವು ಹಿಡಿದ ಕಪ್ಪು ಕಾಫೀಯ ರುಚಿಯನ್ನು ಬದಲಿಸಲಾರದು. ಆದರೆ ದುರ್ದೈವವೆಂದರೆ ನಾವು ಕಾಫೀಗಿಂತ ಕಪ್ಪಿಗೆ ಹೆಚ್ಚು ಮಹತ್ವ ಕೊಡುತ್ತೇವೆ. ಮತ್ತೊಬ್ಬರ ಕಪ್ಪನ್ನು ನೋಡಿ ಅಸೂಯೆ ಪಡುತ್ತೇವೆ. 'ಜೀವನವನ್ನು ಆಸ್ವಾದಿಸಿ, ಕಪ್ಪುಗಳ ಚಿಂತೆ ಬೇಡ, ಕಾಫೀ ಆಸ್ವಾದಿಸಿ' ಎಂದು ಸುಖ ಜೀವನದ ಪಾಠವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

**33**. ಸುಖಜೀವನ ವ್ಯಕ್ತಿಯ ಒಳಗಿದೆ ಏಕೆಂದರೆ ಮನಸ್ಸು ಶುದ್ಧವಾಗಿರಬೇಕು. ನಿರ್ಮಲವಾಗಿರಬೇಕು. ಇವೆರಡೂ ಇರಬೇಕಾದರೆ ಮೊದಲು ದುರಾಸೆ ಬಿಡಬೇಕು.ನಾವು ಕಷ್ಟ ಪಟ್ಟು ದುಡಿದು ತಿನ್ನಬೇಕು ಹಾಗೂ ಇತರರಿಗೂ ಸಹಾಯ ಮಾಡಬೇಕು. ಕಷ್ಟ ಇದ್ದವರಿಗೆ ಹಣದ ಮೂಲಕ ಅಥವಾ ಇಲ್ಲವೆ ಮಾರ್ಗದರ್ಶನದ ಮೂಲಕ ಮುಂದೆ ಬರಲು ಸಹಕರಿಸಬೇಕು. ಯಾವುದೇ ಸಹಾಯ ಮಾಡಬೇಕಾದರೆ ಯಾವುದೇ ಫಲವನ್ನು ಬಯಸಬಾರದು. ನಮ್ಮಲ್ಲಿ ಇರುವುದರ ಬಗ್ಗೆ ಹೆಮ್ಮೆ ಪಡಬೇಕು ಹೊರತು ಇತರರ ವಸ್ತುವಿನ ಮೇಲೆ ವ್ಯಾಮೋಹ ಬೇಡ. ಭಗವಂತ ನಮಗೆ ಅಂತಲೇ ಒಂದು ಜೀವನ ನೀಡಿದ್ದಾನೆ. ಅದನ್ನು ಇನ್ನೂ ಸುಂದರವಾಗಿಸೋಣ. ಪ್ರತಿಯೊಂದು ಸನ್ನಿವೇಶವನ್ನೂ ಆಸ್ವಾದಿಸೋಣ ಇನ್ನೂ ಎತ್ತರ ಎತ್ತರ ಶ್ರೇಣಿಯನ್ನು ತಲುಪೋಣ. ನಮ್ಮ ಜೀವನದಲ್ಲಿ ಎಲ್ಲವನ್ನು ಶುದ್ಧ ಮನಸ್ಸಿನಿಂದ ಮಾಡಿದರೆ ನಮ್ಮ ಜೀವನ ಸುಖ ಜೀವನವಾಗುತ್ತದೆ.

**VII ಗದ್ಯ ಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು. (ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು**)

**34 ಅ)** ಒಂದು ಒಳ್ಳೆಯ ಪುಸ್ತಕವು ಕಷ್ಟಕಾಲದಲ್ಲಿ ಸ್ನೇಹಿತನಾಗುತ್ತಾನೆ. ಸಮಸ್ಯೆಗಳಿಗೆ ಪರಿಹಾರ ಹೇಳುತ್ತದೆ. ಏಕಾಕಿತನದ ಭಾರವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಎಂತಹ ಆಳವಾದ ದುಃಖವನ್ನೂ ಮರೆಯಲು ಸಹಾಯ ಮಾಡುತ್ತದೆ.

**ಆ)** "ಪುಸ್ತಕಗಳು ಜ್ಞಾನ ಭಂಡಾರದ ಕೀಲಿಕೈ ಇದ್ದಂತೆ". ಅದು ಚಿರಂತನ ಸತ್ಯ. ಜಗತ್ತಿನ ಎಲ್ಲಾ ಕಾಲದ ಜ್ಞಾನಿಗಳು ತಮ್ಮ ಸಮಸ್ತ ಜ್ಞಾನವನ್ನು ಪುಸ್ತಕದ ರೂಪದಲ್ಲಿ ತಮ್ಮ ಹಾಗೂ ಮುಂದಿನ ಪೀಳಿಗೆಗೆ ಬಳುವಳಿಯಾಗಿ ಕೊಟ್ಟು ಹೋಗಿರುತ್ತಾರೆ. ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ನಿಲುಕಬಹುದಾದ ಅಮೂಲ್ಯ ಸಂಪತ್ತು ಇದು. ಈ ನಿಧಿಯ ಮೌಲ್ಯದ ಅರಿವು ಇದ್ದವರು ಅದನ್ನು ಬಾಚಿ ಬಳಿದುಕೊಂಡು ತಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕು.

**VIII ಪ್ರಬಂಧ ಬರವಣಿಗೆ:**

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

**35**. ವಾಯು ಮಾಲಿನ್ಯದಿಂದಾಗುವ ಪರಿಣಾಮಗಳು

**36**. ಮೌಲ್ಯಶಿಕ್ಷಣದ ಮಹತ್ವ.

## ಗದ್ಯ ಭಾಗ-6 ಗಂಗೆಯಲ್ಲಿ ದೀಪಮಾಲೆ

### : ಮಾದರಿ ಉತ್ತರಗಳು:

**I ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

**1**. (ಸಿ) ಸಾಮಾನ್ಯ ಅವ್ಯಯ

**2**. (ಎ) ಅಯ್ಯೋ!

**3**. (ಬಿ) ಅನುಕರಣಾ ಅವ್ಯಯ

**4**. (ಬಿ) ದ್ವಿರುಕ್ತಿ

**5.** (ಎ) ಸಿಹಿ-ಕಹಿ

**6**. (ಬಿ) ಬೊಮ್ಮ

**7.** (ಸಿ) ಸಾಕು

**8.** (ಬಿ) ಅವಧಾರಣಾರ್ಥಕ ಅವ್ಯಯ

**9**. (ಎ) ರಾಜ

**10**. (ಡಿ) ಶರಣೆ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :**

**11.** ಹರಿದ್ವಾರದಲ್ಲಿ ಲೇಖಕರಿಗೆ ಗಂಗಾನದಿಯ ಬ್ರಹ್ಮ ಕುಂಡದಲ್ಲಿ ನಡೆಯುವ ಆರತಿಯನ್ನು ನೋಡಬೇಕೆಂಬುದು ಗುರಿಯಾಗಿತ್ತು.

**12**. ಹ್ಯೂಯೆನ್ ತ್ಸಾಂಗ್ ನು ಹರಿದ್ವಾರವನ್ನು ಮೊಯುಲೊ ಅಥವಾ ಮಯೂರ ಎಂದು ಕರೆದಿದಾರೆ.

**13.** ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು.

**14.** ಗಂಗೆಯ ದೇವಸ್ಥಾನದ ಸುತ್ತ ಎದ್ದ ಗಂಟೆ, ಜಾಗಟೆ, ಶಂಖಗಳ ಸದ್ದು ಗಂಗೆಯ ದಡದ ಆವರಣವನ್ನು ತರಂಗಿತವಾಗಿಸಿತು.

**15**. ಚೀನಾ ದೇಶದ ಬೌದ್ಧ ಯಾತ್ರಿಕ ಹ್ಯೂಯೆನ್ ತ್ಸಾಂಗ್.

**16.** ಹ್ಯೂಯೆನ್ ತ್ಸಾಂಗ್ ಬರೆದ ಗ್ರಂಥ ಸಿ-ಯು-ಕಿ.

**17**. ಶಂತನುವಿನ ತಂದೆಯ ಹೆಸರು ಪ್ರದೀಪ.

**18**. ಅರ್ಜುನನ್ನು ಸೆಳೆದುಕೊಂಡ ಹೋದ ನಾಗಲೋಕದ ಕನ್ಯೆ ಉಲೂಪಿ.

**III ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**19.** ಹರಿದ್ವಾರವನ್ನು ಲೇಖಕರು ಎರಡು ಬದಿಗೆ ಎತ್ತರದ ಮನೆಗಳನ್ನು ಹಬ್ಬಿಸಿಕೊಂಡ ಇಕ್ಕಟ್ಟಾದ ಬೀದಿಗಳ ಸಾಲುಗಳು ಇವೆ. ನಡು ನಡುವೆ ತಟ್ಟನೆ ಕಣ್ಣನ್ನು ಸೆಳೆಯುವ ಗುಡಿಗಳು, ಆಶ್ರಮಗಳು, ಧರ್ಮಶಾಲೆಗಳು ಇತ್ಯಾದಿಗಳಿಂದ ಮತ್ತು ಎಲ್ಲಾ ತೀರ್ಥಕ್ಷೇತ್ರಗಳಿಗೂ ಸಮಾನ ಅಂಶವಾದ ಗಲೀಜುಗಳಿಂದ ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಂಡಿದೆ ಎಂದು ವರ್ಣಿಸಿದ್ದಾರೆ.

**20.** ಸಗರ ಪುತ್ರರನ್ನು ಕಪಿಲ ಮಹರ್ಷಿಯು ತನ್ನ ಕೋಪಾಗ್ನಿಯಿಂದ ಬೂದಿ ಮಾಡಿದನು. ನಂತರ ಸಗರ ವಂಶದ ಭಗೀರಥನು ತನ್ನ ಪಿತೃಗಳಿಗೆ ಸದ್ಗತಿಯನ್ನು ಕಾಣಿಸಲು ಗಂಗೆಯನ್ನು ತಂದು ಹರಿಸಿದ ಸ್ಥಳವೆ ಕಪಿಲಸ್ಥಾನ ಅದೇ ಈಗಿನ ಹರಿದ್ವಾರವಾಗಿದೆ.

**21.** ಮಹಾಭಾರತದಲ್ಲಿಯೇ ಗಂಗಾ ದ್ವಾರದ ಉಲ್ಲೇಖ ಸಾಕಷ್ಟು ಸಲ ಕಾಣಿಸಿಕೊಂಡಿದೆ. ಶಂತನುವಿನ ತಂದೆ ಪ್ರದೀಪನು ಗಂಗಾ ದ್ವಾರದಲ್ಲಿ ತಪಸ್ಸನ್ನು ಆಚರಿಸಿದನು. ದ್ರೋಣನ ತಂದೆ ಭಾರದ್ವಾಜನು ಅಪ್ಸರೆಯಾದ ಘೃತಾಚಿಯನ್ನು ಕಂಡು ಮೋಹಗೊಂಡು ದ್ರೋಣಾಚಾರ್ಯನ ಹುಟ್ಟಿಗೆ ಕಾರಣನಾದದ್ದು ಗಂಗಾದ್ವಾರದಲ್ಲಿ. ಅರ್ಜುನನು ತನ್ನ ತೀರ್ಥಯಾತ್ರೆಯ ಸಂದರ್ಭದಲ್ಲಿ ಕೆಲವು ಕಾಲ ಗಂಗಾದ್ವಾರದಲ್ಲಿ ತಂಗಿದ್ದನು ಹೀಗೆ ಅನೇಕ ಪ್ರಸಂಗಗಳನ್ನು ಕಾಣಬಹುದು.

**22**. ನದಿ, ಬೆಟ್ಟ, ಬಯಲು, ಆಕಾಶ ಇವು ನಿಜವಾದ ದೇವರಲ್ಲದೆ, ಗುಡಿಯೊಳಗಿನ ನಾಲ್ಕು ಗೋಡೆಗಳ ನಡುವೆ, ಉಸಿರು ಕಟ್ಟಿಸುವ ಧೂಪ-ದೀಪ-ನೈವೇದ್ಯ ಮಂತ್ರಾದಿಗಳ ಮಧ್ಯೆ ಗರ್ಭಗುಡಿಯ ಮಂದವಾದ ಮಂಕು ಬೆಳಕಿನ ವಾತಾವರಣದಲ್ಲಿ ವಿಗ್ರಹವನ್ನು ದೇವರೆಂದು ಭಾವಿಸಿ ಪೂಜಿಸುವ ಪ್ರವೃತ್ತಿ ಎಷ್ಟೊಂದು ಸಂಕುಚಿತವಾದದ್ದು, ಈ ಮುಕ್ತ ನಿಸರ್ಗಧಾರೆಯ ಮುಂದೆ ಎಂದು ಸಮರ್ಥಿಸಿದ್ದಾರೆ.

**23**. ಭಾರತದ ಏಳು ಪ್ರಾಚೀನ ನಗರಗಳಲ್ಲಿ ಅಯೋಧ್ಯಾ, ಮಥುರಾ, ಕಾಶಿ, ಮಾಯಾ, ಕಾಂಚಿ, ಆವಂತಿ, ದ್ವಾರಾವತಿ ಇವೇ ಪುರಾಣೋಕ್ತವಾದ ಪ್ರಾಚೀನ ನಗರಗಳು.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**24. ಡಾ. ಜಿ.ಎಸ್ ಶಿವರುದ್ರಪ್ಪ**ರವರು 07-02-1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಎಂಬ ಗ್ರಾಮದಲ್ಲಿ ಜನಿಸಿದರು.' ಸಾಮಗಾನ', 'ಚೆಲುವ-ಒಲವು', 'ಸಂಜೆ ದಾರಿ . 'ಅನಾವರಣ', ದೀಪದ ಹೆಜ್ಜೆ', ದೇವಶಿಲ್ಪಿ, 'ಕಾರ್ತೀಕ' ಮುಂತಾದವು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಸೋವಿಯತ್ ಲ್ಯಾಂಡ್ ಪ್ರಶಸ್ತಿಗಳು ಲಭಿಸಿವೆ.

**V. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**25. "ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು."**

**ಅಲಂಕಾರದ ಹೆಸರು :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**ಉಪಮೇಯ :** ನೂರಾರು ದೀಪಗಳು

**ಉಪಮಾನ :** ನದಿಯ ಬಟ್ಟೆ

**ಉಪಮಾವಾಚಕ**: ಅಂತೆ

**ಸಮಾನಧರ್ಮ** : ಬೆಳಕಿನ ಕಸೂತಿ ಹಾಕಿದಂತೆ

**ಸಮನ್ವಯ :** ಇಲ್ಲಿ ಉಪಮೇಯವಾದ ನೂರಾರು ದೀಪಗಳನ್ನು ಉಪಮಾನವಾದ ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕುವುದು ಎಂದು ಹೋಲಿಸಲಾಗಿದೆ.

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪದ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**26. “ಪುರಾಣ ಚರಿತ್ರೆ ಹಾಗೂ ವಾಸ್ತವಗಳು ಒಂದರ ಜೊತೆಗೊಂದು ಬಿಡಿಸಲಾಗದಂತೆ ಹೆಣೆದುಕೊಂಡಿವೆ ಇಲ್ಲಿ”.**

**ಆಯ್ಕೆ**: ಈ ವಾಕ್ಯವನ್ನು ಡಾ. ಜಿ.ಎಸ್ ಶಿವರುದ್ರಪ್ಪನವರು ಬರೆದಿರುವ 'ಗಂಗೆಯ ಶಿಖರಗಳಲ್ಲಿ' ಎಂಬ ಪ್ರವಾಸ ಕಥನದಿಂದ ಆಯ್ದ 'ಗಂಗೆಯಲ್ಲಿ ದೀಪಮಾಲೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಈ ಮಾತನ್ನು ಲೇಖಕರು ಹೇಳಿದ್ದಾರೆ. 1984ರ ಮೇ 13ನೇ ತಾರೀಖಿನ ಮಧ್ಯಾಹ್ನದ ಸುಡುಬಿಸಿಲಿನಲ್ಲಿ ಸೈಕಲ್ ರಿಕ್ಷಾ ಮಾಡಿಕೊಂಡು ಹರಿದ್ವಾರದ ಬೀದಿಗಳಲ್ಲಿ ಹೊರಟ್ಟಿದ್ದರು. ಹಿಮಾಲಯದ ಯಾತ್ರೆಗೆ ಹೊರಡುವವರ ಪಾಲಿಗೆ ಹರಿದ್ವಾರದಿಂದ ಮುಂದಕ್ಕೆ ತೆರೆಯುವ ಪುರಾಣದ ಪುಟಗಳಿಗೆ ಲೆಕ್ಕವಿಲ್ಲ. ಚರಿತ್ರ ಹಾಗೂ ವಾಸ್ತವಗಳು ಒಂದರ ಜೊತೆಗೊಂದು ಬಿಡಿಸಲಾಗದಂತೆ ಹೆಣೆದುಕೊಂಡಿದೆ ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಎಲ್ಲವೂ ಇಲ್ಲಿ ಪರಸ್ಪರ ಹೊಂದಾಣಿಕೆಯಂತೆ ಹೆಣೆದುಕೊಂಡಿರುವುದು ಇಲ್ಲಿನ ಸ್ವಾರಸ್ವವಾಗಿದೆ.

**27. “ಉತ್ತರದ ಎತ್ತರಗಳಿಂದ ಇಳಿದ ಗಂಗೆ ಬಯಲನ್ನು ಪ್ರವೇಶಿಸುವ ದ್ವಾರವೂ ಇದೆ”.**

**ಆಯ್ಕೆ**: ಈ ವಾಕ್ಯವನ್ನು ಡಾ. ಜಿ.ಎಸ್ ಶಿವರುದ್ರಪ್ಪನವರು ಬರೆದಿರುವ 'ಗಂಗೆಯ ಶಿಖರಗಳಲ್ಲಿ' ಎಂಬ ಪ್ರವಾಸ ಕಥನದಿಂದ ಆಯ್ದ 'ಗಂಗೆಯಲ್ಲಿ ದೀಪಮಾಲೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಈ ಮಾತನ್ನು ಲೇಖಕರು ಹೇಳಿದ್ದಾರೆ. ಮಹಮದೀಯ ಚರಿತ್ರಾಕಾರರು ಹರಿದ್ವಾರದ ಬದಲು ಗಂಗಾದ್ವಾರ ಎಂಬ ಹೆಸರನ್ನು ಉಲ್ಲೇಖಿಸದ್ದಾರೆ. ಒಂದರ್ಥದಲ್ಲಿ ಇದು ಸರಿಯಾದ ಹೆಸರು ಕೂಡ. ಏಕೆಂದರೆ ಹಿಮಾಲಯದ ಎತ್ತರಗಳಿಂದ ಇಳಿದು ಬಂದ ಗಂಗೆ ಮೊಟ್ಟಮೊದಲು ಬಯಲು ನಾಡನ್ನು ಪ್ರವೇಶಿಸುವುದು ಇಲ್ಲಿಯೇ. ಆದ್ದರಿಂದ ಉತ್ತರದ ಎತ್ತರಗಳಿಂದ ಇಳಿದ ಗಂಗೆ ಬಯಲನ್ನು ಪ್ರವೇಶಿಸುವ ದ್ವಾರವೂ ಇದೇ ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಎಷ್ಟೇ ದಿಕ್ಕುಗಳಿಂದ, ಎಷ್ಟೇ ಎತ್ತರದಿಂದ ಗಂಗೆ ಹರಿದು ಬಂದರೂ ಬಯಲು ಪ್ರದೇಶಕ್ಕೆ ಬರಲೇಬೇಕು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**28. “ದೀಪಗಳನ್ನು ತೇಲಿಬಿಡುವ ಈ ಆಟ ನಡೆದೇ ಇತ್ತು”.**

**ಆಯ್ಕೆ**: ಈ ವಾಕ್ಯವನ್ನು ಡಾ. ಜಿ.ಎಸ್ ಶಿವರುದ್ರಪ್ಪನವರು ಬರೆದಿರುವ 'ಗಂಗೆಯ ಶಿಖರಗಳಲ್ಲಿ ಎಂಬ ಪ್ರವಾಸ ಕಥನದಿಂದ ಆಯ್ದ 'ಗಂಗೆಯಲ್ಲಿ ದೀಪಮಾಲೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಲೇಖಕರು ಹೇಳಿದ್ದಾರೆ. ಸಂಜೆಯ ಕೆಂಪು ಕರಗಿ ನದಿಯ ನೀರು ಕಪ್ಪಾದಂತೆ, ಅದರ ಮೇಲೆ ತೇಲುವ ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು. ಬಿಟ್ಟ ಕೂಡಲೇ ತಲೆಕೆಳಕಾಗುವ ದೀಪಗಳು ಸ್ವಲ್ಪ ದೂರ ಹೋಗಿ ಮಗುಚಿಕೊಳ್ಳುವ ದೀಪಗಳು ಹೊಯ್ದಾಡುತ್ತಾ ಹೇಗೋ ಮುಂದೆ ಸಾಗುವ ದೀಪಗಳು ಹೀಗೆ ದೀಪಗಳನ್ನು ತೇಲಿಬಿಡುವ ಈ ಆಟ ನಡೆದೆ ಇತ್ತು. ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಗಂಗಾ ನದಿಯಲ್ಲಿ ದೀಪಗಳನ್ನು ತೇಲಿಬಿಡುವ ಆಟ ದೀಪದ ಮಾಲೆಯಂತಿತ್ತು ಎನ್ನುವುದು ಸ್ವಾರಸ್ವಕರವಾಗಿದೆ.

**29. "ಈ ಅಪೂರ್ವ ದೃಶ್ಯ ಅವರ್ಣನೀಯವಾದದ್ದು".**

**ಆಯ್ಕೆ** :ಈ ವಾಕ್ಯವನ್ನು ಡಾ. ಜಿ.ಎಸ್ ಶಿವರುದ್ರಪ್ಪನವರು ಬರೆದಿರುವ ಗಂಗೆಯ ಶಿಖರಗಳಲ್ಲಿ ಎಂಬ ಪ್ರವಾಸ ಕಥನದಿಂದ ಆಯ್ದ ಗಂಗೆಯಲ್ಲಿ ದೀಪಮಾಲೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಈ ಮಾತನ್ನು ಲೇಖಕರು ಹೇಳಿದ್ದಾರೆ. ಗಂಗಾರತಿಯಲ್ಲಿ ಮೂರು ನಾಲ್ಕು ಅಡಿಗಳೆತ್ತರದ ಆರತಿಯ ಹಿಡಿದ ಅರ್ಚಕರು ಗಂಗೆಯ ಅಂಚಿನಲ್ಲಿ ನಿಂತು ನೇರವಾಗಿ ಗಂಗಾ ನದಿಗೆ ಆರತಿಯನ್ನು ಬೆಳಗ ತೊಡಗಿದರು. ಹರಿಯುವ ನದಿಯಲ್ಲಿ ಅವರು ಎತ್ತಿ ಬೆಳಗುವ ಆರತಿಯ ಬೆಳಕುಗಳು ಪ್ರತಿಫಲಿಸತೊಡಗಿದವು. ಒಂದಲ್ಲ, ಎರಡಲ್ಲ, ನಾಲ್ಕಾರು ಎತ್ತರದ ದೀಪಾರತಿಗಳನ್ನು ಹಿಡಿದು ಇಡೀ ನದಿಯನ್ನೇ ಅರ್ಚಿಸುವ ಈ ಅಪರೂಪದ ದೃಶ್ಯ ಅವರ್ಣೀಯವಾದದ್ದು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಗಂಗಾ ನದಿಯನ್ನು ದೇವತೆಯಂತೆ ಪೂಜಿಸುತ್ತಾ ದೀಪಾರಾತಿಗಳನ್ನು ಹಿಡಿದು ಅರ್ಚಿಸುವುದು ಇಲ್ಲಿಯ ಸ್ವಾರಸ್ಯ.

**VI ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**30.** ಲೇಖಕರು ಗಂಗೆಯಲ್ಲಿ ದೀಪಮಾಲೆಯ ಸುಂದರವಾದ ದೃಶ್ಯವನ್ನು ಹೀಗೆ ವರ್ಣಿಸಿದ್ದಾರೆ. ಸಂಜೆಯ ಕೆಂಪು ಹರಿಯುವ ನೀರಿನ ನಿರಿಗೆಗಳನ್ನು ವರ್ಣಮಯವಾಗಿ ಮಾಡುತ್ತಿದ್ದಂತೆ ಗಂಗಾಮಾಯಿಗೆ ಹೆಣ್ಣು ಮಕ್ಕಳು, ಗಂಡ-ಹೆಂಡತಿಯರು ತೇಲಿಬಿಟ್ಟ ದಿನ್ನೆಯ ದೀಪಗಳು ನದಿ ಜಲದಲ್ಲಿ ಚಲಿಸತೊಡಗಿದವು. ಕೆಲವು ದೊನ್ನೆಗಳು ತೇಲಿಬಿಟ್ಟ ನಂತರ ಒಂದೆರಡು ಮಾರು ದೂರ ಹೋಗುವಷ್ಟರಲ್ಲಿಯೇ ಸೆಳೆವಿಗೆ ಸಿಲುಕಿ ಗಿರಗಿರನೆ ಸುತ್ತಿ ತಲೆಕೆಳಕಾಗಿ, ಹತ್ತಿದ ದೀಪ ನೀರಲ್ಲಿ ಆರಿ, ಅದರ ಜೊತೆಗಿದ್ದ ಹೂಗಳು ದಿಕ್ಕಾಪಾಲಾಗಿ ಕೊಚ್ಚಿಹೋಗುತ್ತಿದ್ದವು; ಕೆಲವು ದೊನ್ನೆ ದೀಪಗಳು ಸ್ವಲ್ಪ ದೂರದವರೆಗೆ ಉರಿಯತ್ತಾ ನದಿ ಜಲದಲ್ಲಿ ಪ್ರತಿಬಿಂಬಿತವಾಗುತ್ತಾ ಮುಂದೆ ಹೋಗಿ, ಇನ್ನಿತರ ದೊನ್ನೆಗಳಿಗೆ ತಗುಲಿ ತಲೆ ಕೆಳಕಾಗುತ್ತಿದ್ದವು. ಇನ್ನು ಕೆಲವು ಅಬಾಧಿತವಾಗಿ ತೇಲುತ್ತಾ ಉರಿಯುವ ದೀಪಗಳ ಸಹಿತ ದೂರ ದೂರಕ್ಕೆ ಹೋಗುತ್ತಿದ್ದವು.

ನೋಡುತ್ತಿದ್ದಂತೆ ಬಹು ಸಂಖ್ಯೆಯಲ್ಲಿ ತೇಲಿ ಬಿಟ್ಟ ದೀಪಗಳು ನದಿಯ ಹರಹನ್ನೆಲ್ಲಾ ತುಂಬಿಕೊಂಡು ಅದ್ಭುತವಾದ ದೃಶ್ಯಮಾಲೆಯನ್ನು ನಿರ್ಮಿಸಿದವು. ಸಂಜೆಯ ಕೆಂಪು ಕರಗಿ, ನದಿಯ ನೀರು ಕಪ್ಪಾದಂತೆ, ಅದರ ಮೇಲೆ ತೇಲುವ ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು. ಬಿಟ್ಟ ಕೂಡಲೇ ತಲೆಕೆಳಕಾಗುವ ದೀಪಗಳು ಸ್ವಲ್ಪ ದೂರ ಹೋಗಿ ಮಗುಚಿಕೊಳ್ಳುವ ದೀಪಗಳು ಹೊಯ್ದಾಡುತ್ತಾ ಹೇಗೋ ಮುಂದೆ ಸಾಗುವ ದೀಪಗಳು, ದೀಪಗಳನ್ನು ತೇಲಿಬಿಡುವ ಈ ಆಟ ನಡೆದೇ ಇತ್ತು. ಜೀವನದ ಮಹಾ ಪ್ರವಾಹದ ಮೇಲೆ ನಮ್ಮೆಲ್ಲರ ಏಳು-ಬೀಳುಗಳನ್ನು ಬಿಂಬಿಸುವಂತಿದ್ದ ಈ ದೀಪಮಾಲೆಯ ಲೀಲೆಯನ್ನು ನೋಡುತ್ತಾ ಕೂತ ನಮಗೆ, ಆಗಲೇ ಗಂಟೆ ಏಳಾಗಿ ಆರತಿಯ ಸುಮುಹೂರ್ತ ಹತ್ತಿರಕ್ಕೆ ಬಂದಿದೆ ಎನ್ನುವುದು ಶಂಖ, ಜಾಗಟೆ, ವಾದ್ಯಗಳ ಸದ್ದಿನಿಂದ ಶ್ರವಣ  ಗೋಚರವಾಯಿತು. ಎರಡು ದಡಗಳ ಉದ್ದಕ್ಕೂ ಅಕ್ಷರಶಃ ಲಕ್ಷಾಂತರ ಜನ ಕುತೂಹಲ ಸಂಭ್ರಮಗಳಿಂದ ಆರತಿಯ ದೃಶ್ಯಕ್ಕೆ ಕಾತರರಾದರು. ಎಂದು ಲೇಖಕರು ವರ್ಣಿಸಿದರು.

**31**. ಲೇಖಕರಾದ ಜಿ.ಎಸ್. ಶಿವರುದ್ರಪ್ಪನವರು ಸುಡುಬಿಸಿಲಿನ ಬೇಸಿಗೆಯಲ್ಲಿ, ಹರಿದ್ವಾರದ ಬೀದಿಗಳಲ್ಲಿ ಹೊರಟು ಸಂಜೆಗೆ ಗಂಗಾನದಿಯ ಬ್ರಹ್ಮಕುಂಡದಲ್ಲಿ ನಡೆಯುವ ಆರತಿಯನ್ನು ನೋಡಬೇಕೆಂದು ಹೋಗಿದ್ದರು. ಹರಿದ್ವಾರ ಪ್ರಾಚೀನತೆಯ ಲಕ್ಷಣಗಳನ್ನು ಉಳಿಸಿಕೊಂಡಿದೆ. ಭಾರತದ ಏಳು ಪ್ರಾಚೀನ ಪವಿತ್ರ ನಗರಗಳಲ್ಲಿ ಹರಿದ್ವಾರವೂ ಒಂದು. ಚೀನಾ ದೇಶದ ಹುಯೆನ್ ತ್ಸಾಂಗನು ಇದನ್ನು ಮೊಯುಲೊ ಅಥವಾ ಮಯೂರ ಎಂದು ಕರೆದಿದ್ದಾನೆ. ಮಹಮದೀಯ ಚರಿತ್ರಾಕಾರರು ಹರಿದ್ವಾರದ ಬದಲು ಗಂಗಾದ್ವಾರದ ಹೆಸರನ್ನು ಉಲ್ಲೇಖಿಸಿದ್ದಾರೆ. ಮಹಾಭಾರತದಲ್ಲಿ ಗಂಗಾದ್ವಾರದ ಉಲ್ಲೇಖ ಸಾಕಷ್ಟು ಸಲ ಕಾಣಿಸಿಕೊಂಡಿದೆ. ಸಂಜೆ ಏಳು ಗಂಟೆಗೆ ಗಂಗೆಯಲ್ಲಿ ದೀಪಗಳನ್ನು ಬಿಡುವುದು, ಗಂಗೆಗೆ ಆರತಿಯನ್ನು ಎತ್ತುವುದು ಶುರುವಾಯಿತು. ಹೆಂಗಸರು ಉರಿಯುವ ದೀಪದ ದೊನ್ನೆಯನ್ನು ನೀರಿನಲ್ಲಿ ತೇಲಿಬಿಡಲು ಶುರುಮಾಡಿದರು. ಸಂಜೆಯಾಗುತ್ತಿದ್ದಂತೆ ಲಕ್ಷಕ್ಕೂ ಹೆಚ್ಚು ಜನರು ನದಿಯ ಎರಡೂ ಬದಿಯಲ್ಲಿ ಪೂಜೆಯನ್ನು ವೀಕ್ಷಿಸಿದರು.

ಸಂಜೆಯ ಕೆಂಪು ಕರಗಿ ನದಿಯ ನೀರು ಕಪ್ಪಾದಂತೆ ಅದರ ಮೇಲೆ ತೇಲುವ ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು. ದೀಪಮಾಲೆಯ ಲೀಲೆಯನ್ನು ನೋಡುತ್ತಾ ಕೂತ ಲೇಖಕರಿಗೆ ಸಮಯವೇ ಮರೆತು ಹೋಗಿ ಶಂಖ, ಜಾಗಟೆ, ವಾದ್ಯಗಳ ಸದ್ದಿನಿಂದ ಶ್ರವಣ  ಗೋಚರವಾಯಿತು. ಎರಡು ದಡಗಳ ಉದ್ದಕ್ಕೂ ಅಕ್ಷರಶಃ ಲಕ್ಷಾಂತರ ಜನ ಕುತೂಹಲ ಸಂಭ್ರಮಗಳಿಂದ ಆರತಿಯ ದೃಶ್ಯಕ್ಕೆ ಕಾತರರಾದರು. ಸುಮಾರು ಅರ್ಧ ಗಂಟೆಯ ಕಾಲ ನಡೆದ ಆರತಿ ಮುಗಿಸಿ ಕಿಕ್ಕಿರಿದ ಜನ ಜಂಗುಳಿಯಲ್ಲಿ ನದಿ ದಡದಾಚೆ

ಹರಹಿಕೊಂಡ ಊರು ಎಲ್ಲವೂ ಕ್ರಮೇಣ ನಮ್ಮ ಅರಿವಿಗೆ ಬಂದು ಅಲ್ಲಿಂದ ಹಿಂತಿರುಗಿದೆ ಎಂದು ಲೇಖಕರು ವರ್ಣಿಸಿದ್ದಾರೆ.

**VII ಪ್ರಬಂಧ ಬರವಣಿಗೆ:**

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

**32**. ಶೈಕ್ಷಣಿಕ ಪ್ರವಾಸದ ಮಹತ್ವ.

**33.** ದೂರದರ್ಶನದ ಪ್ರಯೋಜನಗಳು

**VIII ಪತ್ರಲೇಖನ ಬರೆಯುವುದು**.

**34. ವ್ಯವಹಾರಿಕ/ ಮನವಿ ಪತ್ರ**

ಇಂದ,ಗೆ, ಸಂಬೋಧನೆ, ವಿಷಯ 1 ಅಂಕ

ಪತ್ರದ ಒಡಲು, ವಿಷಯ ನಿರೂಪಣೆ 2 ಅಂಕಗಳು

ವಂದನೆಯೊಂದಿಗೆ ಮಕ್ತಾಯ, ಇಂತಿ,ಸ್ಥಳ, ದಿನಾಂಕ 1 ಅಂಕ

ಭಾಷಾ ಶೈಲಿಗೆ, ಪದ ಬಳಕೆ ವಿನ್ಯಾಸ 1 ಅಂಕ

**ಒಟ್ಟು 5 ಅಂಕಗಳು**

**35. ಖಾಸಗಿ ಪತ್ರ/ಗೆಳೆಯನಿಗೆ**

ಇಂದ, ದಿನಾಂಕ, ಸಂಬೋಧನೆ, ಕ್ಷೇಮವಿಚಾರ 1 ಅಂಕ

ಪತ್ರದ ಒಡಲು, ವಿಷಯ ನಿರೂಪಣೆ 2 ಅಂಕಗಳು

ಮಕ್ತಾಯ, ಇಂತಿ, ಸಹಿ ಹೊರ ವಿಳಾಸ 1 ಅಂಕ

ಭಾಷಾ ಶೈಲಿಗೆ, ಪದ ಬಳಕೆ ವಿನ್ಯಾಸ 1 ಅಂಕ

**ಒಟ್ಟು 5 ಅಂಕಗಳು**

## ಗದ್ಯಭಾಗ-7 ನನ್ನ ಗೋಪಾಲ

**: ಮಾದರಿ ಉತ್ತರಗಳು:**

**I ಬಹುಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

**1**. (ಬಿ) ಬಿಡಿಸಿದನು

**2**. (ಸಿ) ಕ್ರಿಯಾಪದ

**3**. (ಎ) ಮಲಗು

**4**. (ಸಿ) ಆಶ್ಚರ್ಯಸೂಚಕ

**5.** (ಬಿ) ಸಂಜೆ

**6**. (ಎ) ಕ್ರಿಯಾ ಸಮಾಸ

**7.** (ಬಿ) ಸಂಧ್ಯಾ

**8.** (ಬಿ) ಹೊಂಬೆಳಕು

**9**. (ಎ) ನಿಷ್ಕರುಣೆ

**10**. (ಸಿ) ಕೊಳಲೂದಿ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**11.** ಗೋಪಾಲನ ಬೆಳಗಿನ ಮುಖ್ಯ ಕೆಲಸ ಎದ್ದು ಸ್ನಾನ ಮಾಡಿ ಕಾಡಿನಿಂದ ಪೂಜೆಗೆ ಹೂಗಳನ್ನು ಕೊಯ್ದು ತರುವುದಾಗಿತ್ತು.

**12**. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಸಾವಿರಾರು ಮಳೆಬಿಲ್ಲು ಸೇರಿ ಕುಣಿದಂತೆ ಕಾಣಿಸುತ್ತಿದ್ದವು.

**13**. ಗೋಪಾಲನ ಗೆಳೆಯರ ಹೆಸರು ರಾಮು, ಕಿಟ್ಟಿ, ನಾಣಿ, ಮಾಧು.

**14**. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಕಾಡಿನ ದಾರಿಯಲ್ಲಿ ಕತ್ತಲೆಯಿದ್ದ ಕಾರಣ ಭಯಪಡುತ್ತಿದ್ದನು.

**15**. ಗೋಪಾಲನ ಗೆಳೆಯರು ಬೆಲೆಯುಳ್ಳ ಬಟ್ಟೆ ಹಾಕಿಕೊಂಡು ಹಾಸ್ಯ ಮಾಡುತ್ತಿದ್ದರು ಆ ಕಾರಣದಿಂದ ಹೊಸ ಪಂಚೆಯನ್ನು ಬಯಸಿದನು.

**16.** ಬನದ ಗೋಪಾಲ ಶ್ರೀ ಕೃಷ್ಣ. ಕಾಡಿನಲ್ಲಿ ದನ ಕಾಯುವುದೇ ಅವನ ಕೆಲಸ.

**17**. "ಮನೆಗಿಂತ ಬನವೇ ಸೊಗಸು" ಎಂದು ಗೋಪಾಲ ಹೇಳುತ್ತಾನೆ.

**18**. ಗೋಪಾಲನು ತಾಯಿಗೆ ಬುಟ್ಟಿಯಲ್ಲಿ ಹೂಗಳನ್ನು ತೋರಿಸುತ್ತಾನೆ.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**19.** ಗೋಪಾಲ, ಬೆಳಗಾಯ್ತು, ಮೇಲೇಳು; ನೋಡಲ್ಲಿ, ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಕೇಳಲ್ಲಿ, ಹಕ್ಕಿಗಳು ಹಾಡುತ್ತ, ಹಾರಾಡಿ ಕರೆಯುತ್ತಿವೆ. ನಿನ್ನ ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ. ಎದ್ದೇಳು ಗೋಪಾಲ ಶಾಲೆಗೆ ಹೊತ್ತಾಗುತ್ತದೆ. ಗುರುಗಳೇನೆಂದಾರು? ಏಳು ಗೋಪಾಲ ನನ್ನ ಕಂದಾ, ಎಂದು ಮಲಗಿದ್ದ ಗೋಪಾಲನನ್ನು ತಾಯಿಯು ಮಧುರವಾದ ಮಾತುಗಳಿಂದ ಏಳಿಸಿದಳು.

**20.** ಬನದಲ್ಲಿ ಏನಮ್ಮ ಸೊಗಸು! ಏನು ಆನಂದ! ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತಬಾಳೆಯ ಹೂವು, ಗೋರಂಟೆಯ ಹೂವು! ಏನಮ್ಮ, ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು. ಆಮೇಲೆ ಹಕ್ಕಿಗಳ ಇಂಪಾದ ಗಾನ! ತಂಗಾಳಿ! ಸೂರ್ಯದೇವನ ಹೊಂಬೆಳಕು! ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮ ಮಣಿಗಳು ಮಿರುಗುವ ಲೀಲೆ! ಮನೆಗಿಂತ ಬನವೇ ಸೊಗಸಮ್ಮ, ನೀನೊಬ್ಬಳಲ್ಲಿದ್ದರೆ......ಎಂದು ಹೂಬನದ ಸೊಗಸನ್ನು ವರ್ಣಿಸಿದನು.

**21**. ಗೋಪಾಲನ ತಾಯಿ ಬಹಳ ಬಡತನದಲ್ಲಿ ಜೀವನ ನಡೆಸುತ್ತಿದ್ದಳು. ಒಂದು ಸಣ್ಣ ಗುಡಿಸಿಲಿನಲ್ಲಿ ವಾಸಿಸುತ್ತಿದ್ದಳು. ಗೋಪಾಲನ ತಾಯಿ ಒಂದು ಚರಕದ ಮುಂದೆ ಕುಳಿತು ನೂಲುತ್ತಿದ್ದಳು. ಆಕೆ ಬಡ ಹೆಂಗಸು, ವಿಧವೆ. ಹೊಟ್ಟೆಗೆ ಹಿಟ್ಟು ಸಿಕ್ಕುವುದೇ ಕಷ್ಟ. ನೂಲು ಮಾರಿ ಬಂದ ಮೂರು ಕಾಸಿನಲ್ಲಿ ತಮ್ಮ ಸಂಸಾರವನ್ನು ಸಾಗಿಸುತ್ತ ಜೀವನ ನಡೆಸುತ್ತಿದ್ದಳು.

**22.** ಬನದ ಗೋಪಾಲನು ನೋಡಲು ತುಂಬಾ ಸೊಗಸಾಗಿ ಕಾಣುತ್ತಿದ್ದನು. ತಲೆಯ ಮೇಲೆ ಸಣ್ಣದೊಂದು ಕಿರೀಟವಿತ್ತು. ಕಿರೀಟದಲ್ಲಿ ನವಿಲುಗರಿ ಇತ್ತು. ಕೈಯಲ್ಲಿ ಒಂದು ಕೊಳಲು ಇತ್ತು. ಇವು ಬನದ ಗೋಪಾಲನ ವೇಷಭೂಷಣಗಳು.

**23.** ಗೋಪಾಲನ ತಾಯಿಯು ನೀನು ಕಾಡಿನಲ್ಲಿ ಬರುವಾಗ ಹೆದರಿಕೆಯಾದರೆ ನಿನ್ನ ಅಣ್ಣ ಗೋಪಾಲನನ್ನು ಕರೆ ಎಂದು ಹೇಳಿರುತ್ತಾಳೆ. ಅಂತೆಯೇ ಗೋಪಾಲನು ಕಾಡಿನಲ್ಲಿ 'ಗೋಪಾಲಣ್ಣ', ಗೋಪಾಲಣ್ಣ! ಗೋಪಾಲಣ್ಣ! ಎಂದು ಕರೆಯುತ್ತಾನೆ. ಆದರೆ ಉತ್ತರವೇ ಬರಲಿಲ್ಲ. ದನಗಳನ್ನು ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೋ? ಎಂದು ಮತ್ತೆ ಅಣ್ಣಾ, ಅಣ್ಣಾ! ಏ ಅಣ್ಣಾ! ನನಗೆ ಹೆದರಿಕೆ ಅಣ್ಣಾ ಕತ್ತಲಾಗುತ್ತಿದೆ, ಎಲ್ಲಿದ್ದೀಯಣ್ಣ ಏ ಗೋಪಾಲಣ್ಣ ಎಂದು ಅಣ್ಣನನ್ನು ಹುಡುಕುತ್ತಾನೆ.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**24. ಕುವೆಂಪು:** ರಾಷ್ಟ್ರಕವಿ ಎಂದು ಖ್ಯಾತರಾಗಿರುವ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ದಿನಾಂಕ 29-12-1904 ರಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. 'ಚಂದ್ರಮಂಚಕೆ ಬಾ ಚಕೋರಿ', 'ನವಿಲು', ಪಕ್ಷಿಕಾಶಿ (ಕವನಸಂಕಲನಗಳು) 'ಬೆರಳ್‌ಗೆ ಕೊರಳ್', 'ಶೂದ್ರತಪಸ್ವಿ', 'ಜಲಗಾರ', (ನಾಟಕಗಳು), ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು (ಕಾದಂಬರಿಗಳು), ಶ್ರೀ ರಾಮಾಯಣ ದರ್ಶನಂ (ಮಹಾಕಾವ್ಯ). ಕುವೆಂಪುರವರಿಗೆ ಪದ್ಮಭೂಷಣ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ, ಪಂಪ ಹಾಗೂ ಕರ್ನಾಟಕ ರತ್ನ ಪ್ರಶಸ್ತಿಗಳು ದೊರೆತಿವೆ.

**V ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**25. "ಹೂ ಬನ ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಮನೋಹರವಾಗಿತ್ತು."**

ಅಲಂಕಾರ **:** ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

ಉಪಮೇಯ : ಹೂ ಬನ

ಉಪಮಾನ: ಮಳೆಬಿಲ್ಲು

ವಾಚಕಪದ : ಅಂತೆ

ಸಮಾನ ಧರ್ಮ: ಮನೋಹರತೆ

ಸಮನ್ವಯ : ಇಲ್ಲಿ 'ಹೂಬನ' ಎಂಬ ಉಪಮೇಯವನ್ನು 'ಮಳೆಬಿಲ್ಲ' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ ಹೂಬನ ಹೊಂದಿರುವ ಮನೋಹರತೆಯನ್ನು ಸಮನ್ವಯಗೊಳಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VI ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

ಗಾದೆ ಮಹತ್ವದ ವಿವರಣೆ 1 ಅಂಕ

ಅರ್ಥ ವಿವರಣೆ 1 ಅಂಕ

ಭಾಷಾ ಶೈಲಿಗೆ, ಪದಬಂಧಗಳಿಗೆ 1 ಅಂಕ

**ಒಟ್ಟು 3ಅಂಕಗಳು**

**26**. "ಬೆಳೆಯುವ ಸಿರಿ ಮೊಳಕೆಯಲ್ಲಿ".

**27.** "ತುಂಬಿದ ಕೊಡ ತುಳುಕುವುದಿಲ್ಲ".

**VII ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**28. "ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು".**

**ಆಯ್ಕೆ**: ಈ ವಾಕ್ಯವನ್ನು ಕುವೆಂಪುರವರ ' ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ ನನ್ನ ಗೋಪಾಲ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಗೋಪಾಲನು ತನ್ನ ಅಮ್ಮನಿಗೆ ಹೇಳಿದನು. ಬನದಲ್ಲಿ ಕಂಡುಬರುವ ಪ್ರಕೃತಿಯನ್ನು ವರ್ಣಿಸುತ್ತಾ ಮಲ್ಲಿಗೆ ಹೂ, ಸಂಪಿಗೆ ಹೂ, ಪರ್ವತಬಾಳೆಯ ಹೂವು, ಗೋರಂಟೆಯ ಹೂವು ಅರಳಿ ಸಾವಿರಾರು ಮಳೆಬಿಲ್ಲುಗಳು ಕುಣಿದಂತೆ ತೋರುತ್ತಿತ್ತು ಎಂದು ವರ್ಣಿಸುತ್ತಾ ಈ ಮಾತನ್ನು ಹೇಳಿದನು.

**ಸ್ವಾರಸ್ಯ:** ಪ್ರಕೃತಿಯ ಸೊಬಗನ್ನು ಕವಿ ವೈಶಿಷ್ಟ್ಯಪೂರ್ಣವಾಗಿ ವರ್ಣಿಸಿರುವುದೇ ಇಲ್ಲಿ ಸ್ವಾರಸ್ಯವಾಗಿದೆ.

**29. "ಆ ಗೋಪಾಲ ಕೊಡಬೇಕು ನಾವು ಉಣಬೇಕು**".

**ಆಯ್ಕೆ:** ಈ ವಾಕ್ಯವನ್ನು ಕುವೆಂಪುರವರ ' ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಗೋಪಾಲನ ತಾಯಿ ಮಗನಿಗೆ ಹೇಳಿದಳು. ಗೋಪಾಲನು ನನಗೆ ಒಂಟಿಯಾಗಿ ಕಾಡು ದಾಟಿ ಬರುವಾಗ ಭಯವಾಗುತ್ತದೆ. ನನ್ನ ಗೆಳೆಯರ ಜೊತೆ ಆಳುಗಳು ಇರುತ್ತಾರೆ. ನನ್ನ ಜೊತೆ ಮಾತ್ರ ಯಾರೂ ಇಲ್ಲ ಎಂದಾಗ ತಾಯಿ ಅವರೆಲ್ಲ ಶ್ರೀಮಂತರು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಗೋಪಾಲನ ತಾಯಿಯ ಕಷ್ಟದ ಪರಿಸ್ಥಿತಿಯನ್ನು ಮತ್ತು ಭಗವಂತನ ಮೇಲಿನ ನಂಬಿಕೆಯನ್ನು ಇಲ್ಲಿ ಕಾಣಬಹುದು.

**30. "ಆ ಮಗುವಿಗೆ ಬಡತನದ ಬವಣೆಯೇಕೆ".**

**ಆಯ್ಕೆ:** ಈ ವಾಕ್ಯವನ್ನು ಕುವೆಂಪುರವರ ' ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಗೋಪಾಲನ ತಾಯಿ ತನ್ನ ಮನಸ್ಸಿನಲ್ಲೇ ಹೇಳಿಕೊಂಡಳು. ಇಲ್ಲಿಯವರೆಗೆ ತಾನು ತನ್ನ ಮಗನಿಗೆ ಬಡತನದ ಬಗ್ಗೆ ತಿಳಿಯದಂತೆ ಬೆಳೆಸಿ ಆದರೆ ಈಗ ನನಗೆ ಇನ್ನು ಮುಂದೆ ತಮ್ಮ ಬಡತನವನ್ನು ತಿಳಿಸದೇ ಬೇರೆ ದಾರಿ ಇಲ್ಲವಲ್ಲ ಎಂದು ದುಃಖಿಸುತ್ತಾ ದೇವರಿಗೆ ಹೀಗೆ ಬೇಡುತ್ತಾ ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ತಾಯಿ ಕಷ್ಟವೇನಿದ್ದರೂ ತನಗೇ ಇರಲಿ ಮಗನಿಗೆ ಬೇಡ ಎನ್ನುವ ಮಾತೃ ವಾತ್ಸಲ್ಯದ ವರ್ಣನೆ ಇಲ್ಲಿ ಸ್ವಾರಸ್ಯವಾಗಿದೆ.

**31. "ಅಮ್ಮನ ಮಾತು ಸುಳ್ಳಾಗಲಾರದು".**

**ಆಯ್ಕೆ:** ಈ ವಾಕ್ಯವನ್ನು ಕುವೆಂಪುರವರ ' ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ ನನ್ನ ಗೋಪಾಲ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಗೋಪಾಲನು ತನ್ನಲ್ಲೆ ಹೇಳಿಕೊಂಡನು. ಕಾಡಿನಲ್ಲಿ ಗೋಪಾಲನು ಭಯಗೊಂಡು ತಾಯಿ ಹೇಳಿದಂತೆ ಅಣ್ಣನನ್ನು ಕರೆದಾಗ ಬರಲಿಲ್ಲ, ಆಗ ಅವನು ಅನುಮಾನದಿಂದ ತನ್ನಲ್ಲೇ ತಾಯಿಯ ಮಾತಿನ ಮೇಲಿರುವ ವಿಶ್ವಾಸವನ್ನು ಹೊಂದಿರುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ತಾಯಿಯು ಹೇಳಿದ ಮಾತು ಮತ್ತು ತಾಯಿಯ ಮಾತಿನ ಮೇಲಿನ ಅಪಾರ ನಂಬಿಕೆಯನ್ನು ಇಲ್ಲಿ ಕಾಣಬಹುದು.

**VIII ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**32.** ಗೋಪಾಲ, ಬೆಳಗಾಯ್ತು, ಮೇಲೇಳು; ನೋಡಲ್ಲಿ, ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಕೇಳಲ್ಲಿ, ಹಕ್ಕಿಗಳು ಹಾಡುತ್ತ, ಹಾರಾಡಿ ಕರೆಯುತ್ತಿವೆ. ನಿನ್ನ ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ. ಎದ್ದೇಳು ಎಂದು ಹೇಳುವಷ್ಟರಲ್ಲಿ ಗೋಪಾಲ ಎದ್ದು ಶುಚಿಯಾಗಿ ಹೂಗಳನ್ನು ಕೊಯ್ಯಲೆಂದು ಬನಕ್ಕೆ ಹೋಗಿರುತ್ತಾನೆ. ಬನದಿಂದ ಹಿಂದುರುಗಿದ ಗೋಪಾಲ ಬನದ ಸೌಂದರ್ಯವನ್ನು ವಿವರಿಸುತ್ತ ತನ್ನ ತಾಯಿ ಜೊತೆಗಿದ್ದರೆ ಬನ ಮನೆಗಿಂತ ಚೆನ್ನಾಗಿರುತ್ತದೆ ಎಂದು ಹೇಳುತ್ತಾನೆ. ತನ್ನ ತಾಯಿಯನ್ನು ಗೋಪಾಲ ಅಮ್ಮ, ನಾನು ಬರುವಾಗ ಕಾಡು ದಾಟಿ ಬರಬೇಕು. ಬೈಗಿನ ಹೊತ್ತು ಒಬ್ಬನೇ ಬರುವುದಕ್ಕೆ ಹೆದರಿಕೆಯಾಗುತ್ತದೆ

ಜೊತೆಗೆ ಯಾರಾದರೂ ಬೇಕಮ್ಮ. ನೆರೆಯೂರಿನಿಂದ ಬರುವ ಹುಡುಗರಿಗೆ ಜೊತೆಗೆ ಆಳುಗಳಿರುವರಮ್ಮ ಎಂದಾಗ ತಾಯಿ ನಿನಗೆ ಹೆದರಿಕೆಯಾದರೆ ಗೋಪಾಲನನ್ನು ಕೂಗು ಅವನು ಕಾಡಿನಲ್ಲಿ ದನ ಕಾಯುತ್ತಾ ಇರುತ್ತಾನೆ ಎನ್ನುತ್ತಾಳೆ. ಹೀಗೆ ಗೋಪಾಲನು ತನ್ನ ತಾಯಿಯೊಂದಿಗೆ ಸಂಭಾಷಣೆ ನಡೆಸಿದನು.

**33.** ಗೋಪಾಲನ ಬಳಿ ಒಳ್ಳೆಯ ಬಟ್ಟೆ ಇರಲಿಲ್ಲ. ಅವನ ಗೆಳೆಯರೆಲ್ಲ ಬೆಲೆಬಾಳುವ ಬಟ್ಟೆಗಳನ್ನು ಹಾಕಿಕೊಂಡು ಬರುತ್ತಿದ್ದರು. ಗೋಪಾಲನನ್ನು ಕಂಡು ಹಾಸ್ಯ ಮಾಡುತ್ತಿದ್ದರು. ಗೋಪಾಲನ ತಾಯಿ ಒಂದು ಚರಕದ ಮುಂದೆ ಕುಳಿತು ಹಗಲಿರುಳು ದುಡಿದು ನೂಲು ತೆಗೆಯುತ್ತ ಪಂಚೆಯನ್ನು ಸಂಪಾದಿಸಿದ್ದಳು. ಶಾಲೆಯಿಂದ ಸಂಜೆ ಮನೆಗೆ ಬರುವಾಗ ಕಾಡು ದಾಟಿ ಬರಬೇಕಾಗಿದ್ದರಿಂದ ಹೆದರಿಕೆಯಾಗುತ್ತಿತ್ತು. ಜೊತೆಗಾರರು ಯಾರೂ ಇರುತ್ತಿರಲಿಲ್ಲ. ಹೀಗೆ ಭಯವನ್ನು ದೂರಗೊಳಿಸುತ್ತ ಪರಿಹರಿಸಿಕೊಳ್ಳುತ್ತಾನೆ.

**IX ಪ್ರಬಂಧ ಬರವಣಿಗೆ:**

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

**34.** ಅಂತರ್ಜಾಲದ ಅನುಕೂಲಗಳು

**35**. ಸ್ವಚ್ಛ ಭಾರತ ಆಂದೋಲನದಲ್ಲಿ ಯುವ ಜನತೆಯ ಪಾತ್ರ

## ಗದ್ಯಭಾಗ-8 ಸೌಜನ್ಯ

## : ಮಾದರಿ ಉತ್ತರಗಳು:

**I ಬಹುಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

**1**. (ಬಿ) ಸಜ್ಜನಿಕೆ

**2**. (ಬಿ) ಟಿಕೇಟ್

**3**. (ಬಿ) ಮುಖಗಂಟು ಹಾಕು

**4**. (ಡಿ) ಅನ್ವರ್ಥನಾಮ

**5.** (ಬಿ) ನರಕ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :**

**6**. ನಮ್ಮ ದೈನಂದಿನ ಬದುಕಿನಲ್ಲಿ ಅಪರೂಪವಾಗಿರುವುದು "ಸೌಜನ್ಯ".

**7**. ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ.

**8.** ಸೌಜನ್ಯವು ಹೂವು ಅರಳಿದಂತೆ ಅರಳಬೇಕು.

**9**. ಸೌಜನ್ಯದಿಂದ ಬೇರೆಯವರಿಗೆ ಲಾಭವಾಗುತ್ತದೆ.

**10.** ನಮ್ಮ ಹಿರಿಯರು ನಮಗೆ ಸೌಜನ್ಯದ ಗೆರೆಯನ್ನು ಕಾಣಿಸಿದ್ದಾರೆ.

**11**. ಸಮಾಜ ಜೀವನದ ಬಾಳಿನ ಸೂತ್ರ ಸಹಕಾರ.

**12.** "ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ" ಎಂಬ ಮಾತಿನಲ್ಲಿ ಸೌಜನ್ಯದ ಸ್ವರೂಪ ವ್ಯಕ್ತವಾಗುತ್ತದೆ.

**13**. ಮಾನವೀಯ ಸಂಬಂಧ ಸೌಜನ್ಯವನ್ನು ಅಪೇಕ್ಷಿಸುತ್ತದೆ.

**14.** ಜನರು ಅಧಿಕಾರಿಗಳ ಬಳಿ ಹೋಗುತ್ತಾರೆ.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**15.** ಒಬ್ಬರು ಇನ್ನೊಬ್ಬರ ಬಳಿಗೆ ಹೋಗಬೇಕಾಗಿ ಬರುವುದು ಸಮಾಜ ಜೀವನದ ಪ್ರಧಾನ ಲಕ್ಷಣ. ದೊಡ್ಡ ಬೇಡಿಕೆಯೊಂದಿಗೆ ಹೋಗಬಹುದು ಚಿಕ್ಕ ಕೋರಿಕೆಯೊಂದಿಗೆ ಹೋಗಬಹುದು, ಸ್ವಾರ್ಥಕ್ಕಾಗಿ ಹೋಗಬಹುದು, ಕರ್ತವ್ಯ ನಿರ್ವಹಣೆಗಾಗಿ ಹೋಗಬಹುದು.

**16.** ತಮ್ಮ ಬಳಿ ಬಂದವರ ಬಗೆಗೆ ಅನೇಕ ಜನರು ಆದರ ತೋರುವುದಿಲ್ಲ. ತಾಳ್ಮೆ ತೋರುವುದಿಲ್ಲ, ಒಳ್ಳೆಯ ಮಾತು ಆಡುವುದಿಲ್ಲ, ಯಾವಾಗಲೂ ಮುಖ ಗಂಟು ಹಾಕಿಕೊಂಡಿರುತ್ತಾರೆ. ಏನು ಕೇಳಿದರು ಉತ್ತರಿಸುವುದು ಅವರಿಗೆ ದಣಿವಾಗುತ್ತದೆ ಇದು ಅಸೌಜನ್ಯದ ನಡವಳಿಕೆ.

**17**. ಬಳಿಗೆ ಬಂದವರು ಏನು ಹೇಳುತ್ತಾರೆ ಎಂಬುದನ್ನು ಕೇಳುವ ತಾಳ್ಮೆ ಬೇಕು, ಆಗುತ್ತದೋ ಇಲ್ಲವೋ ಎಂಬುದನ್ನು ಹೇಳುವಾಗ ಮಾತು ಮೃದುವಾದರೆ ಸಾಕು. ಇದೇ ಸೌಜನ್ಯ. ಇಷ್ಟೇ ಸೌಜನ್ಯ. ಬಂದವರನ್ನು ಕೂರಿಸಿ ಕಾಫಿ ತರಿಸಿಕೊಡಬೇಕಾಗಿಲ್ಲ. ಅವರ ಯೋಗಕ್ಷೇಮಗಳನ್ನು ಗಂಟೆಗಟ್ಟಲೆ ಕೇಳಬೇಕಾಗಿಲ್ಲ. ಯಾವುದೇ ಸಂದರ್ಭದಲ್ಲಿ ಇನ್ನೊಬ್ಬರ ವಿಷಯದಲ್ಲಿ ನಮ್ಮ ವರ್ತನೆ ಹೇಗಿರುತ್ತದೆ ಎಂಬುದಷ್ಟೇ ಸೌಜನ್ಯದ ಗುರುತು ಆಗಿದೆ.

**18**. ಸಹಾನುಭೂತಿ ಸಹೃದಯತೆ ಸಮಾಧಾನ ಸೌಜನ್ಯಶೀಲರ ಲಕ್ಷಣ. ಒಂದು ಮಾತು ಒಂದು ನಗು ಬಳಿಗೆ ಬಂದವರಿಗೆ ತೃಪ್ತಿ ನೀಡುತ್ತವೆ. ಮೊದಲು ಇಷ್ಟವಾದರೆ ಸಾಕು ಆಮೇಲೆ ಉಳಿದುದೆಲ್ಲ ಸತ್ಯವನ್ನು ಹೇಳು. ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳು ಎನ್ನುವುದರಲ್ಲಿ ನಮ್ಮ ಹಿರಿಯರು ನಮಗೆ ಸೌಜನ್ಯದ ಗೆರೆಯನ್ನು ಕಾಣಿಸಿದ್ದಾರೆ. "ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ" ಎಂಬ ಮಾತಿನಲ್ಲಿ ಸೌಜನ್ಯದ ಸ್ವರೂಪ ವ್ಯಕ್ತವಾಗುತ್ತದೆ.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**19. ಡಾ. ಹಾ. ಮಾ. ನಾಯಕ**ರವರು 12 ಸೆಪ್ಟೆಂಬರ್ 1931 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆಯಲ್ಲಿ ಜನಿಸಿದರು. 'ಸಂಪ್ರತಿ', 'ಸಲ್ಲಾಪ', 'ಸೂಲಂಗಿ', 'ಸಂಪಣ', 'ಸ್ವಗತ', ಜಾನಪದ ಸ್ವರೂಪ, ಸಮೀಕ್ಷೆ ಮುಂತಾದವು ಇವರ ಕೃತಿಗಳು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಡಾಕ್ಟರೇಟ್ ಪದವಿ ದೊರೆತಿದೆ.

**V ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

ಗಾದೆ ಮಹತ್ವದ ವಿವರಣೆ 1 ಅಂಕ

ಅರ್ಥ ವಿವರಣೆ 1 ಅಂಕ

ಭಾಷಾ ಶೈಲಿಗೆ, ಪದಬಂಧಗಳಿಗೆ 1 ಅಂಕ

**ಒಟ್ಟು 3ಅಂಕಗಳು**

**20**. "ಅತಿ ಆಸೆ ಗತಿಕೇಡು".

**21** "ಮನಸ್ಸಿದ್ದರೆ ಮಾರ್ಗ".

**VI ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ
ಸಂದರ್ಭದ ವಿವರಣೆ 1 ಅಂಕ
ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ
**ಒಟ್ಟು 3 ಅಂಕಗಳು**

**22. "ವ್ಯಕ್ತಿಯ ನಡತೆ ನಡವಳಿಕೆಗಳು ಚಿತ್ರ ವಿಚಿತ್ರ".**

**ಆಯ್ಕೆ** : ಈ ವಾಕ್ಯವನ್ನು ಡಾ. ಹಾ.ಮಾ. ನಾಯಕರು ಬರೆದಿರುವ 'ಸೂಲಂಗಿ' ಕೃತಿಯಿಂದ ಆಯ್ದ "ಸೌಜನ್ಯ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಲೇಖಕರು ಹೇಳಿದ್ದಾರೆ. ಲೇಖಕರು ಸೌಜನ್ಯದ ಬಗ್ಗೆ ವರ್ಣಿಸುತ್ತಾ ಕೆಲವರಲ್ಲಿ ಅದು ಕೃತಕವಾಗಿ ಇರಬಹುದು. ಅಷ್ಟಕ್ಕಾಗಿ ಕೆಲವರಿಗಾದರೂ ಅದು ನೆಮ್ಮದಿಯನ್ನು ತರಬಹುದು. ಇಂದಿನದು ಬಹುಮುಖ ಜೀವನ ಸಮಸ್ಯೆಗಳ ಸಂಕೀರ್ಣ. ಸೌಜನ್ಯ ತೋರಲು ಸಹ ತಮಗೆ ಸಮಯವಿಲ್ಲವೆಂದು ಅನೇಕರು ನಟಿಸುತ್ತಾರೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ವ್ಯಕ್ತಿ ಯಾವಾಗ ಹೇಗೆ ಸೌಜನ್ಯದಿಂದ ವರ್ತಿಸುತ್ತಾನೆ ಎಂಬುದನ್ನು ಹೇಳುವುದು ಕಷ್ಟವಾಗುತ್ತದೆ. ಎನ್ನುವುದು ಇಲ್ಲಿ ಸ್ವಾರಸ್ಯವಾಗಿದೆ.

**23 "ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳು".**

. **ಆಯ್ಕೆ**: ಈ ವಾಕ್ಯವನ್ನು ಡಾ. ಹಾ.ಮಾ. ನಾಯಕರು ಬರೆದಿರುವ 'ಸೂಲಂಗಿ' ಕೃತಿಯಿಂದ ಆಯ್ದ "ಸೌಜನ್ಯ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಲೇಖಕರು ಹೇಳಿದ್ದಾರೆ. ಲೇಖಕರು ಸಹಾನುಭೂತಿ ಸಹೃದಯತೆ ಸಮಾಧಾನ ಸೌಜನ್ಯಶೀಲರ ಲಕ್ಷಣ. ಒಂದು ಮಾತು ಒಂದು ನಗು ಬಳಿಗೆ ಬಂದವರಿಗೆ ತೃಪ್ತಿ ನೀಡುತ್ತವೆ. ಮೊದಲು ಇಷ್ಟವಾದರೆ ಸಾಕು ಆಮೇಲೆ ಉಳಿದುವೆಲ್ಲ. ಸತ್ಯವನ್ನು ಹೇಳು. ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳು. ಎನ್ನುವುದನ್ನು ನಮ್ಮ ಹಿರಿಯರು ನಮಗೆ ಸೌಜನ್ಯದ ಗೆರೆಯನ್ನು ಕಾಣಿಸಿದ್ದಾರೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಸತ್ಯವನ್ನು ಹೇಳಬೇಕಾದರೆ ಯಾವುದೇ ಗೊಂದಲಗಳಿಲ್ಲದೆ ನೇರವಾಗಿ ಇರುವುದನ್ನು ಇದ್ದ ಹಾಗೆಯೇ ಹೇಳುವುದು ಸ್ವಾರಸ್ಯವಾಗಿದೆ.

**24. "ಸೌಜನ್ಯದಿಂದ ನಮಗೆ ನಷ್ಟವಿಲ್ಲದೆ ಬೇರೆಯವರಿಗೆ ಲಾಭವಾಗುತ್ತದೆ".**

**ಆಯ್ಕೆ :** ಈ ವಾಕ್ಯವನ್ನು ಡಾ. ಹಾ.ಮಾ. ನಾಯಕರು ಬರೆದಿರುವ 'ಸೂಲಂಗಿ' ಕೃತಿಯಿಂದ ಆಯ್ದ "ಸೌಜನ್ಯ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ

**ಸಂದರ್ಭ :** ಈ ಮಾತನ್ನು ಲೇಖಕರು ಹೇಳಿದ್ದಾರೆ. ಲೇಖಕರು ಸೌಜನ್ಯದ ಬಗ್ಗೆ ಹೇಳುತ್ತಾ " ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ" ಎಂಬ ಮಾತಿನಲ್ಲಿ ಸೌಜನ್ಯದ ಸ್ವರೂಪ ವ್ಯಕ್ತವಾಗುತ್ತದೆ. ನಾವು ಸೌಜನ್ಯದಿಂದ ವರ್ತಿಸಬೇಕು ಇದರಿಂದ ನಮಗೆ ನಷ್ಟವಿಲ್ಲದೆ ಬೇರೆಯವರಿಗೆ ಲಾಭವಾಗುತ್ತದೆ ಹಾಗಿರುವಾಗ ನಾವೇಕೆ ಸೌಜನ್ಯಶೀಲರಾಗಿರಬಾರದು? ಎಂದು ಪ್ರಶ್ನಿಸುವಾಗ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ :** ಸೌಜನ್ಯದಿಂದ ನಾವು ವರ್ತಿಸಬೇಕು ಇಲ್ಲದಿದ್ದರೆ ನಮ್ಮ ವ್ಯಕ್ತಿತ್ವವೇ ನಾಶವಾಗುತ್ತದೆ ಎಂಬುದು ಸ್ವಾರಸ್ಯವಾಗಿದೆ.

## VII ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ

**25.** ನಮ್ಮ ದೈನಂದಿನ ಬದುಕಿನಲ್ಲಿ ತುಂಬಾ ಅಪರೂಪವಾಗಿರುವುದೆಂದರೆ ಸೌಜನ್ಯ. ಇದಕ್ಕಾಗಿ ಯಾರೂ ಯಾರ ಮನಸ್ಸನ್ನೂ ನೋಯಿಸಬೇಕಾಗಿಲ್ಲ. ಶಕ್ತಿಯನ್ನು ವ್ಯಯಿಸಬೇಕಿಲ್ಲ. ಕಾಸು ಖರ್ಚು ಮಾಡಬೇಕಾಗಿಲ್ಲ. ಒಬ್ಬರು ಇನ್ನೊಬ್ಬರ ಬಳಿಗೆ ಹೋಗಬೇಕಾಗಿ ಬರುವುದು ಸಮಾಜ ಜೀವನದ ಪ್ರಧಾನ ಲಕ್ಷಣ. ದೊಡ್ಡ ಬೇಡಿಕೆಯೊಂದಿಗೆ ಹೋಗಬಹುದು. ಚಿಕ್ಕ ಕೋರಿಕೆಯೊಂದಿಗೆ ಹೋಗಬಹುದು. ಸ್ವಾರ್ಥಕ್ಕಾಗಿ ಹೋಗಬಹುದು. ಕರ್ತವ್ಯ ನಿರ್ವಹಣೆಗಾಗಿ ಹೋಗಬಹುದು. ಅಂಗಡಿಗೆ ಗ್ರಾಹಕರು ಹೋಗುತ್ತಾರೆ. ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ, ಕಕ್ಷಿದಾರರು ವಕೀಲರಲ್ಲಿ ಹೋಗುತ್ತಾರೆ, ಜನರು ಅಧಿಕಾರಿಗಳ ಬಳಿ ಹೋಗುತ್ತಾರೆ. ಟಿಕೆಟ್ ಕೇಳಲು ಕಂಡಕ್ಟರ್ ಹತ್ತಿರ ಹೋಗಬೇಕು, ದೂರು ಕೊಡಲು ಪೊಲೀಸರ ಬಳಿ ಹೋಗಬೇಕು, ಬಟ್ಟೆ ಹೊಲಿಸಿಕೊಳ್ಳಲು ದರ್ಜಿಯ ಹತ್ತಿರ ಹೋಗಬೇಕು. ಹೀಗೆ ಒಬ್ಬರು ಇನ್ನೊಬ್ಬರ ಬಳಿ ಹೋಗದೆ ಜೀವನ ಸಾಗುವುದಿಲ್ಲ. ಅವಲಂಬನೆ ದಿನದ ಬದುಕಿನ ವಿಧಿಯಾಗಿದೆ. ಇದು ಸಹಕಾರ ಬಾಳಿನ ಸೂತ್ರವಾಗಿದೆ ಎಂದು ಸೌಜನ್ಯ ಲೇಖನದಲ್ಲಿ ವಿವರಿಸಲಾಗಿದೆ.

**26**. ಸೌಜನ್ಯ ಶೀಲವಂತರ ನಡವಳಿಕೆಗಳು ಹೀಗೆ ಇರಬೇಕೆಂದು ಲೇಖಕರು ಹೇಳಿದ್ದಾರೆ. ಕೆಲವರಲ್ಲಿ ಸೌಜನ್ಯ ಕೃತಕವಾಗಿ ಇರಬಹುದು; ಅಷ್ಟಕ್ಕಾಗಿಯಾದರೂ ಅವರು ಅಭಿನಂದನಾರ್ಹರು. ಕುಂಡದ ಗಿಡದ ಹೂವಿನಂತೆ ಏನೋ ಕೆಲವರಿಗಾದರೂ ಅದು ನೆಮ್ಮದಿಯನ್ನು ತರಬಹುದು. ಇಂದಿನದು ಬಹುಮುಖ ಜೀವನ. ಸಮಸ್ಯೆಗಳು ಸಂಕೀರ್ಣ. ವ್ಯಕ್ತಿಯ ನಡತೆ ನಡವಳಿಕೆಗಳು ಚಿತ್ರ ವಿಚಿತ್ರ. ಇಂಥ ಸಂದರ್ಭದಲ್ಲಿ ಸೌಜನ್ಯ ತೋರಲು ಸಹ ತಮಗೆ ಸಮಯವಿಲ್ಲವೆಂದು ಅನೇಕರು ನಟಿಸುತ್ತಾರೆ. ತಮ್ಮ ಬಳಿಗೆ ಬಂದವರು ಏನು ಹೇಳುತ್ತಾರೆ ಎಂಬುದನ್ನು ಕೇಳುವ ತಾಳ್ಮೆಬೇಕು; ಆಗುತ್ತದೋ ಇಲ್ಲವೋ ಎಂಬುದನ್ನು ಹೇಳುವಾಗ ಮಾತು ಮೃದುವಾಗಿದ್ದರೆ ಸಾಕು. ಇದೇ ಸೌಜನ್ಯ, ಇಷ್ಟೇ ಸೌಜನ್ಯ. ಬಂದವರನ್ನು ಕೂರಿಸಿ ಕಾಫಿ ತರಿಸಿಕೊಡಬೇಕಾಗಿಲ್ಲ. ಅವರ ಯೋಗಕ್ಷೇಮಗಳನ್ನು ಗಂಟೆಗಟ್ಟಲೆ ಕೇಳಬೇಕಾಗಿಲ್ಲ. ಯಾವುದೇ ಸಂದರ್ಭದಲ್ಲಿ

ಇನ್ನೊಬ್ಬರ ವಿಷಯದಲ್ಲಿ ನಮ್ಮ ವರ್ತನೆ ಹೇಗಿರುತ್ತದೆ ಎಂಬುದಷ್ಟೇ ಸೌಜನ್ಯದ ಗುರುತು ಎಂದು ಲೇಖಕರು ವಿವರಿಸಿದ್ದಾರೆ.

**VIII ಪ್ರಬಂಧ ಬರವಣಿಗೆ:**

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

**27**. "ಜ್ಞಾನಾಭಿವೃದ್ಧಿಯಲ್ಲಿ ವೃತ್ತಪತ್ರಿಕೆಗಳ ಪಾತ್ರ".

**28**. "ಗ್ರಂಥಾಲಯಗಳ ಮಹತ್ವ".

**IX ಪತ್ರಲೇಖನ ಬರೆಯುವುದು**.

**29. ವ್ಯವಹಾರಿಕ/ ಮನವಿ ಪತ್ರ**

ಇಂದ,ಗೆ, ಸಂಬೋಧನೆ, ವಿಷಯ 1 ಅಂಕ

ಪತ್ರದ ಒಡಲು, ವಿಷಯ ನಿರೂಪಣೆ 2 ಅಂಕಗಳು

ವಂದನೆಯೊಂದಿಗೆ ಮಕ್ತಾಯ, ಇಂತಿ,ಸ್ಥಳ, ದಿನಾಂಕ 1 ಅಂಕ

ಭಾಷಾ ಶೈಲಿಗೆ, ಪದ ಬಳಕೆ ವಿನ್ಯಾಸ 1 ಅಂಕ

**ಒಟ್ಟು 5 ಅಂಕ**

**30. ಖಾಸಗಿ ಪತ್ರ/ಗೆಳೆಯನಿಗೆ**

ಇಂದ, ದಿನಾಂಕ, ಸಂಬೋಧನೆ, ಕ್ಷೇಮವಿಚಾರ 1 ಅಂಕ

ಪತ್ರದ ಒಡಲು, ವಿಷಯ ನಿರೂಪಣೆ 2 ಅಂಕಗಳು

ಮಕ್ತಾಯ, ಇಂತಿ, ಸಹಿ ಹೊರ ವಿಳಾಸ 1 ಅಂಕ

ಭಾಷಾ ಶೈಲಿಗೆ, ಪದ ಬಳಕೆ ವಿನ್ಯಾಸ 1 ಅಂಕ

**ಒಟ್ಟು 5 ಅಂಕಗಳು**

## ಪದ್ಯಭಾಗ : 1 ಬೋಧಿವೃಕ್ಷದ ಹಾಡು

## : ಮಾದರಿ ಉತ್ತರಗಳು:

**I ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ)**

**1**. (ಬಿ) ರಾತ್ರಿಯ+ನಡುವೆ

**2.** (ಸಿ) ಹಿಂಡುಗಟ್ಟಿ

**3.** (ಎ) ಗುಂಪು

**4.** (ಎ) ಗಿಡಗಿಡವೂ

**5**. (ಸಿ) ಶೂರ

**6.** (ಬಿ) ಅಟವಿ

**7**. (ಸಿ) ಆಗಮಸಂಧಿ

**8**. (ಎ) ದ್ವಿರುಕ್ತಿ

**9.** (ಎ) ದ್ವಿತೀಯ

**10**. (ಡಿ) ಹಕ್ಕಿಯೊಂದು

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**11.** ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯೆಂದು ಬಣ್ಣಿಸಿದ್ದಾರೆ.

**12**. ಕಾಡನ್ನು ಅಲೆದ ಸಿದ್ಧಾರ್ಥನಿಗೆ ನಾಡಿನರ್ಥ ಹೊಳೆಯಿತು.

**13**. ಸಿದ್ಧಾರ್ಥನು ಜನರ ಪ್ರೀತಿಯನ್ನು ಹುಡುಕುತ್ತ ಕಾಡಿನಿಂದ ನಾಡಿನತ್ತ ಹೊರಟನು.

**14**. ಬುದ್ಧನು ತಪಸ್ಸಿಗಿಂತ ಜೀವಪ್ರೀತಿ ದೊಡ್ಡದೆಂಬ ಬದುಕಿನ ಸತ್ಯವನ್ನು ಅರಿತುಕೊಂಡನು.

**15**. ಸಿದ್ಧಾರ್ಥನು ಅರಮನೆಯ ಮೋಹವನ್ನು ತೊರೆದನು.

**16**. ಸಿದ್ಧಾರ್ಥನಿಗೆ ಮಹಾಬೆಳಕು ಬೋಧಿವೃಕ್ಷದಲ್ಲಿ ಕಂಡಿತು.

**17**. ಸಿದ್ಧಾರ್ಥ ಮಡದಿ ಮತ್ತು ಮಗುವನ್ನು ತೊರೆದನು.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**18.** ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ದೂರದಿಂದ ಕೋಗಿಲೆಯ ಹಾಡೊಂದು ಕೇಳಿ ಬಂದಂತೆ, ಬಾನಿನಲ್ಲಿ ಬೆಳ್ಳಿಚುಕ್ಕಿ ಮೂಡಿದಂತೆ, ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಂತೆ ಆಯಿತೆಂದು ಬಣ್ಣಿಸಿದ್ದಾರೆ.

**19**. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿಯ ಹೊಳೆಯು ಕೆರೆತುಂಬಿ ಹರಿಯುವಂತೆ ಕಂಡಿತು. ಗೂಡಿನಲ್ಲಿ ಹಕ್ಕಿಗಳ ಹೊಸರಾಗ ಕೇಳಿಸಿತು. ಹೂವಿನ ಮಕರಂದವನ್ನು ಸವಿಯಲು ದುಂಬಿ ಹೂವಿನಿಂದ ಹೂವಿಗೆ ಹಾರಾಡುತ್ತಿತ್ತು. ಎಲ್ಲ ಗಿಡವೂ ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ಕಾಣುತ್ತಿತ್ತು.

**20**. ಕಾಡಿನಿಂದ ಎದ್ದ ಸಿದ್ಧಾರ್ಥ ನಾಡಿನ ಜನರ ಕಡೆಗೆ ಪ್ರೀತಿಯನ್ನು ಹುಡುಕಿಕೊಂಡು ಹೊರಡುತ್ತಾನೆ. ತಪಸ್ಸಿಗಿಂತ ಜೀವ ಪ್ರೀತಿ ದೊಡ್ಡದೆಂದು ತಿಳಿಯುತ್ತಾನೆ. ಪ್ರಕೃತಿಯಲ್ಲಿ ಪ್ರೀತಿ ತುಂಬಿರುವುದನ್ನು ಸಿದ್ಧಾರ್ಥ ಅರಿಯುತ್ತಾನೆ. ಬದುಕಿನ ಗೂಡಾರ್ಥವನ್ನು ಸಿದ್ಧಾರ್ಥನು ಅರಿತು ಬುದ್ಧನಾಗುತ್ತಾನೆ ಎಂದು ಕವಿ ವರ್ಣಿಸಿದ್ದಾರೆ.

**21**. ಸಿದ್ಧಾರ್ಥ ಜೀವನದಲ್ಲಿ ವೈರಾಗ್ಯವನ್ನು ಹೊಂದಿ ಮಧ್ಯರಾತ್ರಿ ಎದ್ದು ಏಕಾಂಗಿಯಾಗಿ ವೀರನಂತೆ ಅರಮನೆಯಿಂದ ಹೊರಡುತ್ತಾನೆ. ಮಡದಿ ಮತ್ತು ಮಗುವನ್ನು ತೊರೆದು ಅಡವಿಯ ದಾರಿಯನ್ನು ಹಿಡಿಯುತ್ತಾನೆ. ಅರಮನೆಯ ಮೋಹ ರಾಜತ್ವದ ಆಸೆ, ಸಿರಿವಂತಿಕೆಯ ವೈಭವದ ಜೀವನವನ್ನು ತೊರೆದು ಹಾಕಿ ಹೊರಟ ಸಿದ್ಧಾರ್ಥ ಗೊತ್ತು ಗುರಿಯಿಲ್ಲದೆ ಕತ್ತಲಲ್ಲಿ ನಡೆದನು ಎಂದು ಕವಿ ವರ್ಣಿಸಿದ್ದಾರೆ.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**22. ಡಾ.ಬಸವರಾಜ ಸಬರದ** ರವರು 1954 ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ಜನಿಸಿದರು. 'ನನ್ನವರ ಹಾಡು', 'ಹೋರಾಟ', 'ಮೂಡಲಕ ಕೆಂಪು ಮೂಡ್ಯಾವ', 'ನೂರು ಹನಿಗಳು', ದನಿಯೆತ್ತಿ ಹಾಡೇನ', 'ಬೆಳದಿಂಗಳ ಬಿಸಿಲಾತ' ಇವರ ಕವನ ಸಂಕಲನಗಳು. 'ರೆಕ್ಕೆ ಮೂಡಿದಾಗ', 'ನರಬಲಿ', ಬೆಳ್ಳಕ್ಕಿ ಸಾಲು' ಇವು ನಾಟಕಗಳು. ಇವರಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ಕುವೆಂಪು ಸಾಹಿತ್ಯ ಪುರಸ್ಕಾರ, ಪರ್ಲ ಕೃಷ್ಣಭಟ್ಟ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1

ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1

ಅಂಕ

**ಒಟ್ಟು 3**

**ಅಂಕಗಳು**

**23. "ಗೊತ್ತು ಗುರಿಯಿಲ್ಲದೆ ಕತ್ತಲಲ್ಲಿ ನಡೆದನು".**

**ಆಯ್ಕೆ**: ಈ ಸಾಲನ್ನು ಡಾ. ಬಸವರಾಜ ಸಬರದ ಅವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನಸಂಕಲನದಿಂದ ಆಯ್ದ ' ಬೋಧಿವೃಕ್ಷದ ಹಾಡು ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಕವಿ ಬುದ್ಧನು ಮನೆ ಬಿಟ್ಟು ಹೋಗುವ ರೀತಿಯನ್ನು ಕುರಿತಾಗಿ ಹೇಳಿದ್ದಾರೆ. ಸಿದ್ಧಾರ್ಥನು ಯುದ್ಧ ಬಿಟ್ಟು ಪ್ರೀತಿಯ ಮಾರ್ಗವನ್ನು ಹುಡುಕುವ ಸಲುವಾಗಿ ತನ್ನ ಪತ್ನಿ, ಮಗ, ಅರಮನೆಯ ಮೋಹವನ್ನು ತೊರೆದು ಯಾವ ಗೊತ್ತು ಗುರಿಯಿಲ್ಲದೆ ಏಕಾಂಗಿಯಾಗಿ ಮಧ್ಯರಾತ್ರಿ ವೀರನಂತೆ ಕಾಡಿಗೆ ಹೋಗುತ್ತಾನೆ ಎಂದು ಕವಿ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಸಿದ್ಧಾರ್ಥನು ಗುರಿಯಿಲ್ಲದೆ ತನ್ನ ವ್ಯಾಮೋಹವನ್ನು ತ್ಯಜಿಸಿರುವುದು ಇಲ್ಲಿ ಸ್ವಾರಸ್ಯವಾಗಿದೆ.

**24. "ಕಾಡತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು".**

**ಆಯ್ಕೆ**: ಈ ಸಾಲನ್ನು ಡಾ. ಬಸವರಾಜ ಸಬರದ ಅವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದಿಂದ ಆಯ್ದ ' ಬೋಧಿವೃಕ್ಷದ ಹಾಡು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿಯು ಬುದ್ಧನು ತಪಸ್ಸು ಮಾಡುವಾಗ ಪ್ರಕೃತಿಯ ಸೌಂದರ್ಯವನ್ನು ಕುರಿತು ಹೇಳಿದ್ದಾರೆ. ಸಿದ್ಧಾರ್ಥನು ಬೋಧಿವೃಕ್ಷದಲ್ಲಿ ಮಹಾಬೆಳಕನ್ನು ಕಂಡನು. ಕಾಡಿನಲ್ಲಿರುವ ಪ್ರಕೃತಿಯ ಸೌಂದರ್ಯವು ಅವನ ಮನಸ್ಸನ್ನು ಸೆಳೆಯಿತು. ಹಕ್ಕಿಯೊಂದು ತನ್ನ ಮರಿಗೆ ಗುಟುಕು ನೀರನ್ನು ಕುಡಿಸಿ ಸಂತೋಷದಿಂದ ಆಕಾಶದ ಎತ್ತರಕ್ಕೆ ಹಾರಿ ಹೋಯಿತು. ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ**: ಸಿದ್ಧಾರ್ಥನು ಬುದ್ಧನಾದಾಗ ಪ್ರಕೃತಿಯ ಸೊಬಗು ಇಮ್ಮಡಿಯಾಯಿತು ಎಂಬುದು ಇಲ್ಲಿ ಸ್ವಾರಸ್ಯವಾಗಿದೆ.

**25. "ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ನಡೆದನು".**

**ಆಯ್ಕೆ**: ಈ ಸಾಲನ್ನು ಡಾ. ಬಸವರಾಜ ಸಬರದ ಅವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದಿಂದ ಆಯ್ದ ' ಬೋಧಿವೃಕ್ಷದ ಹಾಡು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಸಿದ್ದಾರ್ಥ ಬುದ್ಧನಾದ ಮೇಲೆ ಜನರ ಬಳಿಗೆ ಬಂದನು ಎಂದು ಕವಿ ಹೇಳಿದ್ದಾರೆ. ಸಿದ್ದಾರ್ಥ ವೀರನಂತೆ ಮಧ್ಯರಾತ್ರಿ ಹೊರಟ ಬುದ್ಧನಾಗಿ ಮಹಾನ್ ಬೆಳಕಾಗಿ ಕಾಡಿನಿಂದ ಎದ್ದು ಜನರಿಗೆ ಮಾರ್ಗದರ್ಶನ ನೀಡಲು ಜನರ ಪ್ರೀತಿಯನ್ನು ಕಾಣಲು ಬಂದನು ಎಂದು ಕವಿ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** ಜೀವಪ್ರೀತಿಗಿಂತ ಮಿಗಿಲಾಗಿರುವುದು ಯಾವುದೂ ಇಲ್ಲ ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ.

**26. "ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು".**

**ಆಯ್ಕೆ**: ಈ ವಾಕ್ಯವನ್ನು ಡಾ. ಬಸವರಾಜ ಸಬರದ ಅವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದಿಂದ ಆಯ್ದ 'ಬೋಧಿವೃಕ್ಷದ ಹಾಡು ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಕವಿಯು ಬುದ್ಧನು ಗೃಹಸ್ಥ ಜೀವನವನ್ನು ತ್ಯಜಿಸಿ, ಬದುಕಿನ ಸತ್ಯವನ್ನು ಕಾಣಲು ನಾಡಿನಿಂದ ಕಾಡಿಗೆ ಹೊರಟಾಗ ಪ್ರಕೃತಿಯಲ್ಲಿನ ಮರವನ್ನು ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು ಎಂದು ಹೇಳುವ ಸಂದರ್ಭ.

**ಸ್ವಾರಸ್ಯ :** ಬುದ್ಧನಂತೆ ಪ್ರತಿಯೊಬ್ಬನು ತನ್ನ ತಾನು ಅರಿಯುವುದರೊಂದಿಗೆ ಬದುಕಿನ ನಿಜವಾದ ಅರ್ಥ ತಿಳಿದು ಜೀವನ ಮೌಲ್ಯಗಳನ್ನು ರೂಢಿಸಿಕೊಂಡು ಸಮಾಜದಲ್ಲಿ ಒಂದಾಗಿ ಬಾಳಬೇಕೆಂಬುದೇ ಇದರ ಸ್ವಾರಸ್ಯವಾಗಿದೆ.

**VI. ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು:**

ವಿಷಯಾಂಶಕ್ಕೆ 3 ಅಂಕಗಳು

ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 4 ಅಂಕಗಳು**

**27.** ಪ್ರಸ್ತುತ ಪದ್ಯಭಾಗವನ್ನು ಡಾ. ಬಸವರಾಜ ಸಬರದ ಅವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದಿಂದ ಆಯ್ದ ' ಬೋಧಿವೃಕ್ಷದ ಹಾಡು ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು. ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು! ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆಯಿತು. ಬೆಳ್ಳಕ್ಕಿ ಹಿಂಡುಗಟ್ಟಿ ಬಾನೆಗೇಣಿ ಹಾಕಿತು.

**28**. ಪ್ರಸ್ತುತ ಪದ್ಯಭಾಗವನ್ನು ಡಾ. ಬಸವರಾಜ ಸಬರದ ಅವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದಿಂದ ಆಯ್ದ 'ಬೋಧಿವೃಕ್ಷದ ಹಾಡು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಿದ್ಧಾರ್ಥನಿಗೆ ಜ್ಞಾನೋದಯವಾಗಿ ಬುದ್ಧನಾದ ಸಂದರ್ಭವನ್ನು ಕವಿ ವರ್ಣಿಸುತ್ತಾ ಈ ರೀತಿ ಹೇಳುತ್ತಾರೆ. ಕಾಡಿನಿಂದ ಎದ್ದ ಸಿದ್ಧಾರ್ಥ ನಾಡಿನ ಜನರ ಕಡೆಗೆ ಪ್ರೀತಿಯನ್ನು ಹುಡುಕಿಕೊಂಡು ಹೊರಡುತ್ತಾನೆ. ತಪಸ್ಸಿಗಿಂತ ಜೀವ, ಪ್ರೀತಿ ದೊಡ್ಡದೆಂದು ತಿಳಿಯುತ್ತಾನೆ. ಪ್ರಕೃತಿಯಲ್ಲಿ ಪ್ರೀತಿ ತುಂಬಿರುವುದನ್ನು ಸಿದ್ಧಾರ್ಥ ಅರಿಯುತ್ತಾನೆ. ಬದುಕಿನ ಗೂಡಾರ್ಥವನ್ನು ಸಿದ್ಧಾರ್ಥನು ಅರಿತು ಬುದ್ಧನಾಗುತ್ತಾನೆ ಎಂದು ಕವಿ ವರ್ಣಿಸಿದ್ದಾರೆ.

**VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**29. ಕಾಡ ತುಂಬಾ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು**.

**ಅಲಂಕಾರ :** ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

**ಉಪಮೇಯ** : ಕಾಡ ತುಂಬ

**ಉಪಮಾನ**: ಪ್ರೀತಿಯ ಹೊಳೆ

**ವಾಚಕಪದ** : ಅಂತೆ

**ಸಮಾನ ಧರ್ಮ**: ಕೋಡಿಯಂತೆ ಹರಿಯಿತು

**ಸಮನ್ವಯ** : ಇಲ್ಲಿ 'ಕಾಡ ತುಂಬ' ಎಂಬ ಉಪಮೇಯವನ್ನು 'ಪ್ರೀತಿ ಹೊಳೆ' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ ಕೋಡಿಯಂತೆ ಹರಿಯಿತು ಎಂದು ಸಮನ್ವಯಗೊಳಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VIII. ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :**

**30**. ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದವನವನು ಅಡವಿ ದಾರಿ ಹಿಡಿದನು|
ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.

**ಅಥವಾ**

ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು|
ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು.

**IX. ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**31.** ಹಾಗೂ ಯುದ್ಧದ ದುರಂತವನ್ನು ನೋಡಿ ದುಃಖ ಪಡುತ್ತಾನೆ. ಅದರಿಂದ ನೊಂದ ಅವನು ಏಕಾಂಗಿಯಾಗಿ ಮಧ್ಯರಾತ್ರಿಯಲ್ಲಿ ವೀರನಂತೆ ಎದ್ದು ತನ್ನ ಪತ್ನಿ, ಮಗನನ್ನು ಬಿಟ್ಟು ಸಿಂಹಾಸನದ ಮೋಹವನ್ನು ತೊರೆದು ಯಾವುದೇ ಗೊತ್ತು ಗುರಿ ಇಲ್ಲದೆ ಕತ್ತಲಿನಲ್ಲಿ ಕಾಡಿಗೆ ಹೊರಟನು. ಅವನು ಕಾಡಿನಿಂದ ಕಾಡಿಗೆ ಅಲೆದು ನಂತರ ಅವನಿಗೆ ನಾಡಿನ ಅರ್ಥ ಹೊಳೆಯಿತು. ಅವನು ಬೋಧಿವೃಕ್ಷದ ಅಡಿಯಲ್ಲಿ ತಪಸ್ಸಿಗೆ ಕುಳಿತನು. ತಪಸ್ಸನ್ನು ಮಾಡುವಾಗ ಅವನಿಗೆ ದೂರದಿಂದ ಬೆಳಕು ಕಂಡಿತು. ಕಾಡಿನಲ್ಲಿ ಹಕ್ಕಿಗಳು ತನ್ನ ಮರಿಗಳ ಬಾಯಿಗೆ ಆಹಾರ ನೀಡುವುದನ್ನು ಕಂಡನು. ಹುತ್ತದಿಂದ ಇರುವೆಯ ಗುಂಪು ಸಾಲಾಗಿ ಹೋಗುತ್ತಿತ್ತು. ಕಾಡು ತುಂಬಾ ಪ್ರೀತಿಯ ಹೊಳೆಯು ಹರಿಯುತ್ತಿತ್ತು. ಅದನ್ನೆಲ್ಲ ನೋಡಿದ ಸಿದ್ಧಾರ್ಥನ ಮನಸ್ಸು ಕರಗಿತು. ಕಾಡನ್ನು ಬಿಟ್ಟು ನಾಡಿನ ಕಡೆಗೆ ಹೊರಟನು. ಪ್ರೀತಿಯನ್ನು ಹುಡುಕಿಕೊಂಡು ಜನರ ಬಳಿಗೆ ಹೋದನು. ಅವನಿಗೆ ತಪಸ್ಸಿಗಿಂತ ಜೀವಪ್ರೀತಿ ದೊಡ್ಡದು ಎಂದು ಅರಿವಾಯಿತು. ಹೀಗೆ ಸಿದ್ಧಾರ್ಥನು ಬುದ್ಧನಾದನು.

**32**. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಮರವು ಬಳ್ಳಿಯ ಹೂವನ್ನು ಅಪ್ಪಿಕೊಂಡಂತೆ ನಗುತ್ತಿತ್ತು. ಹಕ್ಕಿಯು ಸುಂದರವಾಗಿ ಹಾರಾಡುತ್ತಿತ್ತು. ಇರುವೆಗಳು ಹುತ್ತದಿಂದ ಬಂದು ಗುಂಪಾಗಿ ಸಾಲುಗಟ್ಟಿ ನಡೆಯುತ್ತಿತ್ತು. ಬೆಳ್ಳಕ್ಕಿಯು ಗುಂಪಾಗಿ ಬಾನಿಗೆ ಏಣಿಯನ್ನು ಹಾಕುವಂತೆ ಕಂಡವು. ಕಾಡು ತುಂಬ ಪ್ರೀತಿಯ ಹೊಳೆಯು ಕೆರೆ ತುಂಬಿ ಹರಿಯುವಂತೆ ಕಾಣುತ್ತಿತ್ತು. ಗೂಡಿನಲ್ಲಿ ಹೊಸರಾಗ ಕೇಳಿ ಬಂದಿತು. ದುಂಬಿಯು ಮಕರಂದದ ಸವಿಯನ್ನು ಸವಿಯಲೆಂದು ಹೂವಿನಿಂದ ಹೂವಿಗೆ ಹಾರುತ್ತಿತ್ತು. ಎಲ್ಲ ಗಿಡವೂ ಒಂದನೊಂದು ಅಪ್ಪಿಕೊಂಡು ಕುಣಿಯುವಂತೆ ಕಂಡಿತು. ಅದನ್ನೆಲ್ಲ ನೋಡಿದ ಸಿದ್ಧಾರ್ಥನ ಮನಸ್ಸು

ಕರಗಿತು. ಕಾಡನ್ನು ಬಿಟ್ಟು ನಾಡಿನ ಕಡೆಗೆ ಹೊರಟನು. ಪ್ರೀತಿಯನ್ನು ಹುಡುಕಿಕೊಂಡು ಜನರ ಬಳಿಗೆ ಹೋದನು. ಅವನಿಗೆ ತಪಸ್ಸಿಗಿಂತ ಜೀವಪ್ರೀತಿ ದೊಡ್ಡದು ಎಂದು ಅರಿವಾಯಿತು. ಹೀಗೆ ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಕಂಡುಬಂದಿತು.

**ಪದ್ಯಭಾಗ -2 ಸವಿಚೈತ್ರ**

**:ಮಾದರಿ ಉತ್ತರಗಳು:**

**I ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

1. (ಸಿ) ನೆಲಮುಗಿಲು
2. (ಬಿ) ಮೊಗ
3. (ಎ) ಗುಣಸಂಧಿ
4. (ಸಿ) ಮೈಯನ್ನು+ಕೊಡವಿ
5. (ಎ) ಕಹಿ
6. (ಬಿ) ಎಲ್ಲಿ+ಎಲ್ಲಿ
7. (ಎ) ಚಿಲಿಪಿಲಿ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

8. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯುಗಾದಿಯ ದಿನ.
9. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಬಗೆ ಬಗೆಯ ಬಣ್ಣಗಳಿಂದ ಬರೆದ ಚಿತ್ರದ ಹಾಗೆ ಸಿಂಗಾರಗೊಳ್ಳುತ್ತಾಳೆ.
10. ಚೈತ್ರದಲ್ಲಿ ನೆಲಮುಗಿಲುಗಳ ವಾಲಗ ನಡೆದಿರುತ್ತದೆ.
11. ಚೈತ್ರದಲ್ಲಿ ಪ್ರಕೃತಿ ಎಲ್ಲೆಲ್ಲೂ ಹಸಿರಿನಿಂದ ಕಂಗೊಳಿಸುತ್ತದೆ, ಒಣಗಿ ನಿಂತ ಮರವು ಚಿಗುರು, ಹಣ್ಣು, ಹೂಗಳಿಂದ ಕಂಗೊಳಿಸುತ್ತದೆ.
12. ಯುಗಾದಿಯಲ್ಲಿ ಬೇವು-ಬೆಲ್ಲ ಹಂಚುವ ಸಂಪ್ರದಾಯವಿದೆ.
13. ಬೆಲ್ಲ, ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚುತ್ತದೆ.
14. ಮೈಕೊಡವಿ ಎದ್ದ ಪ್ರಾಣಿ-ಪಕ್ಷಿಗಳು ಲಗುಬಗೆಯ ದಗದಕ್ಕೆ ಹೊರಟಂತಿದೆ.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

15. ಯುಗಾದಿ ಹಳತನ್ನು ಮರೆತು, ಹೊಸತನ್ನು ಹೊತ್ತು ತರುವ ಸಂಭ್ರಮದ ದಿನ. ಯುಗಾದಿ ಸುಖದ ಸುಗ್ಗಿಯನ್ನು ತಂದಿದೆ. ಇದರಿಂದ ಜಗದಲ್ಲೆಲ್ಲ ಹೊಸ ಕಳೆಯು ತುಂಬಿದೆ. ಪ್ರಕೃತಿಯಲ್ಲಿ ಎಲ್ಲೆಲ್ಲೂ ಬಗೆಬಗೆಯ ಬಣ್ಣದ ಚಿತ್ರಗಳು ಬರೆದಂತೆ ಎಲ್ಲೆಲ್ಲೂ ಹೂಗಳು ಅರಳಿವೆ. ಇಡೀ ಪ್ರಕೃತಿ ಹಸಿರಿನಿಂದ ಕೂಡಿದ್ದು, ಹೊಸ ಚೈತನ್ಯವನ್ನು ಹೊಂದಿದೆ. ಭೂಮಿ ತಾಯಿ ನವವಧುವಿನಂತೆ ಅಲಂಕರಿಸಿಕೊಂಡಿರುವಂತೆ ಕಾಣುತ್ತಿದ್ದಾಳೆ.

**16**. ಶಿಶಿರ ಋತುವಿನಲ್ಲಿ ಒಣಗಿದ ಮರಗಳು ಚೈತ್ರ ಮಾಸದಲ್ಲಿ ಚಿಗುರಿ ಬಣ್ಣ ಬಣ್ಣದ ಹೂಗಳು ಅರಳಿ, ಪ್ರಕೃತಿಯಲ್ಲಿ ಎಲ್ಲೆಲ್ಲೂ ಹೊಸತನ ಬಂದಿದೆ. ವಸಂತಮಾಸ ಪ್ರಾರಂಭವಾಗಿ ಕೋಗಿಲೆಯು ಮಧುರ ಕಂಠದಿಂದ ಇಂಪಾಗಿ ಹಾಡುತ್ತಿದೆ. ಪಕ್ಷಿಗಳೆಲ್ಲ ಉತ್ಸಾಹದಿಂದ ಕೂಡಿದ್ದು, ಕೋಗಿಲೆಯ ಮಧುರ ಗಾನದಿಂದ ಹಕ್ಕಿಗಳ ಚಿಲಿಪಿಲಿಯ ಕಲರವಕೆ ಮತ್ತೇರಿದೆ ಎಂದು ಕವಿ ವರ್ಣಿಸಿದ್ದಾರೆ.

**17**. ಚೈತ್ರ ಮಾಸದಲ್ಲಿ ಪ್ರಾಣಿ ಪಕ್ಷಿಗಳಲ್ಲಿ ಹೊಸ ಉತ್ಸಾಹ ಕಂಡುಬರುತ್ತದೆ. ಕೋಗಿಲೆಯ ಇಂಪಾದ ಮಧುರಕಂಠದ ಧ್ವನಿ ಕೇಳಿಬರುತ್ತದೆ. ಪ್ರಾಣಿಪಕ್ಷಿಗಳು ಮೈಕೊಡವಿ ಎದ್ದು, ಹೊಸ ಚೈತನ್ಯದಿಂದ ತಮ್ಮ ತಮ್ಮ ಕಾರ್ಯಗಳಿಗೆ ಸಂತಸದಿಂದ ಹಾರಿಹೋಗುತ್ತವೆ ಎಂದು ಕವಿ ವರ್ಣಿಸಿದ್ದಾರೆ.

**18**. ಚೈತ್ರ ಮಾಸದಲ್ಲಿ ಎಲ್ಲೆಲ್ಲೂ ಹೊಸ ಚೈತನ್ಯ, ಉಲ್ಲಾಸ ಕಂಡುಬರುತ್ತದೆ. ಪ್ರಾಣಿ ಪಕ್ಷಿಗಳಲ್ಲಿ ಹೊಸ ಉತ್ಸಾಹ ಕಂಡುಬರುತ್ತದೆ. ಭೂಮಿಯ ಮೇಲಿನ ಪ್ರತಿಯೊಂದು ಜೀವಿಯಲ್ಲಿಯೂ ಹೊಸ ಜೀವೋಲ್ಲಾಸ ತುಂಬಿ ನೆಲ ಮುಗಿಲ ವಾಲಗವೆ ನಡೆದಂತಿದೆ ಎಂದು ಕವಿ ವರ್ಣಿಸಿದ್ದಾರೆ.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**19. ಶ್ರೀ ಬಸವರಾಜ ಸಾದರ** ರವರು ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ 1955 ರಲ್ಲಿ ಜನಿಸಿದರು. ಇವರು 'ಸಿಸಿಫಸರ ಸುತ್ತು' ಕವನ ಸಂಕಲನ, ತಪ್ಪಂಡ ಕಥಾ ಸಂಕಲನ, ಹೊಸ ಆಲೋಚನೆ ವಿಮರ್ಶಾ ಕೃತಿ, 'ಮೃದುವಾಗಿ ಮುಟ್ಟು' ಪ್ರಬಂಧ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಅಖಿಲ ಭಾರತ ಆಕಾಶವಾಣಿ ಸ್ಪರ್ಧೆ ಬಹುಮಾನ, ಜಯತೀರ್ಥ ರಾಜ ಪುರೋಹಿತ ಸ್ಮಾರಕ ಬಹುಮಾನ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಗಳು ಲಭಿಸಿವೆ.

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**20. "ನೆಲದಮ್ಮ ನವವಧುವೆ ಆದಳಿಂತು"!**

**ಆಯ್ಕೆ**:- ಈ ವಾಕ್ಯವನ್ನು ಬಸವರಾಜ ಸಾದರ ಅವರು ರಚಿಸಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆಯ್ದ 'ಸವಿ ಚೈತ್ರ' ಎಂಬ ಪದ್ಯಬಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:-** ಚೈತ್ರ ಮಾಸದಲ್ಲಿ ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಕುರಿತು ಕವಿ ಹೇಳುವ ಮಾತಿದು. ವಸಂತ ಋತುವಿನಲ್ಲಿ ಮರಗಿಡಗಳು ಹೊಸ ಚಿಗುರೆಲೆಗಳಿಂದ ತುಂಬುತ್ತವೆ. ಬಗೆ ಬಗೆಯ ಬಣ್ಣದ ಹೂಗಳು ಅರಳಿ ಕಂಪನ್ನು ಬೀರುತ್ತವೆ. ಮಾವು ಬೇವು ಮುಂತಾದ ಮರಗಳಲ್ಲಿ ಫಲ ಪುಷ್ಪಗಳು ತುಂಬುತ್ತವೆ. ಮಾವಿನ ಚಿಗುರನ್ನು ಸವಿದು ಕೋಗಿಲೆಯು ಇಂಪಾಗಿ ಹಾಡುವ ಗಾನವು ಭೂಮಿಯ ಎಲ್ಲಾ ಕಡೆ ಮೊಳಗುತ್ತದೆ. ಎಲ್ಲಾ ಕಡೆ ಹಸಿರಿನಿಂದ ಕೂಡಿ ಭೂಮಿ ನವ ವಧುವಿನಂತೆ ಕಂಗೊಳಿಸುತ್ತಾಳೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಯುಗದ ಆದಿಯಲ್ಲಿ ಭೂಮಿ ತಾಯಿಯು ಕಾಣುವ ಬಗ್ಗೆ ವರ್ಣಿಸಿರುವುದನ್ನು ಇಲ್ಲಿ ಕಾಣಬಹುದು.

**21. "ನೆಲಮುಗಿಲು ವಾಲಗವೆ ನಡೆದಂತಿದೆ".**

**ಆಯ್ಕೆ**:- ಈ ವಾಕ್ಯವನ್ನು ಬಸವರಾಜ ಸಾದರ ಅವರು ರಚಿಸಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆಯ್ದ 'ಸವಿ ಚೈತ್ರ' ಎಂಬ ಪದ್ಯಬಾಗದಿಂದ ಆರಿಸಿಕೊಳ್ಳಲಾಗಿದೆ

**ಸಂದರ್ಭ:** ಚೈತ್ರ ಮಾಸದಲ್ಲಿ ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಕುರಿತು ಕವಿ ಹೇಳುವ ಮಾತಿದು. ಚೈತ್ರ ಮಾಸ ಬಂದಾಗ ಪ್ರಕೃತಿಯಲ್ಲಿ ಎಲ್ಲೆಲ್ಲೂ ಹೊಸ ಚೈತನ್ಯವು ಕಂಡುಬರುತ್ತದೆ. ಮಾವು, ಬೇವು ಮುಂತಾದ ಮರಗಳಲ್ಲಿ ಚಿಗುರು ತುಂಬಿತ್ತು. ಮೈಕೊಡವಿ ಆಗ ತಾನೆ ಎದ್ದ ಜಗತ್ತಿನ ಪ್ರಾಣಿ ಪಕ್ಷಿಗಳು ಯಾವುದೋ ಲಗು ಬಗೆಯ ಕೆಲಸಕ್ಕೆ ಹೊರಟಂತೆ ಕಾಣುತ್ತಿತ್ತು. ಎಲ್ಲೆಲ್ಲೂ ನೆಲ ಮುಗಿಲಿನ ವಾಲಗವೇ ನಡೆಯುತ್ತಿರುವಂತೆ ಕಾಣುತ್ತಿತ್ತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಹೊಸ ಮಾಸ, ಹೊಸ ಜೀವೋಲ್ಲಾಸ ಕಂಡುಬರುವುದು ಇಲ್ಲಿ ಸ್ವಾರಸ್ಯವಾಗಿದೆ.

**22. "ಎಲ್ಲರೆದೆಗಳ ತುಂಬ ಸವಿಚೈತ್ರವು".**

**ಆಯ್ಕೆ**:- ಈ ವಾಕ್ಯವನ್ನು ಬಸವರಾಜ ಸಾದರ ಅವರು ರಚಿಸಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆಯ್ದ ಸವಿ ಚೈತ್ರ ಎಂಬ ಪದ್ಯಬಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಚೈತ್ರ ಮಾಸದಲ್ಲಿ ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಕುರಿತು ಕವಿ ಹೇಳುವ ಮಾತಿದು. ಚೈತ್ರ ಮಾಸ ಬಂದಾಗ ಹಳೆಯ ಕೊಳೆಯನ್ನೆಲ್ಲಾ ತಿಕ್ಕಿ ತೊಳೆಯುವಂತೆ ಹಿಂದಿನ

ದುಃಖ, ಸಂಕಟಗಳು ಮಾಯವಾಗಿ ಸಂತಸದ ಮುಖಗಳೇ ಎಲ್ಲಾ ಕಡೆ ಕಾಣಸಿಗುತ್ತವೆ. ಬೆಲ್ಲ ಬೇವಿಗೆ ಸೇರಿ ಸವಿಯಾಗಿ ಜೀವನದ ಕಹಿ ಕಳೆದು, ಸಿಹಿ ಹೆಚ್ಚಾಗಿ ಎಲ್ಲರ ಎದೆಗಳ ತುಂಬಾ ಸವಿಚೈತ್ರವೇ ತುಂಬಿದೆ ಎಂದು ಕವಿ ಹೇಳುವ ಸಂದರ್ಭವಿದು.

**ಸ್ವಾರಸ್ಯ** : ಎಲ್ಲರ ಎದೆಯಲ್ಲಿ ಸವಿ ಚೈತ್ರ ತುಂಬಲಿ ಎನ್ನುವ ಕವಿಯ ಹಾರೈಕೆ ಮಾತು ಇಲ್ಲಿ ಸ್ವಾರಸ್ಯವಾಗಿದೆ.

**23. "ಚಿಲಿಪಿಲಿಯ ಕಲರವಕೆ ಮತ್ತೇರಿದೆ".**

**ಆಯ್ಕೆ**:- ಈ ವಾಕ್ಯವನ್ನು ಬಸವರಾಜ ಸಾದರ ಅವರು ರಚಿಸಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆಯ್ದ 'ಸವಿ ಚೈತ್ರ' ಎಂಬ ಪದ್ಯಬಾಗದಿಂದ ಆರಿಸಿಕೊಳ್ಳಲಾಗಿದೆ

**ಸಂದರ್ಭ:** ಚೈತ್ರ ಮಾಸದಲ್ಲಿ ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಕುರಿತು ಕವಿ ಹೇಳುವ ಮಾತಿದು. ಶಿಶಿರ ಋತುವಿನಲ್ಲಿ ಒಣಗಿದ ಮರ ಚಿಗುರಿ, ಹೂಗಳು ಅರಳಿ ನಗೆ ಬೀರುತ್ತಿವೆ. ಬರಡು ಜೀವಕ್ಕೆ ಚೈತನ್ಯ ಬಂದಿದೆ. ಕೋಗಿಲೆ ಮಧುರ ಕಂಠದಿಂದ ಇಂಪಾಗಿ ಹಾಡುತ್ತಿದೆ. ಇದರಿಂದ ಹಕ್ಕಿಗಳ ಚಿಲಿಪಿಲಿ ಕಲರವಕೆ ಮತ್ತೇರಿದಂತಾಗಿದೆ ಎಂದು ಕವಿ ಹೇಳುವ ಸಂದರ್ಭವಿದು.

**ಸ್ವಾರಸ್ಯ:** ಹೊಸ ಮಾಸ, ಹೊಸ ಜೀವೋಲ್ಲಾಸ ಕಂಡುಬರುವುದು ಇಲ್ಲಿ ಸ್ವಾರಸ್ಯವಾಗಿದೆ.

**VI ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು:**

ವಿಷಯಾಂಶಕ್ಕೆ 3 ಅಂಕಗಳು

ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 4 ಅಂಕಗಳು**

**24.** ಪ್ರಸ್ತುತ ಈ ಪದ್ಯಭಾಗವನ್ನು ಕವಿ ಬಸವರಾಜ ಸಾದರ ಅವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆಯ್ದ 'ಸವಿ ಚೈತ್ರ' ಪದ್ಯದಿಂದ ಆರಿಸಲಾಗಿದೆ.

ಕವಿ ಭಾರತೀಯರ ಹೊಸ ವರ್ಷದ ಮೊದಲ ದಿನವಾದ ಯುಗಾದಿಯ ಮಹತ್ವವನ್ನು ತಿಳಿಸುವಾಗ ಈ ರೀತಿ ಹೇಳಿದ್ದಾರೆ. ಯುಗಾದಿ ಹಬ್ಬದ ದಿನದಂದು, ಹಿಂದಿನ ದಿನಗಳಲ್ಲಿ ಮಾಡಿದ ಪಾಪ ಕರ್ಮಗಳ ಕೊಳೆಯನ್ನು ತಿಕ್ಕಿ ಮೈತೊಳೆದುಕೊಂಡು ಶುಚಿಯಾಗಿರುವಂತೆ, ಎಲ್ಲೆಲ್ಲಿ ನೋಡಿದರೂ ನಗುತ್ತಿರುವ ಸಂತೋಷದ ಮುಖಗಳೆ ಕಾಣುತ್ತವೆ. ಯುಗಾದಿಯಂದು ಬೇವು-ಬೆಲ್ಲವನ್ನು ತಿಂದು ಬರಲಿರುವ ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಆಚರಣೆ ಇದೆ. ಆದರೆ ಇಲ್ಲಿ ಕವಿ ಬೇವು-ಬೆಲ್ಲವನ್ನು ಸಮಾನವಾಗಿ ಕಾಣದೆ ಸಿಹಿಯಾದ ಬೆಲ್ಲದ ಸ್ಥಾನವನ್ನು ಹೆಚ್ಚಿಸಿ, ಅದನ್ನು ಸುಖಕ್ಕೆ ಹೋಲಿಸಿ, ಬೇವಿನ ಕಹಿಯ ಸ್ಥಾನವನ್ನು ಕಡಿಮೆ

ಮಾಡಿ, ಅದನ್ನು ದುಃಖಕ್ಕೆ ಹೋಲಿಸಿ ಎಲ್ಲರಲ್ಲಿಯು ದುಃಖಕ್ಕಿಂತ ಸುಖವೇ ಹೆಚ್ಚಾಗಿ ಕಾಣುವಂತೆ ಎಲ್ಲರ ಮನದ ತುಂಬಾ ಸವಿಚೈತ್ರವೇ ತುಂಬಿದೆ ಎಂದು ಕವಿ ವರ್ಣಿಸುತ್ತಾರೆ.

**25.** ಪ್ರಸ್ತುತ ಈ ಪದ್ಯಭಾಗವನ್ನು ಕವಿ ಬಸವರಾಜ ಸಾದರ ಅವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದಿಂದ ಆಯ್ದ 'ಸವಿ ಚೈತ್ರ' ಪದ್ಯದಿಂದ ಆರಿಸಲಾಗಿದೆ.

ಕವಿ ಭಾರತೀಯರ ಹೊಸ ವರ್ಷದ ಮೊದಲ ದಿನವಾದ ಯುಗಾದಿಯ ಮಹತ್ವವನ್ನು ತಿಳಿಸುತ್ತಾ ಈ ರೀತಿ ಹೇಳಿದ್ದಾರೆ. ಯುಗಾದಿ ಹಬ್ಬ ಬರುವುದು ಚೈತ್ರ ಮಾಸದಲ್ಲಿ. ಚೈತ್ರ ಎಂದರೆ ವಸಂತ. ವಸಂತನೆಂದರೆ ಋತುಗಳ ರಾಜ. ಈ ಋತುವಿನಲ್ಲಿ ಫಲ-ಪುಷ್ಪಗಳು ಸಮೃದ್ಧವಾಗಿರುತ್ತವೆ. ವಸಂತವು ಕವಿಗಳ ಮೆಚ್ಚಿನ ಕಾಲವೂ ಹೌದು. ಬೆಳಗಿನ ಸಮಯದಲ್ಲಿ ನಿದ್ರೆಯಿಂದ ಮೈಮುರಿದು ಮೇಲಕ್ಕೆ ಎದ್ದ ಜಗತ್ತಿನ ಪಕ್ಷಿ ಪ್ರಾಣಿಗಳು ಬಗೆ ಬಗೆಯ ಕೆಲಸಕ್ಕೆ ಬೇಗ ಬೇಗನೆ ಹೊರಟಂತೆ ಕಾಣುತ್ತಿವೆ. ಹೊಸ ಉಲ್ಲಾಸ ತುಂಬಿ ಭಾವನೆಗಳು ಚಿಗುರೊಡೆಯುತ್ತಿವೆ. ನೆಲದಿಂದ ಆಕಾಶದವರೆಗೂ ಮಂಗಳವಾದ್ಯಗಳು ನಡೆದಂತೆ ಕಾಣುತ್ತಿವೆ ಎಂದು ಕವಿ ಹೇಳುತ್ತಾರೆ.

**VII ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**26**. **"ನೆಲದಮ್ಮ ನವವಧುವಿನಂತೆ ಸುಂದರವಾಗಿ ಕಾಣುತ್ತಾಳೆ".**

**ಅಲಂಕಾರ :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು

ಉಪಮಾಲಂಕಾರ

**ಉಪಮೇಯ :** ನೆಲದಮ್ಮ

**ಉಪಮಾನ:** ನವವಧು

**ವಾಚಕಪದ :** ಅಂತೆ

**ಸಮಾನ ಧರ್ಮ:** ಸುಂದರವಾಗಿ ಕಾಣುವುದು

**ಸಮನ್ವಯ :** ಇಲ್ಲಿ 'ನೆಲದಮ್ಮ' ಎಂಬ ಉಪಮೇಯವನ್ನು 'ನವವಧು' ಎಂಬ ಉಪಮಾನಕ್ಕೆ

'ಅಂತೆ' ಎಂಬ ಉಪಮಾವಾಚಕದ ಮೂಲಕ ಸುಂದರವಾಗಿ ಕಾಣುತ್ತಾಳೆ ಎಂದು

ಸಮನ್ವಯಗೊಳಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VIII. ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

**27**. ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕ್ಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲವರಕೆ ಮತ್ತೇರಿದೆ.

**ಅಥವಾ**

ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯು
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿ ಚೈತ್ರವು.

**IX. ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**28.** ಚೈತ್ರವೆಂದರೆ ವಸಂತ ಋತುವಿನ ಕಾಲ. ಈ ಋತುವಿನಲ್ಲಿ 'ಯಗಾದಿ ' ಹಬ್ಬವು ಬರುತ್ತದೆ. ಅಂದರೆ ಹೊಸ ವರ್ಷದ ಪ್ರಾರಂಭದ ಕಾಲ. ವಸಂತನೆಂದರೆ ಋತುಗಳ ರಾಜ. ವಸಂತ ಋತುವಿನಲ್ಲಿ ಮರ ಗಿಡಗಳು ಹೊಸ ಚಿಗುರೆಲೆಗಳಿಂದ ತುಂಬುತ್ತವೆ. ಬಗೆ ಬಗೆಯ ಬಣ್ಣದ ಹೂಗಳು ಅರಳಿ ಕಂಪನ್ನು ಬೀರುತ್ತವೆ. ಮಾವು ಬೇವು ಮುಂತಾದ ಮರಗಳಲ್ಲಿ ಫಲ ಪುಷ್ಪಗಳು ತುಂಬುತ್ತವೆ. ಮಾವಿನ ಚಿಗುರನ್ನು ಸವಿದು ಕೋಗಿಲೆಯು ಇಂಪಾಗಿ ಹಾಡುವ ಗಾನವು ಭೂಮಿಯ ಎಲ್ಲಾ ಕಡೆ ಮೊಳಗುತ್ತದೆ. ಜೊತೆಗೆ ಪಕ್ಷಿಗಳ ಕಲರವವು ಸೊಬಗನ್ನು ಹೆಚ್ಚಿಸಿ, ಈ ಭೂಮಿ ತಾಯಿಯು ಬಣ್ಣ ಬಣ್ಣದ ಚಿತ್ರದಂತೆ ಕೂಡಿ ನಳನಳಿಸುತ್ತಾಳೆ. ಎಲ್ಲಾ ಕಡೆ ಹೊಸ ಕಳೆಯಿಂದ ಬರೆದ ಚಿತ್ರದ ಹಾಗೆ ಈ ಭೂಮಿ ತಾಯಿಯು ನವ ವಧುವಿನಂತೆ ಕಂಗೊಳಿಸುತ್ತಾಳೆ. ಗೆ ಚೈತ್ರ ಮಾಸದಲ್ಲಿ ಪ್ರಕೃತಿಯಲ್ಲಿ ಹಲವಾರು ಬದಲಾವಣೆಗಳು ಆಗುತ್ತವೆ.

**29.** ಚೈತ್ರವೆಂದರೆ ವಸಂತ ಋತುವಿನ ಕಾಲ. ಈ ಋತುವಿನಲ್ಲಿ 'ಯಗಾದಿ ' ಹಬ್ಬವು ಬರುತ್ತದೆ. ಅಂದರೆ ಹೊಸ ವರ್ಷದ ಪ್ರಾರಂಭದ ಕಾಲ. ವಸಂತನೆಂದರೆ ಋತುಗಳ ರಾಜ. ಈ ಋತುವಿನಲ್ಲಿ ಮರ ಗಿಡಗಳೆಲ್ಲಾ ಚಿಗುರಿ ಫಲ ಪುಷ್ಪಗಳಿಂದ ಸಮೃದ್ಧವಾಗಿರುವುದು. ಚೈತ್ರ ಮಾಸದಲ್ಲಿ ಬಗೆಬಗೆಯ ಬಣ್ಣಗಳ ಹೂಗಳು ಅರಳುತ್ತವೆ. ಎಲ್ಲಾ ಕಡೆ ಹೊಸ ಕಳೆಯಿಂದ ಬರೆದ ಚಿತ್ರದ ಹಾಗೆ ಈ ಭೂಮಿ ತಾಯಿಯು ನವ ವಧುವಿನಂತೆ ಕಂಗೊಳಿಸುತ್ತಾಳೆ. ಸ್ವರ್ಗದ

ಸಂತೋಷವನ್ನು, ಸುಗ್ಗಿಯನ್ನು ಈ ಕಾಲವು ತರುತ್ತದೆ. ಚೈತ್ರ ಮಾಸ ಎಂದರೆ ಕವಿಗಳ ಮೆಚ್ಚಿನ ಕಾಲವೂ ಹೌದು. ಚೈತ್ರದ ಸೊಬಗನ್ನು ಬಣ್ಣಿಸದ ಕವಿಯೇ ಇಲ್ಲ. ಹೀಗೆ ಚೈತ್ರವೇ ಯುಗದ ಆದಿಯ ಕಾಲ ಎಂಬುದನ್ನು ಕವಿ ವರ್ಣಿಸಿದ್ದಾರೆ.

## ಪದ್ಯಭಾಗ -3 ಸದ್ದು ಮಾಡದಿರು

## :ಮಾದರಿ ಉತ್ತರಗಳು:

**I ಬಹುಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

**1.** (ಸಿ) ದನಿ

**2.** (ಸಿ) ಹಡಗು ನಿಲ್ಲುವ ಸ್ಥಳ

**3**. (ಬಿ) ನಿರ್ಜೀವ

**4.** (ಎ) ಮೌನಿ+ಆಗು

**5**. (ಎ) ಲೋಪಸಂಧಿ

**6**. (ಡಿ) ಜೋಡಿಪದ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**7**. ತಿಮಿರಕ್ಕೆ ವೈರಿ ಬೆಳಕು.

**8**. ರವಿಕಿರಣಗಳಿಗೆ ಇಬ್ಬನಿ ಕರಗುವಂತೆ, ಮಾನವನು ಸಿಡುಕು-ಮಿಡುಕನು ತೊರೆದು ಇಬ್ಬನಿಯಂತೆ ಮಾನವನ ಬದುಕು ಇರಬೇಕೆಂದು ಕವಿ ಬಯಸುತ್ತಾರೆ.

**9**. ನಮ್ಮ ಕರ್ತವ್ಯಗಳನ್ನು ಶಾಂತ ರೀತಿಯಲ್ಲಿ ಮಾಡಿ ಮುಗಿಸಬೇಕೆಂದು ಕವಿ ಹೇಳಿದ್ದಾರೆ.

**10**. ತಟ್ಟೆಯಲ್ಲಿ ಕರ್ಪೂರ ಮೌನದಲಿ ಕರಗುತ್ತದೆ.

**11**. ಮದ್ದು ಕಿಡಿ ಸೋಕಿದಾಗ ಸಿಡಿದಬ್ಬರಿಸುತ್ತದೆ.

**12**. ಸಿಡುಕು ಮಿಡುಕನು ತೊರೆದು ಮೌನಿಯಾಗಬೇಕು.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**13**. ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ಯಾವುದೇ ಸದ್ದು ಗದ್ದಲವಿಲ್ಲದೆ ತನ್ನೆಲ್ಲಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇರುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿರುವುದು, ಕಾಮನ ಬಿಲ್ಲು ಗೋಚರವಾಗುವುದು, ಪುಷ್ಪವು ಅರಳಿ ಪರಿಮಳ ಸೂಸುವುದು, ಕಾಯಿಗಳು ಮಾಗಿ ರಸಭರಿತ ಹಣ್ಣು ಆಗುವುದು ಇಂತಹ ನೂರಾರು ಅದ್ಭುತ ರಮ್ಯಗಳು ಪ್ರಕೃತಿಯಲ್ಲಿ ನಿತ್ಯ ನಿರಂತರವಾಗಿರುತ್ತವೆ ಎಂದು ಕವಿ ತಿಳಿಸಿದ್ದಾರೆ.

**14.** ಹಸಿ ಸೌದೆ ಬುಸುಗುಟ್ಟಿ ಧ್ವನಿಯೆತ್ತಿ ಶಬ್ದವನ್ನು ಮಾಡುತ್ತದೆ. ಸಿಡಿಮದ್ದಿಗೆ ಕಿಡಿ ಸೋಕಿದಾಗ ಅಬ್ಬರಿಸುತ್ತದೆ. ಆದರೆ ಇದರಿಂದ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದ ಮಾನವರಾದ

ನಾವು ಸೂರ್ಯ ಚಂದ್ರರಂತೆ, ಮರಗಿಡಗಳಂತೆ, ಪ್ರಕೃತಿಯನ್ನು ಆದರ್ಶವಾಗಿಟ್ಟುಕೊಂಡು ಸದ್ದಿಲ್ಲದೆ ತಮ್ಮ ಕಾರ್ಯವನ್ನು ನಿರ್ವಹಿಸಬೇಕು ಎಂದು ಕವಿ ಹೇಳಿದ್ದಾರೆ.

**15**. ಕರ್ಪೂರ ತಾನು ಬೆಂಕಿಯಲ್ಲಿ ಉರಿದರೂ ಬೆಳಕನ್ನು ನೀಡುತ್ತ ಮೌನವಾಗಿ ಕರಗುತ್ತ ಇತರರಿಗೆ ಸಹಾಯವನ್ನು ಮಾಡುತ್ತದೆ. ದೇವರ ಪೂಜೆಗೆ, ಆರತಿ ಬೆಳಗಲು ಪ್ರಮುಖ ಪಾತ್ರ ವಹಿಸುತ್ತದೆ. ಇಷ್ಟಾದರೂ ಯಾವುದೇ ಸದ್ದು ಗದ್ದಲವನ್ನು ಮಾಡದೆ ತನ್ನ ಕಾರ್ಯ ಪೂರೈಸುತ್ತದೆ. ಹಾಗೆಯೇ ಮಾನವರಾದ ನಾವೂ ಸಹ ಕರ್ಪೂರದಂತೆ ತಮಗೆ ಕಷ್ಟ ಬಂದರೂ ಸಹ ಇತರರಿಗೆ ಸಹಾಯ ಮಾಡಬೇಕು. ತಾನು ಮಾಡುತ್ತಿರುವ ಕಾರ್ಯವನ್ನು ಮೌನವಾಗಿ ಪೂರೈಸಬೇಕು ಎಂದು ಕವಿ ಹೇಳಿದ್ದಾರೆ.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**16. ಶ್ರೀ ಸಿ.ಪಿ ಕೃಷ್ಣಕುಮಾರ್:** ಸಿ.ಪಿ.ಕೆ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ಚಿಕ್ಕನಾಯಕನಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್ ಅವರು ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನ ಹಳ್ಳಿಯಲ್ಲಿ 1939 ರಲ್ಲಿ ಜನಿಸಿದರು. ಇವರು ಅನಂತಪೃಥ್ವೀ, ಬೊಗಸೆ, ಕನ್ನಡ ಚತುರ್ಮುಖ, ಕಾವ್ಯಾರಾಧನಾ, ಜನಪದ ಪ್ರತಿಭೆ, ಪರಿಭಾವನೆ, ಸಾಹಿತ್ಯ ತತ್ವಗಳು, ಪಾಶ್ಚಾತ್ಯ ಕಾವ್ಯಚಿಂತನ, ಕನ್ನಡ ನಾಗಾನಂದ, ಕನ್ನಡ ರತ್ನಾವಳಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪದ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**17. "ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು".**

**ಆಯ್ಕೆ**:- ಈ ವಾಕ್ಯವನ್ನು ಸಿ ಪಿ ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಕವಿಯು ಓದುಗರಿಗೆ ಹೇಳಿದ್ದಾರೆ. ನಾವು ಪ್ರಕೃತಿಯನ್ನು ಆದರ್ಶವಾಗಿಟ್ಟುಕೊಂಡು ಬಾಳಬೇಕು. ಹಾಗೆ ಮೌನವಾಗಿ ನಮ್ಮ ಕಾರ್ಯವನ್ನು ಮಾಡಿ ಮುಗಿಸಬೇಕು. ದೀಪದ ಎದುರಿಗೆ ಕತ್ತಲೆ ಸರಿಯುವಂತೆ ತಟ್ಟೆಯಲ್ಲಿ ಕರ್ಪೂರವು ಸದ್ದಿಲ್ಲದೆ ಉರಿದು ಹೋಗುವಂತೆ, ಶಾಂತಿಯಿಂದ ಬದುಕುತ್ತ ಕರ್ತವ್ಯವನ್ನು ನಿರ್ವಹಿಸಬೇಕು ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ:** ಮಾನವನು ತನ್ನ ಜೀವನದಲ್ಲಿ ಯಾವುದೇ ಕೆಲಸದಲ್ಲಿ ತೊಡಗಿದರೂ ಶಾಂತಿಯಿಂದ ಮಾಡಬೇಕು ಎಂಬುದು ಇಲ್ಲಿ ಸ್ವಾರಸ್ಯವಾಗಿದೆ.

**18. "ಸಿಡುಕು ಮಿಡುಕನು ತೊರೆದು ಮೌನಿಯಾಗು".**

**ಆಯ್ಕೆ**: ಈ ವಾಕ್ಯವನ್ನು ಸಿ ಪಿ ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಕವಿಯು ಓದುಗರಿಗೆ ಹೇಳಿದ್ದಾರೆ. ಮನುಷ್ಯನ ಜೀವನದಲ್ಲಿ ಹಸಿ ಸೌದೆಯಂತೆ ಬುಸುಗುಡದೆ, ಸಿಡಿಮದ್ದು ಬರೇ ಸದ್ದು ಮಾಡುವಂತೆ ಬದುಕದೆ, ರವಿ ಕಿರಣಕ್ಕೆ ಮೌನಿಯಾಗಿ ಇಬ್ಬನಿಯು ಕರಗುವಂತೆ, ಸಿಡುಕು ಮಿಡುಕನು ತೊರೆದು ಮೌನವಾಗಿ ಬಾಳುವುದನ್ನು ಕಲಿಯಬೇಕೆಂದು ಕವಿ ಹೇಳುವ ಸಂದರ್ಭವಿದು.

**ಸ್ವಾರಸ್ಯ:** ಜೀವನದಲ್ಲಿ ನಾವು ಇರಬೇಕಾದ ರೀತಿ-ನೀತಿಯನ್ನು ಸರಳ ಭಾಷೆಯಲ್ಲಿ ವರ್ಣಿಸಿರುವುದು ಇಲ್ಲಿ ಸ್ವಾರಸ್ಯವಾಗಿದೆ.

**19. "ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು".**

**ಆಯ್ಕೆ**:- ಈ ವಾಕ್ಯವನ್ನು ಸಿ ಪಿ ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಈ ಮಾತನ್ನು ಕವಿಯು ಓದುಗರಿಗೆ ಹೇಳಿದ್ದಾರೆ. ಆಡಂಬರ ಪ್ರದರ್ಶನಕ್ಕೆ ಜನ ಮನ ಸೋಲುತ್ತಿದ್ದಾರೆ. ಕೀರ್ತಿ, ಸಂಪತ್ತು ಗಳಿಸುವುದೇ ಸಾರ್ಥಕತೆ ಎಂದು ಜನ ಭಾವಿಸಿದ್ದಾರೆ. ಆದರೆ ಇವೆಲ್ಲಕ್ಕಿಂತಲೂ ಶಾಂತಿ, ಸಹನೆ, ಮೌನ, ಪ್ರೀತಿಯಿಂದ ನಮ್ಮ ಕರ್ತವ್ಯವನ್ನು

ಮಾಡಬೇಕು. ತಟ್ಟೆಯಲ್ಲಿರುವ ಕರ್ಪೂರ ಮೌನವಾಗಿ ಕರಗಿ ಇರುವಷ್ಟು ಸಮಯ ಬೆಳಕನ್ನು ಸುತ್ತಲೂ ನೀಡಿ ತನ್ನ ಅವಶೇಷಗಳೆ ಇಲ್ಲದೆ ಮರೆಯಾಗುವಂತೆ ನಮ್ಮ ಕೆಲಸ ಕಾರ್ಯಗಳನ್ನು ಮಾಡಬೇಕು. ಸುಮ್ಮನೆ ಕೂಗಾಡಿ ಹಾರಾಡಿದರೆ ಏನೂ ಪ್ರಯೋಜನವಿಲ್ಲ. ಪ್ರಕೃತಿಯು ಯಾವುದೇ ಸದ್ದು, ಗದ್ದಲವಿಲ್ಲದೆ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇದೆ. ಇದನ್ನು ನೋಡಿ ನಾವು ಕಲಿಯಬೇಕೆ ಎಂದು ಕವಿ ತಿಳಿಸಿದ್ದಾರೆ.

**ಸ್ವಾರಸ್ಯ:** ಬದುಕಿನಲ್ಲಿ ಶಾಂತಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ.

**VI ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು:**

ವಿಷಯಾಂಶಕ್ಕೆ 3 ಅಂಕಗಳು

ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 4 ಅಂಕಗಳು**

**20.** ಈ ವಾಕ್ಯವನ್ನು ಸಿ ಪಿ ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು ಎಂಬ ಪದ್ಯದಿಂದ ಆರಿಸಲಾಗಿದೆ.

ಆಡಂಬರ, ಪ್ರದರ್ಶನಕ್ಕೆ ಜನ ಮನಸೋಲುತ್ತಿದ್ದಾರೆ. ಹೆಸರು , ಕೀರ್ತಿ, ಸಂಪತ್ತನ್ನು ಗಳಿಸುವುದೇ ಜೀವನದ ಸಾರ್ಥಕತೆಯೆಂದು ಜನ ಭಾವಿಸಿದ್ದಾರೆ. ಆದರೆ ಇವೆಲ್ಲಕ್ಕಿಂತಲೂ ಶಾಂತಿ, ಸಹನೆ, ಮೌನ, ಪ್ರೀತಿಯಿಂದ ನಮ್ಮ ಕರ್ತವ್ಯವನ್ನು ಮಾಡಬೇಕು. ತಟ್ಟೆಯಲ್ಲಿರುವ ಕರ್ಪೂರ ಮೌನವಾಗಿ ಕರಗಿ ಇರುವಷ್ಟು ಸಮಯ ಬೆಳಕನ್ನು ಸುತ್ತಲೂ ನೀಡಿ ತನ್ನ ಅವಶೇಷಗಳೇ ಇಲ್ಲದೆ ಮರೆಯಾಗುವಂತೆ, ನಮ್ಮ ಕೆಲಸ ಕಾರ್ಯಗಳನ್ನು ಮಾಡಬೇಕು. ದೀಪದ ಬೆಳಕು ಕಂಡ ಕ್ಷಣ ಕತ್ತಲೆ ಮರೆಯಾಗುವಂತೆ, ಶಾಂತಿಯಿಂದ ಸಹನೆಯಿಂದ ಬದುಕಿನ ಕರ್ತ್ಯವವನ್ನು ಮಾಡಿ ಮುಗಿಸಬೇಕು. ಸುಮ್ಮನೇ ಕೂಗಾಡಿ, ಹಾರಾಡಿದರೆ ಅದರಿಂದ ಏನೂ ಪ್ರಯೋಜನವಿಲ್ಲ. ಮೌನಕ್ಕೆ ಇರುವ ಶಕ್ತಿ ಗದ್ದಲಕ್ಕೆ ಇರಲಾರದು. ಮೌನ ಶಾಂತಿಯ, ಸಮಾಧಾನದ ಪ್ರತೀಕ, ಇದನ್ನು ಪ್ರಕೃತಿಯಲ್ಲಿ ನಾವು ದಿನನಿತ್ಯ ನೋಡುತ್ತಿರುತ್ತೇವೆ. ಪ್ರಕೃತಿಯು ಯಾವುದೇ ಸದ್ದುಗದ್ದಲವಿಲ್ಲದೆ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇದೆ. ಇದನ್ನು ನೋಡಿ ನಾವು ಕಲಿಯಬೇಕೆಂದು ಕವಿಗಳು ಈ ಪದ್ಯದ ಮೂಲಕ ತಿಳಿಸಿದ್ದಾರೆ.

**21.** ಈ ವಾಕ್ಯವನ್ನು ಸಿ ಪಿ ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಎಂಬ ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು ಎಂಬ ಪದ್ಯದಿಂದ ಆರಿಸಲಾಗಿದೆ.

ಕವಿ ಸಿ.ಪಿ.ಕೆ ಅವರು ಈ ಪದ್ಯ ಭಾಗದಲ್ಲಿ ಮನುಷ್ಯರಾದ ನಾವು ಸದ್ದು ಗದ್ದಲ ಮಾಡದೆ ಶಾಂತಿಯಿಂದ ಬದುಕು ಸಾಗಿಸಬೇಕೆಂದು ಹಲವಾರು ನಿದರ್ಶನಗಳನ್ನು ನೀಡಿದ್ದಾರೆ. ಹಸಿಯಾದ ಸೌದೆ ಬೆಂಕಿ ಉರಿಯುವಾಗ ಬುಸುಗುಟ್ಟಿ ಶಬ್ದ ಮಾಡುತ್ತದೆ. ಮದ್ದು ಬೆಂದಕಿಯ ಕಿಡಿ ಸೋಕಿದಾಗ ಅಬ್ಬರಿಸುತ್ತದೆ. ಆದರೆ ಈ ಗದ್ದಲದಿಂದ ತೊಂದರೆಯೇ ಹೊರತು ಶಾಂತವಾದ ಸುಖ ಸಿಗುವುದಿಲ್ಲ. ಆದರೆ ಮನುಷ್ಯರು ಈ ರೀತಿ ಶಬ್ದ ಮಾಡದೆ ಸೂರ್ಯನ ಕಿರಣಗಳಿಗೆ ಇಬ್ಬನಿ ಕರಗುವಂತೆ ಸಿಡುಕು ಮಿಡುಕುಗಳನ್ನು ಬಿಟ್ಟು ಬದುಕನ್ನು ಮೌನವಾಗಿ ನಡೆಸಬೇಕು ಎಂದು ಕವಿಗಳು ತಿಳಿಸಿದ್ದಾರೆ.

ಇವರಿಗೆ ಬಸವ ಸಾಹಿತ್ಯ ಶ್ರೀ, ವಿದ್ವತ್ ಶಿರೋಮಣಿ, ಹನಿಗವನ ಹರಿಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಚುಟುಕ ರತ್ನ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.

**VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**22. "ದೀಪದೆದುರಿಗೆ ತಿಮಿರ ಸರಿಯುವಂತೆ".**

**ಅಲಂಕಾರ :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

**ಉಪಮೇಯ** : ಸ್ಪಷ್ಟವಾಗಿಲ್ಲ ( ಶಾಂತಿಯ ಬದುಕು/ ನಿಶ್ಯಬ್ದ ಬದುಕು)

**ಉಪಮಾನ**: ತಿಮಿರ/ ಕತ್ತಲೆ

**ವಾಚಕಪದ** : ಅಂತೆ

**ಸಮಾನ ಧರ್ಮ**: ಸರಿಯುವಿಕೆ/ಮೌನ

**ಸಮನ್ವಯ** : ಉಪಮೇಯವಾದ ಶಾಂತಿಯ ಬದುಕನ್ನು ಉಪಮಾನವಾದ ತಿಮಿರಕ್ಕೆ ಹೋಲಿಸಿ

ಹೇಳಿರುವುದರಿಂದ ಇದು ಉಪಮಾಲಂಕಾರವಾಗಿದೆ.

**VIII ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**23.** ಆಡಂಬರ, ಪ್ರದರ್ಶನ ಇವುಗಳಿಗೆ ಜನ ಮನಸೋಲುವುದು ಸಾಮಾನ್ಯ. ಸಂಪತ್ತು, ಹೆಸರು, ಕೀರ್ತಿ ಇವುಗಳನ್ನು ಪಡೆಯುವುದೇ ಜೀವನದ ಸಾರ್ಥಕ್ಯವೆಂದು ಬಹಳಷ್ಟು ಮಂದಿ ತಿಳಿದಿದ್ದಾರೆ. ಆದರೆ ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ಯಾವುದೇ ಸದ್ದುಗದ್ದಲವಿಲ್ಲದೆ ತನ್ನೆಲ್ಲಾ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇರುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿರುವುದು, ಕಾಮನ ಬಿಲ್ಲು ಗೋಚರ ಆಗುವುದು ಇಂತಹ ನೂರಾರು ಅದ್ಭುತ ರಮ್ಯಗಳು ಪ್ರಕೃತಿಯಲ್ಲಿ ನಿತ್ಯ ನಿರಂತರವಾಗಿರುತ್ತವೆ. ಅವು ಎಂದಿಗೂ ತಮ್ಮ ಕಾರ್ಯದ ಬಗ್ಗೆ ಹೇಳಿಕೊಂಡಿದ್ದಿಲ್ಲ. ಆದರೆಮಾನವ ಸಣ್ಣ ಕೆಲಸವನ್ನು ಮಾಡಿದರೂ ಅದನ್ನು ದೊಡ್ಡದಾಗಿ ತನ್ನಿಂದಲೇ ಎಂದು ಪ್ರಚಾರ ಮಾಡಿಕೊಳ್ಳುತ್ತಾನೆ. ಹೀಗಾಗಿ ಮಾನವ ತನ್ನ ಅಹಂ ತೊರೆದು ಶಾಂತಿ, ಸಹನೆ, ಪ್ರೀತಿಗಳಿಂದ ಕರ್ತವ್ಯವನ್ನು ಮೌನವಾಗಿ ಮಾಡಿ ಮುಗಿಸಬೇಕು ಎಂಬುದನ್ನು ಸದ್ದು ಮಾಡದಿರು ಕವಿತೆಯ ಸಂದೇಶವಾಗಿದೆ.

**24.** ಬದುಕಿನಲ್ಲಿ ಶಾಂತಿ ಹೆಚ್ಚು ಸುಖ ನೀಡುತ್ತದೆ. ಏಕೆಂದರೆ ನಾವು ನಮ್ಮ ಕರ್ತವ್ಯವನ್ನು ಸದ್ದು ಮಾಡದೆ ಮಾಡಿ ಮುಗಿಸಬೇಕು. ಕರ್ತವ್ಯವನ್ನು ಯಾವುದೇ ಕಾರಣಕ್ಕೂ ಕೂಗಾಡಿ ಹಾರಾಡಿ ಸಿಡುಕಾಡಿ ಮಾಡಬಾರದು. ಈ ರೀತಿ ಮಾಡುವುದರಿಂದ ನಾವು ಮಾಡುವ ಕಾರ್ಯವು ವಿಳಂಬಗೊಳ್ಳುವುದು. ಅಲ್ಲದೇ ನಮ್ಮ ಧ್ಯಾನವನ್ನು ಮೌನವಾಗಿ ಮಾಡುವುದರಿಂದ ನಾವು ಮಾಡುವ ಕಾರ್ಯ ಐಶಸ್ವಿಯಾಗಿ ಫಲಪ್ರದ ಕೂಡ ಆಗುವುದು. ನಾವು ಕೂಡ ಪ್ರಕೃತಿಯಿಂದ ಸಾಕಷ್ಟು ನೀತಿಯನ್ನು ಕಲಿಯಬೇಕಾಗಿದೆ. ದೇವಬರ ಮುಂದೆ ಕರ್ಪೂರವು ಮೌನವಾಗಿ ಕರಗುವಂತೆ ನಾವು ಕೂಡ ಮೌನವಾಗಿ ಕಾರ್ಯ ನಿರ್ವಹಿಸಬೇಕು. ಮೊಗ್ಗು ಅರಳಿ ಹೂವಾಗಿ ಕಂಪನ್ನು ಸೂಸುವ ಹಾಗೆ ತನ್ನ ಕರ್ತವ್ಯವನ್ನು ಅದೇ ರೀತಿಯಾಗಿ ಪೂರೈಸಬೇಕು. ಇಬ್ಬನಿ ಹನಿಗಳನ್ನು ರವಿ ತನ್ನ ಕಿರಣಗಳ ಮೂಲಕ ನೀರನ್ನಾಗಿ ಪರಿವರ್ತಿಸುತ್ತಾನೆ. ದೀಪದ ಬೆಳಕಿನಲ್ಲಿ ಕತ್ತಲು ತನಗೆ ತಾನೇ ಸರಿದು ಹೋಗುವಂತೆ ನಾವು ಮಾಡುವ ಕಾರ್ಯವನ್ನು ಶಾಂತ ರೀತಿಯಲ್ಲಿ ಮಾಡಬೇಕು.

## ಪದ್ಯಭಾಗ -4 ಗುರಿ

### : ಮಾದರಿ ಉತ್ತರಗಳು:

**I ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

1. (ಬಿ) ಬೆಸನ
2. (ಸಿ) ಲೋಪಸಂಧಿ
3. (ಎ) ತಾವರೆ
4. (ಎ) ವೀರ
5. (ಎ) ಹಿರಿದು +ಗುರಿ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :**

**6.** ಮನಸ್ಸು ಒಂದು ಕಡೆ ನೆಲೆಯಿರದೆ ತೊಳಲುವುದರಿಂದ ಅಳಿಯಾಸೆಗಳ ಸುಳಿಗೆ ಸಿಲುಕಬಾರದು.

**7**. ನಮ್ಮ ದುಡಿಮೆಯ ಹೂವು ಫಲಿಸುವುದು ಒಂದು ಗುರಿ ಇದ್ದಾಗ.

**8**. ಹಿಡಿದ ಒಂದು ಒಳ್ಳೆಯ ದಾರಿಯಲ್ಲಿ ಕೊನೆಯವರೆಗೂ ಬಾಳ್ವೆಯನ್ನು ನಡೆಸುವುದೇ ಅಡಿಗರ ಪ್ರಕಾರ ಪೌರುಷದ ಬಾಳ್ವೆಯಾಗಿದೆ.

**9.** ಅಡಿಗರು ಹಗಲಿರುಳು ಹೆಗ್ಗುರಿಗೆ ಹೋರಾಡಬೇಕೆಂದು ಹೇಳುತ್ತಾರೆ.

**10**. ಮನವು ಅಳಿಯಾಸೆಗಳ ಸುಳಿಗೆ ಸಿಲುಕಿದೆ.

**11.** ಪರಹಿತಕ್ಕಾಗಿ ಬಾಳಿದಾಗ ಬದುಕು ಸಾರ್ಥಕವಾಗುವುದು.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**12.** ಕಮಲ ತಾನು ಕೆಸರಿನಲ್ಲಿದ್ದರು ಮೇಲೆ ಬಾಂದಳ (ಆಕಾಶ) ವನ್ನು ನೋಡುತ್ತಾ ಹೊಳೆಯುವ ಸೂರ್ಯನ ಕಿರಣಗಳ ಸಿರಿಗೆ ಮೆರೆದಾಡುತ್ತಾ ವಿಜೃಂಭಿಸಿರುತ್ತದೆ. ಹಾಗೆಯೇ ಮಾನವ ತನ್ನ ಧ್ಯೇಯದ ಕಾರ್ಯಕ್ಕೆ ವಶವಾಗುತ್ತ ಹೆಗ್ಗುರಿಯನ್ನು ಮುಟ್ಟಿ ಸಾರ್ಥಕತೆಯನ್ನು ಪಡೆಯಬೇಕು ಎಂದು ಕವಿಯು ಹೇಳಿದ್ದಾರೆ.

**13**. ಕವಿ ಗೋಪಾಲಕೃಷ್ಣ ಅಡಿಗರು ಗಾಳಿ ಬಂದ ಕಡೆ ತೂರಿಕೊಳ್ಳುವುದು ಹೇಡಿತನವೆನ್ನುತ್ತಾರೆ. ಅಂದರೆ ದೊರೆತ ಯಾವುದೋ ಕೆಲಸವನ್ನು ಮಾಡುತ್ತೇವೆ ಎನ್ನುವುದು ಹೇಡಿತನ. ದಾಳಿ ಬಂದೊಡನೆ ಶರಣಾಗುವುದು ಅಂದರೆ ಯಾವುದೇ ವಿರೋಧ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗದೆ ಸೋಲನ್ನು ಒಪ್ಪಿಕೊಳ್ಳುವುದು ಹೆಣ್ತನ ಎಂದು ಕರೆದಿದ್ದಾರೆ.

**14**. ಬದುಕಿಗೆ ಒಂದು ಗುರಿ ಇಲ್ಲದಿದ್ದರೆ ಚುಕ್ಕಾಣಿ ಇಲ್ಲದ ನೌಕೆಯಂತೆ. ಹೀಗಾಗಿ ಬದುಕಿಗೊಂದು ನಿಶ್ಚಿತ ಗುರಿ ಇರಬೇಕು ಆ ಗುರಿ ಸಾಧನೆಗೆ ಹಗಲಿರುಳು ಪ್ರಯತ್ನಿಸಬೇಕು. ಆಗ ನಮ್ಮ ಬದುಕು ಸಾರ್ಥಕವಾಗುತ್ತದೆ. ಜೀವನದಲ್ಲಿ ಹಲವಾರು ಗುರಿಗಳನ್ನು ಇಟ್ಟುಕೊಂಡು ಯಶಸ್ಸು ಕಾಣಲು ಸಾಧ್ಯವಿಲ್ಲ. ಆದ್ದರಿಂದ ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಎಂದು ಕವಿ ಹೇಳಿದ್ದಾರೆ.

**15**. ಒಂದು ಬಾಣಕ್ಕೆ ಒಂದೇ ಗುರಿ ಇರುತ್ತದೆಯೆ ಹೊರತು ಹಲವು ಗುರಿಗಳು ಇರುವುದಿಲ್ಲ. ಒಂದು ದೇಹದಲ್ಲಿ ಒಂದೇ ಆತ್ಮವಿರುತ್ತದೆಯೆ ಹೊರತು ಎರಡು ಆತ್ಮಗಳಿರುವುದಿಲ್ಲ. ಹಾಗೆಯೆ ಜೀವನಕ್ಕೆ ಹಲವು ಸಾಧ್ಯಗಳ ಅವಶ್ಯಕತೆಯಿಲ್ಲ. ಬದಲಾಗಿ ಒಂದೇ ಹಿರಿದಾದ ಗುರಿಗೆ ಹಗಲಿರುಳು ಹೋರಾಡಬೇಕು ಎನ್ನುವುದಕ್ಕೆ ಈ ನಿದರ್ಶನಗಳನ್ನು ಅಡಿಗರು ನೀಡಿದ್ದಾರೆ.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**16. ಶ್ರೀ ಎಂ ಗೋಪಾಕೃಷ್ಣ ಅಡಿಗ** ರವರು 1918ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿ ಎಂಬಲ್ಲಿ ಜನಿಸಿದರು. ಇವರು 'ಭಾವತರಂಗ', 'ಚಂಡೆಮದ್ದಳೆ, ಭೂಮಿಗೀತ, ನಡೆದು ಬಂದ ದಾರಿ' ಕವನ ಸಂಕಲನಗಳನ್ನು 'ಅನಾಥೆ', ಆಕಾಶದೀಪ- ಎಂಬ ಎರಡು ಕಾದಂಬರಿಗಳನ್ನು ರಚಿಸಿದ್ದಾರೆ. ಇವರ 'ಸಮಗ್ರ ಗದ್ಯವು' ಕನ್ನಡ ಗದ್ಯ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಗಿವೆ. ಇವರಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ದೊರಕಿವೆ.

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪದ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**17. "ಗಾಳಿ ಬಂದೊಡನೆ ಶರಣೆಂಬ ಹೆಣ್ತನವು".**

**ಆಯ್ಕೆ:** ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಕವನ ಸಂಕಲನದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಕವಿಯು ಓದುಗರಿಗೆ ಹೇಳಿದ್ದಾರೆ. ಮನುಷ್ಯನು ಜೀವನದಲ್ಲಿ ಒಂದೇ ಗುರಿ ಹೊಂದಿರಬೇಕು, ಗಾಳಿ ಬಂದ ಕಡೆ ತಿರುಗುವಂತ ಹೇಡಿತನವು ಬೇಡವೆಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ :** ಜೀವನದಲ್ಲಿ ಹೇಡಿತನವಿದ್ದರೆ ಏನನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**18. "ಒಂದೇ ಹೆಗ್ಗುರಿಗೆ ಹೋರಾಡು ಹಗಲಿರುಳು".**

**ಆಯ್ಕೆ:** ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಕವನ ಸಂಕಲನದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿಯು ಓದುಗರಿಗೆ ಹೇಳಿದ್ದಾರೆ. ಮನುಷ್ಯನು ಜೀವನದಲ್ಲಿ ಒಂದೇ ಗುರಿ ಹೊಂದಿರಬೇಕು, ಗಾಳಿ ಬಂದ ಕಡೆ ತಿರುಗುವಂತ ಹೇಡಿತನವು ಬೇಡವೆಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ :** ಜೀವನದಲ್ಲಿ ಹೇಡಿತನವಿದ್ದರೆ ಏನನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**19. "ಪರಹಿತಕ್ಕೆ ಬಳಲುತ್ತಿರಲದುವೆ ಜೀವನವು".**

**ಆಯ್ಕೆ:** ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಕವನ ಸಂಕಲನದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿಯು ಓದುಗರಿಗೆ ಹೇಳಿದ್ದಾರೆ. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ಜೀವನದಲ್ಲಿ ಅವಕಾಶವು ಒಂದೇ ಬಾರಿ ಸಿಗುತ್ತದೆ. ಅದಕ್ಕೆ ಒಂದೇ ಗುರಿಗಾಗಿ ಹೋರಾಡಬೇಕು. ಪರರ ಹಿತಕ್ಕಾಗಿ ಬಾಳಬೇಕು. ನರನಲ್ಲಿ ನಾರಾಯಣನನ್ನು ಕಾಣಬೇಕು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಮನುಷ್ಯ ಸ್ವಾರ್ಥವನ್ನು ಮರೆತು ಪರ ಹಿತಕ್ಕಾಗಿ ಬಾಳಬೇಕು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**20. "ಒಂದು ಜೀವನಕೇಕೆ ಹಲವು ಸಾಧ್ಯಗಳು".**

**ಆಯ್ಕೆ:** ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಕವನ ಸಂಕಲನದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿಯು ಓದುಗರಿಗೆ ಹೇಳಿದ್ದಾರೆ. ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ ಒಂದು ದೇಹದೊಳಗೆ ಒಂದೇ ಆತ್ಮ ಇರುವ ಹಾಗೆ ಈ ಜೀವನದಲ್ಲಿ ಅವಕಾಶವು ಒಂದೇ ಬಾರಿ ಸಿಗುತ್ತದೆ. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು ಎಂದು ತಿಳಿಸುತ್ತಾ ಒಂದೇ ಹೆಗ್ಗುರಿಯ ಸಾಧನೆಗಾಗಿ ಹಗಲಿರುಳು ಹೋರಾಡಬೇಕೆಂದು ಕವಿ ಹೇಳಿದ್ದಾರೆ.

**ಸ್ವಾರಸ್ಯ** : ಇರುವ ಒಂದು ಜೀವನಕ್ಕೆ ಒಂದೇ ಗುರಿ ಸಾಕು ಎನ್ನುವುದು ಇಲ್ಲಿನ ಸ್ವಾರಸ್ಯವಾಗಿದೆ.

**VI. ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು:**

ವಿಷಯಾಂಶಕ್ಕೆ 3 ಅಂಕಗಳು

ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 4 ಅಂಕಗಳು**

**21**. ಈ ಪದ್ಯಭಾಗವನ್ನು ಕವಿ ಎಂ ಗೋಪಾಲಕೃಷ್ಣ ಅಡಿಗರವರ 'ಸಮಗ್ರ ಕಾವ್ಯ' ಕೃತಿಯಿಂದ ಆಯ್ದ 'ಗುರಿ' ಪದ್ಯದಿಂದ ಆರಿಸಲಾಗಿದೆ

ಕವಿ ಎಂ ಗೋಪಾಲಕೃಷ್ಣ ಅಡಿಗರು ಬದುಕಿನಲ್ಲಿ ಒಂದೇ ಹೆಗ್ಗುರಿ ಇರಬೇಕು. ಅದನ್ನು ಮತ್ತೆ ಮತ್ತೆ ಬದಲಾಯಿಸಬಾರದು ಎಂದು ತಿಳಿಸುತ್ತಾ, ಮನುಷ್ಯನ ಮನಸ್ಸು ತನ್ನಲ್ಲಿ ಈಡೇರಿಸಲಾಗದ ಅಥವಾ ಕೀಳು ಆಸೆಗಳ ಸುಳಿಗೆ ಸಿಲುಕಬಾರದು. ಅಂಥಹ ಸುಳಿಗೆ ಸಿಲುಕಿದರೆ ಮನುಷ್ಯನು ಜೀವನ ಪೂರ್ತಿ ಆಶ್ರಯವಿರದೆ ತೊಳಲುತ್ತಾನೆ. ಆದ್ದರಿಂದ ಕೀಳಾಸೆಗಳ ಸುಳಿಗೆ ಸಿಲುಕದೆ ಮನುಷ್ಯನ ಬದುಕಿಗೆ ಅರಳಲಿರುವ ಮೊಗ್ಗುಗಳ ರೀತಿ ಮನಸ್ಸು ಮತ್ತು ಗುರಿ ಇರಬೇಕು. ಪ್ರತಿ ದಿನದ ದುಡಿಮೆಯಿಂದ ಮಾತ್ರ ಮನುಷ್ಯನ ಹೆಗ್ಗುರಿ ಎಂಬ ಹೂ ಫಲಿಸಿ ಬರುವುದಕ್ಕೆ ಸಾಧ್ಯ ಎಂದು ಕವಿ ವರ್ಣಿಸಿ ಹೇಳುತ್ತಾರೆ.

**22.** ಈ ಪದ್ಯಭಾಗವನ್ನು ಕವಿ ಎಂ ಗೋಪಾಲಕೃಷ್ಣ ಅಡಿಗರವರ 'ಸಮಗ್ರ ಕಾವ್ಯ' ಕೃತಿಯಿಂದ ಆಯ್ದ 'ಗುರಿ' ಪದ್ಯದಿಂದ ಆರಿಸಲಾಗಿದೆ.

ಕವಿ ಗೋಪಾಲಕೃಷ್ಣ ಅಡಿಗರು ಬದುಕಿನಲ್ಲಿ ಒಂದೇ ಹೆಗ್ಗುರಿ ಇರಬೇಕು. ಅದನ್ನು ಮತ್ತೆ ಮತ್ತೆ ಬದಲಾಯಿಸಬಾರದು ಎಂದು ತಿಳಿಸುತ್ತಾ ಹೀಗೆ ಹೇಳಿದ್ದಾರೆ. ಮಾನವನೊಳಗೆ ನಾರಾಯಣನ

ರೂಪವನ್ನು ಕಾಣಬೇಕು. ಈ ಭೂಮಿಯಲ್ಲೇ ಸುರಲೋಕದ ಮೈಸಿರಿಯನ್ನು ಉಣ್ಣಬೇಕು. ಸ್ವಆರ್ಥಕ್ಕೆ ಕಾರ್ಯವನ್ನು ಮಾಡದೆ ಪರಹಿತಕ್ಕಾಗಿ ದುಡಿಯಬೆಕು. ಅದೇ ಜೀವನ. ಹೀಗೆ ಮಾನವನಲ್ಲಿ ದೈವತ್ವವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರರ ಹಿತಕ್ಕಾಗಿ ಕರ್ತವ್ಯಪರರಾಗಬೇಕು. ಸ್ವಾರ್ಥದ ಜೊತೆಯಲ್ಲಿಯೇ ಪರಹಿತಾರ್ಥದ ಜೀವನದ ಸಾರ್ಥಕ್ಯವನ್ನು ಕಾಣಬೇಕು. ಸಮಾಜದಿಂದ ನೂರಾರನ್ನು ಪಡೆದು ಬೆಳೆದ ನಾವು ಅದೇ ಸಮಾಜಕ್ಕೆ ಸ್ವಲ್ಪವಾದರು ಮರಳಿಸಬೇಕು. ಅದನ್ನು ಬಿಟ್ಟು ನಾವೇನೂ ಸಾಧನೆ ಮಾಡಿದರೂ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂದು ಕವಿ ವರ್ಣಿಸಿದ್ದಾರೆ.

**VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**23. "ಗುರಿ ಇಲ್ಲದ ಜೀವನ ಚುಕ್ಕಾಣಿ ಇಲ್ಲದ ದೋಣಿಯಂತೆ".**

**ಅಲಂಕಾರ :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

**ಉಪಮೇಯ** : ಗುರಿ ಇಲ್ಲದ ಜೀವನ

**ಉಪಮಾನ**: ಚುಕ್ಕಾಣಿ ಇಲ್ಲದ ದೋಣಿ

**ವಾಚಕಪದ** : ಅಂತೆ

**ಸಮಾನ ಧರ್ಮ**:

**ಸಮನ್ವಯ** : ಇಲ್ಲಿ 'ಗುರಿ ಇಲ್ಲದ ಜೀವನ' ಎಂಬ ಉಪಮೇಯವನ್ನು ' ಚುಕ್ಕಾಣಿ ಇಲ್ಲದ ದೋಣಿಯಂತೆ" ಎಂಬ ಉಪಮಾನಕ್ಕೆ ಸಮನ್ವಯಗೊಳಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VIII ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

**24**. ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು.

**ಅಥವಾ**

ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿ ಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

**IX ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**25**. ಬದುಕಿಗೊಂದು ನಿಶ್ಚಿತ ಗುರಿ ಇರಬೇಕು ಆ ಗುರಿ ಸಾಧನೆಗೆ ಹಗಲಿರುಳು ಪ್ರಯತ್ನಿಸಬೇಕು. ಆಗ ಬದುಕು ಸಾರ್ಥಕವಾಗುತ್ತದೆ. ಜೀವನದಲ್ಲಿ ಹಲವಾರು ಗುರಿಗಳನ್ನು ಇಟ್ಟುಕೊಂಡು ಯಶಸ್ಸು ಕಾಣಲು ಸಾಧ್ಯವಿಲ್ಲ. ಉದಾ: ನಾನು ಜೀವನದಲ್ಲಿ ಡಾಕ್ಟರ್, ಇಂಜಿನಿಯರ್, ಲಾಯರ್, ಪೊಲೀಸ್ ಎಲ್ಲವೂ ಆಗುತ್ತೇನೆಂದು ಗುರಿ ಇಟ್ಟುಕೊಂಡರೆ ಸಾಧಿಸಲು ಸಾಧ್ಯವೇ? ಒಂದು ಬಾಣಕ್ಕೆ ಗುರಿ ಒಂದೆ, ದೇಹಕ್ಕೆ ಆತ್ಮ ಒಂದೆ. ಅಂತೆಯೇ ನಮ್ಮ ಜೀವನಕ್ಕೂ ಒಂದೇ ಗುರಿ ಇರಬೇಕು. ಬದುಕಿಗೊಂದು ಗುರಿ ಇಲ್ಲದಿದ್ದರೆ ಅದು ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದೆ ಕಡಲಿನಲ್ಲಿ ಚುಕಾ ಇಲ್ಲದ ನೌಕೆಯನ್ನು ನಡೆಸಿದಂತಾಗುತ್ತದೆ. ಜೀವನವು ಸಾರ್ಥಕವಾಗಬೇಕಾದರೆ, ನಮ್ಮ ದುಡಿಮೆಗೆ ಫಲವು ಸಿಗಬೇಕಾದರೆ ಒಂದು ನಿಯಮವು ಇರಬೇಕು. ಕೆಸರಿನಲ್ಲಿದ್ದರೂ ಕಮಲದ ಹೂ ಸೂರ್ಯನ ಕಿರಣಕ್ಕೆ ಅರಳುವಂತೆ ಕೆಟ್ಟ ಗುಣಗಳನ್ನು ಅಂಟಿಸಿಕೊಳ್ಳದೆ ಬಾಳಬೇಕು. ಗಾಳಿ ಬಂದಡೆ ತಿರುಗುವ ಹೇಡಿತನ ಬೇಡ ಹೆಣ್ತನವು ಬೇಡ, ಪೌರುಷದಿಂದ ಸರಿದಾರಿಯಲ್ಲಿ ಸಾಗಬೇಕು. ಪರಹಿತಕ್ಕಾಗಿ ಬಾಳಬೇಕು. ನರನಲ್ಲಿ ನಾರಾಯಣನನ್ನು ಕಾಣಬೇಕು. ಸ್ವಾರ್ಥವನ್ನು ಮರೆತು ಪರಹಿತಕ್ಕಾಗಿ ದುಡಿಯಬೇಕು. ಆಗ ಮಾತ್ರ ಬದುಕು ಸಾರ್ಥಕವಾಗುತ್ತದೆ ಎಂದು ಕವಿ ಹೇಳಿದ್ದಾರೆ.

**26**. ಬದುಕಿಗೊಂದು ಗುರಿ ಇರಬೇಕು. ಗುರಿ ಇಲ್ಲದಿದ್ದರೆ ಬದುಕು ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದೆ ಅಪಾರವಾದ ಕಡಲಿನಲ್ಲಿ ಚುಕ್ಕಾಣಿ ಇಲ್ಲದ ನೌಕೆಯನ್ನು ನಡೆಸಿದಂತಾಗುತ್ತದೆ. ಮಾನವನ ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು. ಸಿಲುಕಿದರೆ ನೆಲೆಯಿರದೆ ತೊಳಲುವುದು. ಜೀವನವು ಸಾರ್ಥಕವಾಗಬೇಕಾದರೆ, ನಮ್ಮ ದುಡಿಮೆಗೆ ಫಲವು ಸಿಗಬೇಕಾದರೆ ಒಂದು ನಿಯಮ ಇರಬೇಕು. ಕೆಸರಿನಲ್ಲಿದ್ದರೂ ಕಮಲದ ಹೂ ಸೂರ್ಯನ ಕಿರಣಕ್ಕೆ ಅರಳುವಂತೆ ಕೆಟ್ಟ ಗುಣಗಳನ್ನು ಅಂಟಿಸಿಕೊಳ್ಳದೆ ಬಾಳಬೇಕು. ಗಾಳಿ ಬಂದಡೆ ತಿರುಗುವಾ ಹೇಡಿತನ ಬೇಡ, ಹೆಣ್ತನವು ಬೇಡ, ಪೌರುಷದಿಂದ ಸರಿದಾರಿಯಲ್ಲಿ ಸಾಗಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ಜೀವನದಲ್ಲಿ ಅವಕಾಶವು ಒಂದೇ ಬಾರಿ ಸಿಗುತ್ತದೆ. ಅದಕ್ಕೆ ಒಂದೇ ಗುರಿಗಾಗಿ ಹೋರಾಡಬೇಕು. ಪರಹಿತಕ್ಕಾಗಿ

ಬಾಳಬೇಕು. ನರನಲ್ಲಿ ನಾರಾಯಣನನ್ನು ಕಾಣಬೇಕು ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ.

**27.** ಬದುಕಿಗೊಂದು ಗುರಿ ಇರಬೇಕು. ಗುರಿ ಇಲ್ಲದಿದ್ದರೆ ಬದುಕು ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದೆ ಅಪಾರವಾದ ಕಡಲಿನಲ್ಲಿ ಚುಕ್ಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತಾಗುತ್ತದೆ. ಜೀವನವು ಸಾರ್ಥಕವಾಗಬೇಕಾದರೆ, ನಮ್ಮ ದುಡಿಮೆಗೆ ಫಲವು ಸಿಗಬೇಕಾದರೆ ಒಂದು ನಿಯಮವು ಇರಬೇಕು. ಕೆಸರಿನಲ್ಲಿದ್ದರೂ ಕಮಲದ ಹೂ ಸೂರ್ಯನ ಕಿರಣಕೆ ಅರಳುವಂತೆ ಕೆಟ್ಟ ಗುಣಗಳನ್ನು ಅಂಟಿಸಿಕೊಳ್ಳದೆ ಬಾಳಬೇಕು. ಗಾಳಿ ಬಂದಡೆ ತಿರುಗುವಾ ಹೇಡಿತನ ಬೇಡ ಹೆಣ್ತನವು ಬೇಡ, ಪೌರುಷದಿಂದ ಸರಿದಾರಿಯಲ್ಲಿ ಸಾಗಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ಜೀವನದಲ್ಲಿ ಅವಕಾಶವು ಒಂದೇ ಸಾರಿ ಸಿಗುತ್ತದೆ. ಅದಕ್ಕೆ ಒಂದೇ ಗುರಿಗಾಗಿ ಹೋರಾಡಬೇಕು. ಪರಹಿತಕ್ಕಾಗಿ ಬಾಳಬೇಕು. ನರನಲ್ಲಿ ನಾರಾಯಣನನ್ನು ಕಾಣಬೇಕು.

**X. ಪ್ರಬಂಧ ಬರೆಯಿರಿ.**

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

**28**. "ನನ್ನ ಜೀವನದ ಗುರಿ."

## ಪದ್ಯಭಾಗ -5 ಮೂಡಲ್ ಕುಣಿಗಲ್ ಕೆರೆ

## : ಮಾದರಿ ಉತ್ತರಗಳು:

**I ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

**1**. (ಸಿ) ಕರ್ಮಧಾರಯ ಸಮಾಸ

**2**. (ಬಿ) ಚೀರಾ

**3**. (ಸಿ) ಬರುತ್ತಾನೆ

**4**. (ಸಿ) ಪೂರ್ವದಿಕ್ಕು

**5.** (ಬಿ) ಜೋಗಿ

**6**. (ಸಿ) ಕಪ್ಪಾದ +ಹಕ್ಕಿ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ):**

**7**. ಕುಣಿಗಲ್ ಕೆರೆ ಬಾಳೆಯ ಹಣ್ಣಿನಂತೆ ಬಾಗಿದೆ.

**8.** ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆಯ ಹಣ್ಣಿಗೆ ಹೋಲಿಸಲಾಗಿದೆ.

**9**. ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವನು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ.

**10**. ಕೆರೆಯಲ್ಲಿ ಬಾಳೆ ಮೀನುಗಳಿದ್ದವು.

**11**. ಕುಣಿಗಲ್ ಕೆರೆ ತುಮಕೂರು ಜಿಲ್ಲೆಯಲ್ಲಿದೆ.

**12.** ಸ್ಥಳ ಪುರಾಣದ ಪ್ರಕಾರ ಕುಣಿಗಲ್ ಕೆರೆಯನ್ನು ಕಟ್ಟಿಸಿದ ಚಕ್ರವರ್ತಿ ಉತ್ತರ ದೇಶದ ನೃಂಗರಾಜ.

**13**. ಜನಪದ ಸಾಹಿತ್ಯದ ರಚನಾಕಾರರು ಜನಸಾಮಾನ್ಯರು.

**14.** ಕೆರೆ ತುಂಬಿದ ಖುಷಿಗೆ ಭಾವನು ಬಣ್ಣದ ಸೀರೆಯನ್ನು ತಂದನು.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**15.** ಕುಣಿಗಲ್ ಕೆರೆ ನೋಡುವವರಿಗೆ ವೈಭವದಿಂದ ಕಾಣುತ್ತಿತ್ತು. ಮೂಡಲ ದಿಕ್ಕಿನಲ್ಲಿ ಚಂದಿರ ಉದಯವಾಗುವುದು ಸುಂದರವಾಗಿ ಕಾಣುತ್ತಿತ್ತು. ಜನರು ಸಂತೆಗೆ ಹೋಗುವಾಗ ಆ ಕೆರೆಯ ಕಲ್ಲು ಕಟ್ಟೆಯ ಮೇಲೆ ಹೋಗಬೇಕು. ಕೆರೆಯನ್ನು ನೀಳವಾಗಿ ನೋಡುವವರಿಗೆ ಐಭೋಗದಿಂದ ಕಾಣುತ್ತಿತ್ತು.

**16.**ಕುಣಿಗಲ್ ಕೆರೆ ಮೀನುಗಾರಿಕೆಗೆ ಆಶ್ರಯವಾಗಿದೆ. ಜನರು ಮೀನುಗಳನ್ನು ಹಿಡಿಯಲು ಕೆರೆಯಲ್ಲಿ ಬಲೆಗಳನ್ನು ಹಾಕುತ್ತಾರೆ. ಬಲೆಗಳನ್ನು ನೀರಿನಿಂದ ಮೇಲಕ್ಕೆ ಎತ್ತಿದಾಗ ಬಲೆಯಲ್ಲಿ ಸಿಲುಕಿಕೊಂಡ ಮೀನುಗಳು ನೆಗೆದಾಡುತ್ತವೆ.

**17**. ನಿಂಬೆಯ ಹಣ್ಣಿನಂತೆ ತುಂಬಿರುವ ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವನು ಬರುತ್ತಾನೆ ಮತ್ತು ಕಬ್ಬಕ್ಕಿಗಳು ಬಾಯಿ ಬಿಡುತ್ತವೆ ಎಂದು ಜನಪದರು ಹೇಳಿದ್ದಾರೆ.

**18**. ಕುಣಿಗಲ್ ಕೆರೆಯಲ್ಲಿ ಮೀನುಗಳಿಗೆ ಕೃಷಿಕರು ಬಲೆಗಳನ್ನು ಬೀಸುತ್ತಾರೆ. ಬಲೆಗಳಲ್ಲಿ ಮೀನುಗಳನ್ನು ಹಿಡಿದು ಮೇಲಕ್ಕೆತ್ತಿದಾಗ ಒಂದು ದೋಣಿ ನಡೆಸಲು ಬಳಸುವ ಊರುಗೋಲುಗಳನ್ನು ನೀರಿನಲ್ಲಿ ನೂಕುವಾಗ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವಾಗುತ್ತದೆ.

**IV. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3**

**ಅಂಕಗಳು**

**19. "ಭಾವ ತಂದಾನೆ ಬಣ್ಣದ ಸೀರೆ".**

**ಆಯ್ಕೆ:** ಈ ವಾಕ್ಯವನ್ನು ಮತಿಘಟ್ಟ ಕೃಷ್ಣಮೂರ್ತಿರವರು ಸಂಗ್ರಹಿಸಿರುವ 'ಜನಪದ ಸಾಹಿತ್ಯ ಭಂಡಾರ ಸಂಪುಟ-1' ಕೃತಿಯಿಂದ ಆಯ್ದ 'ಮೂಡಲ್ ಕುಣಿಗಲ್ ಕೆರೆ' ಎಂಬ ಜನಪದ ಗೀತೆಯಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕುಣಿಗಲ್ ಕೆರೆಯ ಸೊಬಗನ್ನು ತಿಳಿಸುವಾಗ ಜನಪದರು ಹೇಳಿದ್ದಾರೆ. ಕೆರೆಗಳು ತುಂಬಿದಾಗ ಬಾಗಿನ ಅರ್ಪಿಸುವ ವಾಡಿಕೆ ಈಗಲೂ ಇದೆ. ಈ ಸಂದರ್ಭದಲ್ಲಿ ಪೂಜಾ ಸಾಮಗ್ರಿಗಳೊಂದಿಗೆ ಸೀರೆ, ಕುಪ್ಪಸ ಹಾಗೂ ಹಣ್ಣು ಹಂಪಲುಗಳನ್ನು ಮರದಲ್ಲಿ ಬಿಟ್ಟು ನೀರಿಗೆ ಬಿಡಲಾಗುತ್ತದೆ. ಕೆರೆ ತುಂಬಿದ ಖುಷಿಗೆ ಭಾವನು ಬಣ್ಣದ ಸೀರೆಯನ್ನು ತಂದನು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಜನಪದ ಸಂಸ್ಕೃತಿಯಲ್ಲಿ ಕೆರೆಗಳು ತುಂಬಿದಾಗ ಬಾಗಿನ ಅರ್ಪಿಸುವ ಪರಿ ಇಲ್ಲಿನ ಸ್ವಾರಸ್ಯವಾಗಿದೆ.

**20. "ಕಬ್ಬಕ್ಕಿ ಬಾಯ ಬಿಡುತಾವ".**

**ಆಯ್ಕೆ:** ಈ ವಾಕ್ಯವನ್ನು ಮತಿಘಟ್ಟ ಕೃಷ್ಣಮೂರ್ತಿರವರು ಸಂಗ್ರಹಿಸಿರುವ 'ಜನಪದ ಸಾಹಿತ್ಯ ಭಂಡಾರ ಸಂಪುಟ-1' ಕೃತಿಯಿಂದ ಆಯ್ದ 'ಮೂಡಲ್ ಕುಣಿಗಲ್ ಕೆರೆ ಎಂಬ ಜನಪದ ಗೀತೆಯಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಜನಪದರು ಕೆರೆಯ ಸೌಂದರ್ಯವನ್ನು ವರ್ಣಿಸುವಾಗ ಹೇಳಿದ್ದಾರೆ. ತುಂಬಿದ ಕೆರೆಯ ಅಂದವನ್ನು ನೋಡಲು ಶಿವನೇ ಬಂದಾಗ, ಜಲಚರಗಳು ಶಿವನನ್ನು ನೋಡಲು ಬರುತ್ತವೆ. ಜಲಚರ ಪ್ರಾಣಿಗಳನ್ನು ತಿನ್ನಲು ಕಬ್ಬಕ್ಕಿಗಳು ಬಾಯಿ ಬಿಡುತ್ತವೆ ಅಂದರೆ ಹಾತೊರೆಯುತ್ತವೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಶಿವನು ಕೆರೆಯ ಅಂದವನ್ನು ನೋಡಲು ಬಂದಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

**21. "ಬೊಬ್ಬೆ ಹೊಡೆದಾವೆ ಬಾಳೆ ಮೀನು".**

**ಆಯ್ಕೆ:** ಈ ವಾಕ್ಯವನ್ನು ಮತಿಘಟ್ಟ ಕೃಷ್ಣಮೂರ್ತಿರವರು ಸಂಗ್ರಹಿಸಿರುವ 'ಜನಪದ ಸಾಹಿತ್ಯ ಭಂಡಾರ ಸಂಪುಟ-1' ಕೃತಿಯಿಂದ ಆಯ್ದ 'ಮೂಡಲ್ ಕುಣಿಗಲ್ ಕೆರೆ' ಎಂಬ ಜನಪದ ಗೀತೆಯಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕುಣಿಗಲ್ ಕೆರೆ ಪ್ರಾಣಿ ಪಕ್ಷಿಗಳಿಗೆ ಹೇಗೆ ಉಪಯೋಗವಾಗುತ್ತಿತ್ತು ಎಂದು ಜನಪದರು ಹೇಳಿದ್ದಾರೆ. ಕೆರೆಯಲ್ಲಿ ಕೃಷಿಕರು ಮೀನುಗಳನ್ನು ಹಿಡಿಯುವಾಗ ಬಲೆಯನ್ನು ಬೀಸುತ್ತಾರೆ. ಆ ಬಲೆಯಲ್ಲಿ ಸಿಲುಕಿಕೊಂಡ ಮೀನುಗಳನ್ನು ನೀರಿನಿಂದ ಮೀನುಗಳನ್ನು ಮೇಲಕ್ಕೆತ್ತಿದಾಗ ವಿಲವಿಲ ಒದ್ದಾಡುವ ಪರಿಯನ್ನು ಬೊಬ್ಬೆ ಹೊಡೆದಾವೆ ಬಾಳೆ ಮೀನು ಎಂದು ವರ್ಣಿಸಿದ್ದಾರೆ.

**ಸ್ವಾರಸ್ಯ :** ಕುಣಿಗಲ್ ಕೆರೆಯಲ್ಲಿನ ಮೀನುಗಳ ಭಯ ಮತ್ತು ಸಂತೋಷ ಎರಡು ಇಲ್ಲಿಯ ಸ್ವಾರಸ್ಯವಾಗಿದೆ.

**V ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**22. "ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ".**

**ಅಲಂಕಾರ :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

**ಉಪಮೇಯ** : ತುಂಬಿದ ಕುಣಿಗಲ್ ಕೆರೆ

**ಉಪಮಾನ**: ಬಾಳೆಯ ಹಣ್ಣು

**ವಾಚಕಪದ** : ಅಂತೆ

**ಸಮಾನ ಧರ್ಮ**: ತುಂಬಿ ಬಾಗುವುದು

**ಸಮನ್ವಯ** : ಉಪಮೇಯವಾದ ತುಂಬಿದ ಕೆರೆಯನ್ನು ಉಪಮಾನವಾದ ಬಾಗಿದ ಬಾಳೆ ಹಣ್ಣಿಗೆ

ಹೋಲಿಸಿ ವರ್ಣಿಸಲಾಗಿದೆ.

**23. "ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ".**

**ಅಲಂಕಾರ :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

**ಉಪಮೇಯ** : ತುಂಬಿದ ಕುಣಿಗಲ್ ಕೆರೆ

**ಉಪಮಾನ**: ನಿಂಬೆಯ ಹಣ್ಣು

**ವಾಚಕಪದ** : ಅಂತೆ

**ಸಮಾನ ಧರ್ಮ**: ತುಂಬಿರುವುದು.

**ಸಮನ್ವಯ** : ಉಪಮೇಯವಾದ ತುಂಬಿದ ಕೆರೆಯನ್ನು ಉಪಮಾನವಾದ ನಿಂಬೆಯ ಹಣ್ಣಿಗೆ

ಹೋಲಿಸಿ ವರ್ಣಿಸಲಾಗಿದೆ.

**VI ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**24.** ಜಲ ಸಂಸ್ಕೃತಿ ಜನಪದರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಸಕಾಲಕ್ಕೆ ಮಳೆ ಬಂದು ಕೆರೆ ಬಾವಿಗಳು ತುಂಬಿ ತುಳುಕಿದರೆ ನಾಡು ಸಂಪದ್ಭರಿತವಾಗಿರುತ್ತದೆ. ಅದೇ ರೀತಿ ಕುಣಿಗಲ್ ಕೆರೆ ಸುತ್ತಮುತ್ತಲಿನ ಜೀವ ಸಂಕುಲಕ್ಕೆ ಆಶ್ರಯವಾಗಿದೆ. ಕೆರೆಯ ಅಂದವನ್ನು ಶಿವನು ನೋಡಲು ಬಂದಾಗ ಕೆರೆಯಲ್ಲಿರುವ ಕಬ್ಬಕ್ಕಿಗಳು ಬಾಯಿ ಬಿಡುತ್ತವೆ. ಕೆರೆಯ ನೀರನ್ನು ಉಂಡು ದಷ್ಟ ಪುಷ್ಟವಾಗಿ ಬಾಳೆಯ ಗಿಡಗಳು ಬೆಳೆದಿವೆ. ಕೆರೆಯಲ್ಲಿ ಬಾಳೆ ಮೀನುಗಳು ವಾಸಿಸುತ್ತಿವೆ. ಕೃಷಿಕರ ಉಪಕಸುಬಿಗೆ ಕೆರೆ ದಾರಿ ಮಾಡಿಕೊಟ್ಟಿದೆ. ಕೆರೆಯ ಪರಿಸರ ಹಸಿರಿನಿಂದ ಸಮೃದ್ಧವಾಗಿದ್ದು ಗುಬ್ಬಿ, ಸಾರಂಗಗಳು ನಗು ನಗುತ್ತಾ ಜೀವಿಸುವುದನ್ನು ವರ್ಣಿಸಲಾಗಿದೆ.

**25.** ಮೂಡಲ ದಿಕ್ಕಿನಲ್ಲಿರುವ ಕುಣಿಗಲ್ ಕೆರೆ ಒಂದು ವೈಭೋಗವೆನಿಸುತ್ತದೆ. ಮೂಡಣ ದಿಕ್ಕಿನಲ್ಲಿ ಚಂದಿರನು ಮೂಡಿ ಬರುತ್ತಾನೆ. ಕೆರೆಯನ್ನು ಅಂತಂತ್ರಿಸಿ ನೋಡುವವರಿಗೆ ತುಂಬಾ ಸೊಗಸಾಗಿ ಕಾಣುತ್ತದೆ. ಸಂತೆಗೆ ಹೋಗುವವರು ಆ ಕೆರೆಯ ಕಲ್ಲು ಕಟ್ಟೆಯ ಮೇಲೆ ಹಾದು ಹೋಗುತ್ತಾರೆ. ಕೆರೆಯು ಬಾಳೆಯ ಹಣ್ಣಿನಂತೆ ಬಾಗಿ ನಿಂಬೆಯ ಹಣ್ಣಿನಂತೆ ತುಂಬಿದೆ. ಅದಕ್ಕೆ ಬಾಗಿನ ಅರ್ಪಿಸಲು ಭಾವ ಬಣ್ಣದ ಸೀರೆಯನ್ನು ತರುತ್ತಾನೆ. ಅದರ ಅಂದವನ್ನು ನೋಡಲು

ಶಿವನೇ ಬರುತ್ತಾನೆ. ಕೆರೆಯಲ್ಲಿರುವ ಮೀನುಗಳನ್ನು ತಿನ್ನಲು ಕಬ್ಬಕ್ಕಿಗಳು ಬಾಯ ಬಿಡುತ್ತಾವೆ. ಕೆರೆಯ ನೀರನ್ನು ಉಂಡು ದಷ್ಟ ಪುಷ್ಟವಾಗಿ ಬೆಳೆದು ನಿಂತ ಬಾಳೆಯ ಗಿಡಗಳು ಗಾಳಿಗೆ ಹೊಯ್ದಾಡುತ್ತವೆ. ಮೀನುಗಳನ್ನು ಹಿಡಿಯಲು ಬಲೆಗಳನ್ನು ಬೀಸಿದಾಗ, ದೋಣಿಗಳನ್ನು ನಡೆಸಲು ಊರುಗೋಲುಗಳನ್ನು ಬಳಸಿದಾಗ ಕೆರೆಯಲ್ಲಿನ ಮೀನುಗಳು ಬೊಬ್ಬೆ ಹೊಡೆಯುತ್ತವೆ. ಬೊಬ್ಬೆ ಹೊಡೆಯುವ ಮೀನುಗಳನ್ನು ಕಂಡ ಗುಬ್ಬಿ, ಸಾರಂಗಗಳು ಸಂತೋಷದಿಂದ ನಗುತ್ತವೆ. ಎಂದು ಕೆರೆಯ ಸೊಬಗನ್ನು ಜನಪದರು ವರ್ಣಿಸುವುದೇ ಈ ಗೀತೆಯ ಭಾವಾರ್ಥವಾಗಿದೆ.

**VII ಪ್ರಬಂಧ ಬರವಣಿಗೆ:**

ಪೀಠಿಕೆ/ಪ್ರಸ್ತಾವನೆ 1ಅಂಕ

ವಿಷಯ ನಿರೂಪಣೆ 2 ಅಂಕಗಳು

ಭಾಷಾ ಶೈಲಿಗೆ,ಮುಕ್ತಾಯ/ ಉಪಸಂಹಾರ 1 ಅಂಕ

**ಒಟ್ಟು 4 ಅಂಕಗಳು**

**26**. "ಜಲಸಂರಕ್ಷಣೆ".

**27**. "ಕೆರೆಗಳ ಮಹತ್ವ".

## ಪದ್ಯಭಾಗ -6 ವಚನಗಳು

## : ಮಾದರಿ ಉತ್ತರಗಳು:

**I ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

**1**. (ಸಿ) ಲೋಪಸಂಧಿ

**2**. (ಎ) ನಿಶ್ಯಬ್ದ

**3**. (ಸಿ) ಮಿಗ

**4**. (ಡಿ) ಚಲಿಸದ

**5**. (ಎ) ಅರಣ್ಯ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು ( ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :**

**6**. ಬಸವಣ್ಣನವರ ಪ್ರಕಾರ ನಶಿಸುವುದು ಸ್ಥಾವರ.

**7**. ಸೊನ್ನಲಿಗ ಸಿದ್ದರಾಮರ ವಚನದ ಪ್ರಕಾರ ಕೆರೆಗಳು ನೀರು ಬರದಿದ್ದರೆ ನಿಷ್ಪ್ರಯೋಜಕ ಆಗುತ್ತದೆ.

**8**. ಧರಿಸಿದಂತ ವೇಷಕ್ಕೆ ತಕ್ಕ ಆಚರಣೆ ಇಲ್ಲದ ಮೇಲೆ ವೇಷ ಧರಿಸಿ ಫಲವಿಲ್ಲ ಎಂದು ಸಿದ್ದರಾಮ ಹೇಳುತ್ತಾರೆ.

**9**. ಸಂತೆಯೊಳಗೊಂದು ಮನೆಯ ಮಾಡಿದರೆ ಶಬ್ದಕ್ಕೆ ಅಂಜಬಾರದು.

**10.** ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಬಾರದು.

**11.**ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ, ನಿಂದನೆಗಳಿಗೆ ಕೋಪ ತಾಳದೆ ಸಮಾಧಾನಿಯಾಗಿರಬೇಕು.

**12**. ಬಸವಣ್ಣನವರ ವಚನಗಳ ಅಂಕಿತ ನಾಮ ಕೂಡಲಸಂಗಮದೇವ.

**13.** ವೇದಾಂತವನ್ನು ಓದಿದವನು ಬ್ರಹ್ಮ ತಾನಾಗಬೇಕು ಎಂದು ಸಿದ್ದರಾಮ ಹೇಳುತ್ತಾರೆ.

**14.** ಚನ್ನಮಲ್ಲಿಕಾರ್ಜುನ ಅಕ್ಕಮಹಾದೇವಿಯವರ ವಚನಗಳ ಅಂಕಿತನಾಮ.

**15**. ಸೊನ್ನಲಿಗೆ ಸಿದ್ದರಾಮರ ವಚನಗಳ ಅಂಕಿತನಾಮ ಸೊನ್ನಲಿಗೆ ಸಿದ್ದರಾಮ.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**16.** ಲೋಕದಲ್ಲಿ ಕೇಳಿಬರುವ ಸ್ತುತಿ ನಿಂದನೆಗಳನ್ನು ಅಕ್ಕಮಹಾದೇವಿಯು ಹೀಗೆ ಹೋಲಿಸಿದ್ದಾರೆ. ಬೆಟ್ಟದ ಮೇಲೆ ಮನೆಯ ಮಾಡಿ ಮೃಗಗಳಿಗೆ ಅಂಜಬಾರದು, ಸಮುದ್ರದ

ತಡಿಯಲ್ಲೊಂದು ಮನೆಯ ಮಾಡಿ ನೊರೆತೆರೆಗಳಿಗೆ ಅಂಜಬಾರದು, ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ಅಂಜಬಾರದು, ಎಂದು ಹೇಳಿದ್ದಾರೆ.

**17**. ಬಸವಣ್ಣನವರು ಹೇಳುವ ಪ್ರಕಾರ ಉಳ್ಳವರು ಶಿವಾಲಯವನ್ನು ಮಾಡುವರು. ಆದರೆ ಬಡವರಾದವರು ಏನು ಮಾಡಲು ಸಾಧ್ಯವಿಲ್ಲ. ಅದಕ್ಕೆ ನಾನೇನು ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಯ್ಯ ಕೂಡಲಸಂಗಮದೇವ ಕೇಳಯ್ಯ, ಸ್ಥಾವರಕ್ಕಳಿವುಂಟು , ಜಂಗಮಕ್ಕಳಿವಿಲ್ಲ ಎಂದು ವರ್ಣಿಸಿದ್ದಾರೆ.

**18**. ಸೊನ್ನಲಿಗೆ ಸಿದ್ಧರಾಮರು ಮಾನವನ ಬಾಹ್ಯ ಮತ್ತು ಆಂತರಿಕ ನಡವಳಿಕೆಗಳನ್ನು ಕುರಿತು ಹೇಳಿದ್ದಾರೆ. ಸೊನ್ನಲಿಗೆಯ ಸಿದ್ಧರಾಮರು ತನ್ನ ವಚನದಲ್ಲಿ ಧರಿಸಿದಂತ ವೇಷಕ್ಕೆ ತಕ್ಕ ಆಚರಣೆ ಇಲ್ಲದ ಮೇಲೆ ವೇಷ ಧರಿಸಿ ಫಲವಿಲ್ಲ. ತಾನು ಅರ್ಥ ಮಾಡಿಕೊಂಡು ಬ್ರಹ್ಮನಾಗದ ಮೇಲೆ. ವೇದಾಂತವನ್ನು ಓದಿ ಫಲವಿಲ್ಲ. ಪುಣ್ಯ ತೀರ್ಥಗಳು ಬರದೆ ಇದ್ದರೆ ನಾನಾ ಕೆರೆಗಳನ್ನು ತೋಡಿ ಫಲವಿಲ್ಲ,  ಹೀಗೆ ವಚನಕಾರರು ಅರ್ಥವಿಲ್ಲದ ಆಚರಣೆಗಳನ್ನು ದೂರವಿಟ್ಟು ಪ್ರಾಮಾಣಿಕವಾಗಿರಬೇಕು ಎಂದು ತಿಳಿಸುತ್ತಾರೆ.

**IV. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು  1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**19. "ಶಿರವೇ ಹೊನ್ನ ಕಳಶವಯ್ಯಾ".**

**ಆಯ್ಕೆ:** ಈ ವಾಕ್ಯವನ್ನು ಬಸವಣ್ಣನವರ ವಚನಗಳಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಬಸವಣ್ಣನವರು ಓದುಗರಿಗೆ ಹೇಳಿದ್ದಾರೆ. ಶ್ರೀಮಂತಿಕೆ ಉಳ್ಳವರು ಶಿವನ ಆಲಯವನ್ನು ಕಟ್ಟುತ್ತಾರೆ. ಬಡವರಾದವರು ಏನೂ ಮಾಡಲು ಆಗುವುದಿಲ್ಲ. ತನ್ನ ಕಾಲನ್ನೇ ದೇವಾಲಯದ ಕಂಬ, ತನ್ನ ದೇಹವನ್ನು ದೇಗುಲ ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ದೇವಾಲಯದಲ್ಲಿ ಕಾಣುವ ಕಳಶಕ್ಕೆ, ತನ್ನ ದೇಹದ ಶಿರವನ್ನೇ ಕಳಶವಾಗಿರಿಸುವುದು ಇಲ್ಲಿನ ಸ್ವಾರಸ್ಯವಾಗಿದೆ.

**20. "ವೇಷ ಧರಿಸಿ ಫಲವೇನಯ್ಯಾ".**

**ಆಯ್ಕೆ:** ಈ ವಾಕ್ಯವನ್ನು ಸೊನ್ನಲಿಗೆ ಸಿದ್ಧರಾಮರ ವಚನಗಳಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಸೊನ್ನಲಿಗೆ ಸಿದ್ದರಾಮರು ಮಾನವನ ಬಾಹ್ಯ ಮತ್ತು ಆಂತರಿಕ ನಡವಳಿಕೆಗಳನ್ನು ಕುರಿತು ಹೇಳಿದ್ದಾರೆ. ಮನುಷ್ಯನು ಧರಿಸಿದಂತ ವೇಷಕ್ಕೆ ತಕ್ಕ ಆಚರಣೆಯಿಲ್ಲದ ಮೇಲೆ ವೇಷ ಧರಿಸಿ ಫಲವಿಲ್ಲ ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಅರ್ಥವಿಲ್ಲದ ಆಚರಣೆಗಳನ್ನು ದೂರವಿಟ್ಟು ಪ್ರಾಮಾಣಿಕವಾಗಿರಬೇಕು ಮತ್ತು ಜೀವನದ ಸಫಲತೆ ಸಾಧ್ಯವಾಗುವುದು ಯಾವಾಗ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**21. “ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ?”**

**ಆಯ್ಕೆ:** ಈ ವಾಕ್ಯವನ್ನು ಅಕ್ಕಮಹಾದೇವಿಯವರ ವಚನಗಳಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಅಕ್ಕಮಹಾದೇವಿ ತನ್ನ ವಚನದಲ್ಲಿ ಬೆಟ್ಟದ ಮೇಲೆ ಮನೆಯ ಮಾಡಿ ಮೃಗಗಳಿಗೆ ಭಯಪಡಬಾರದು, ಸಮುದ್ರದ ದಡದಲ್ಲಿ ಮನೆಯನ್ನು ಮಾಡಿ ನೊರೆ ತೆರೆಗಳಿಗೆ ಅಂಜಬಾರದು, ಸಂತೆಯಲ್ಲಿ ಮನೆಯನ್ನು ಮಾಡಿ ಶಬ್ದಕ್ಕೆ ಅಂಜಬಾರದು. ಲೋಕದೊಳಗೆ ಹುಟ್ಟಿದ ಮೇಲೆ ನಿಂದನೆಗಳು ಬಂದರು ಕೋಪವನ್ನು ಮಾಡಿಕೊಳ್ಳದೆ ಸಮಾಧಾನವಾಗಿ ಜೀವನವನ್ನು ಸಾಗಿಸಬೇಕು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಅಕ್ಕಮಹಾದೇವಿಯವರು ಬದುಕು ಫಲದಾಯಕವಾಗುವ ಅಂಶಗಳನ್ನು ಕುರಿತು ಹೇಳುವುದು ಇಲ್ಲಿನ ಸ್ವಾರಸ್ಯವಾಗಿದೆ.

**V ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು:**

ವಿಷಯಾಂಶಕ್ಕೆ 3 ಅಂಕಗಳು

ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 4 ಅಂಕಗಳು**

**22.** ಈ ಪದ್ಯಭಾಗವನ್ನು ಸೊನ್ನಲಿಗೆ ಸಿದ್ದರಾಮ ಬರೆದಿರುವ ವಚನಗಳಿಂದ ಆರಿಸಲಾಗಿದೆ.

ಈ ಪದ್ಯಭಾಗದಲ್ಲಿ ಸೊನ್ನಲಿಗೆ ಸಿದ್ದರಾಮರು ಮಾನವನ ಬಾಹ್ಯ ಮತ್ತು ಆಂತರಿಕ ನಡವಳಿಕೆಗಳನ್ನು ಕುರಿತು ಹೇಳಿದ್ದಾರೆ. ವಚನದಲ್ಲಿ ಧರಿಸಿದಂತ ವೇಷಕ್ಕೆ ತಕ್ಕ ಆಚರಣೆ ಇಲ್ಲದ ಮೇಲೆ ವೇಷ ಧರಿಸಿ ಫಲವಿಲ್ಲ. ತಾನು ಅರ್ಥ ಮಾಡಿಕೊಂಡು ಬ್ರಹ್ಮನಾಗದ ಮೇಲೆ ವೇದಾಂತವನ್ನು ಓದಿ ಫಲವಿಲ್ಲ. ಪುಣ್ಯ ತೀರ್ಥಗಳು ಬರದೆ ಇದ್ದರೆ ನಾನಾ ಕೆರೆಗಳನ್ನು ತೋಡಿ ಫಲವಿಲ್ಲ. ಹೀಗೆ ಅರ್ಥವಿಲ್ಲದ ಆಚರಣೆಗಳನ್ನು ದೂರವಿಟ್ಟು ಪ್ರಾಮಾಣಿಕವಾಗಿ ಬದುಕಬೇಕು ಎಂಬ ಅಂಶವನ್ನು ತಿಳಿಸಿದ್ದಾರೆ.

**VI. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**23. “ಎನ್ನ ಕಾಲೇ ಕಂಬ”.**

**ಅಲಂಕಾರ :** ರೂಪಕಾಲಂಕಾರ

**ಲಕ್ಷಣ :** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡು ಒಂದೇ ಎಂದು ವರ್ಣಿಸಿದರೆ ಅದು ರೂಪಕಲಂಕಾರ.

**ಉಪಮೇಯ** : ಕಾಲು

**ಉಪಮಾನ**: ಕಂಬ

**ಸಮನ್ವಯ** : ಇಲ್ಲಿ ಕಾಲನ್ನು ಕಂಬಕ್ಕೆ ಹೋಲಿಸಲಾಗಿದೆ. ಇವೆರಡು ಬೇರೆ ಬೇರೆ ಎಂದು ಹೇಳಲಾಗಿಲ್ಲ. ಆದ್ದರಿಂದ ಇದು ರೂಪಕ ಅಲಂಕಾರವಾಗಿದೆ.

**24. “ದೇಹವೇ ದೇಗುಲ”.**

**ಅಲಂಕಾರ :** ರೂಪಕಾಲಂಕಾರ

**ಲಕ್ಷಣ :** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡು ಒಂದೇ ಎಂದು ವರ್ಣಿಸಿದರೆ ಅದು ರೂಪಕಲಂಕಾರ.

**ಉಪಮೇಯ** : ದೇಹ

**ಉಪಮಾನ**: ದೇಗುಲ

**ಸಮನ್ವಯ** : ಇಲ್ಲಿ ದೇಹವನ್ನು ದೇಗುಲಕ್ಕೆ ಹೋಲಿಸಲಾಗಿದೆ. ಇವೆರಡು ಬೇರೆ ಬೇರೆ ಎಂದು ಹೇಳಲಾಗಿಲ್ಲ. ಆದ್ದರಿಂದ ಇದು ರೂಪಕ ಅಲಂಕಾರವಾಗಿದೆ.

**VII ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

**25**. ಉಳ್ಳವರು ಶಿವಾಲಯವ ಮಾಡುವರು!
ನಾನೇನ ಮಾಡುವೆ? ಬಡವನಯ್ಯ!
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರವೇ ಹೊನ್ನ ಕಳಶವಯ್ಯ!
ಕೂಡಲಸಂಗಮದೇವ ಕೇಳಯ್ಯ,
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ!

**ಅಥವಾ**

ಬೆಟ್ಟದ ಮೇಲೊಂದು ಮನೆಯ ಮಾಡಿ

ಮೃಗಗಳಿಗಂಜಿದಡೆಂತಯ್ಯಾ? ಸಮುದ್ರದ ತಡಿಯಲೊಂದು ಮನೆಯ ಮಾಡಿ

ನೊರೆತೆರೆಗಳಿಗಂಜಿದೆಡಂತಯ್ಯಾ? ಸಂತೆಯೊಳಗೊಂದು ಮನೆಯ ಮಾಡಿ

ಶಬ್ದಕ್ಕೆ ನಾಚಿದಡೆಂತಯ್ಯಾ? ಚೆನ್ನಮಲ್ಲಿಕಾರ್ಜುನ ಕೇಳಯ್ಯಾ

ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದನೆಗಳು

ಬಂದಂಡೆ ಮನದಲ್ಲಿ ಕೋಪದ ತಾಳದೆ ಸಮಾಧಾನಿಯಾಗಿರಬೇಕು.

**VIII ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**26.** ಸೊನ್ನಲಿಗೆ ಸಿದ್ಧರಾಮರು ತನ್ನ ವಚನದಲ್ಲಿ ಬಾಹ್ಯ ಮತ್ತು ಆಂತರಿಕ ನಡವಳಿಕೆಗಳಲ್ಲಿ ಸಾಮ್ಯತೆ ಇರಬೇಕೆಂದು ತಿಳಿಸುತ್ತಾರೆ. ನಾವು ವಚನದಲ್ಲಿ ಧರಿಸಿದಂತ ವೇಷಕ್ಕೆ ತಕ್ಕ ಆಚರಣೆ ಇಲ್ಲದ ಮೇಲೆ ವೇಷ ಧರಿಸಿ ಫಲವಿಲ್ಲ. ತಾನು ಅರ್ಥ ಮಾಡಿಕೊಂಡು ಬ್ರಹ್ಮನಾಗದ ಮೇಲೆ ವೇದಾಂತವನ್ನು ಓದಿ ಫಲವಿಲ್ಲ. ಪುಣ್ಯ ತೀರ್ಥಗಳು ಬರದೆ ಇದ್ದರೆ ನಾನಾ ಕೆರೆಗಳನ್ನು ತೋಡಿ ಫಲವಿಲ್ಲ. ಹೀಗೆ ಅರ್ಥವಿಲ್ಲದ ಆಚರಣೆಗಳನ್ನು ದೂರವಿಟ್ಟು ಪ್ರಾಮಾಣಿಕವಾಗಿ ಬದುಕಬೇಕು ಎಂಬ ಅಂಶವನ್ನು ತಿಳಿಸಿದ್ದಾರೆ.

**27.** ಅಕ್ಕಮಹಾದೇವಿ ತನ್ನ ವಚನದಲ್ಲಿ ಬದುಕು ಫಲದಾಯಕವಾಗುವ ಅಂಶಗಳನ್ನು ಕುರಿತು ಹೀಗೆ ಹೇಳಿದ್ದಾರೆ. ಬೆಟ್ಟದ ಮೇಲೆ ಮನೆಯ ಮಾಡಿ ಮೃಗಗಳಿಗೆ ಭಯಪಡಬಾರದು, ಸಮುದ್ರದ ದಡದಲ್ಲಿ ಮನೆಯನ್ನು ಮಾಡಿ ನೊರೆ ತೆರೆಗಳಿಗೆ ಅಂಜಬಾರದು, ಸಂತೆಯಲ್ಲಿ ಮನೆಯನ್ನು ಮಾಡಿ ಶಬ್ದಕ್ಕೆ ಅಂಜಬಾರದು. ಲೋಕದೊಳಗೆ ಹುಟ್ಟುದ ಮೇಲೆ ನಿಂದನೆಗಳು ಬಂದರು ಕೋಪವನ್ನು ಮಾಡಿಕೊಳ್ಳದೆ ಸಮಾಧಾನವಾಗಿ ಜೀವನವನ್ನು ಸಾಗಿಸಬೇಕು ಎಂದು ಅಕ್ಕಮಹಾದೇವಿ ನಿದರ್ಶನಗಳೊಂದಿಗೆ ಹೇಳಿದ್ದಾರೆ.

## ಪದ್ಯಭಾಗ -7 ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

## : ಮಾದರಿ ಉತ್ತರಗಳು:

**I ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗೆ ಪ್ರತಿ ಸರಿಯುತ್ತರಕ್ಕೆ 1ಅಂಕ).**

**1**. (ಬಿ) ಧರಣಿ

**2**. (ಸಿ) ಪೃಥ್ವಿ

**3**. (ಸಿ) ವನಜಮುಖಿ

**4.** (ಎ) ಯತಿ

**5**. (ಸಿ) ನಾಲ್ಕು

**6**. (ಬಿ) ಆರು

**7**. (ಡಿ) ಲಘು

**8**. (ಸಿ) ಷಟ್ಪದಿ

**9**. (ಎ) ಸೈನ್ಯ

**10**. (ಡಿ) ಅದುಬುತ

**II ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :**

**11.** ಕೌರವನ ಸೇನೆಯು ಉತ್ತರನಿಗೆ ವಿಶಾಲವಾದ ಸಮುದ್ರದಂತೆ ಕಾಣಿಸಿತು.

**12**. ಬಲವಾದ ಕೌರವನ ಸೇನೆಯನ್ನು ನೋಡಿ ಹೆದರಿ ಉತ್ತರನು ನಿಟ್ಟೋಟದಲ್ಲಿ ಓಡಿದನು.

**13**. ಧುರಕ್ಕೆ (ಯುದ್ಧ) ಬೆನ್ನು ಹಾಕಿದರೆ ಪಾಪವು ಪ್ರಾಪ್ತಿಯಾಗುತ್ತದೆ.

**14**. ಅರ್ಜುನನು ಉತ್ತರಕುಮಾರನನ್ನು ನಾಡನರಿ ಎಂದು ಕರೆದಿದ್ದಾನೆ.

**15**. ಸುರರ ಸತಿಯರ ಸ್ಥಾನವನ್ನು ಅರಮನೆಯ ನಾರಿಯರು ತುಂಬುತ್ತಾರೆ.

**III ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**16.** ಉತ್ತರನು ಸಮುದ್ರದ ಹಾಗೆ ವಿಶಾಲವಾದ ಕುರು ಸೇನೆಯನ್ನು ಕಂಡು ಭಯಭೀತನಾಗುತ್ತಾನೆ. ಅದನ್ನು ನೋಡಿ ಅದ್ಭುತವಾದ ಭಯಂಕರವಾದ ಈ ಸೈನ್ಯದೊಡನೆ ನಾನು ಯುದ್ದ ಮಾಡಲಾರೆನು. ಶಿವನು ಮಾತ್ರ ಯುದ್ದ ಮಾಡಿ ಇವರನ್ನು ಗೆಲ್ಲಲು ಸಾಧ್ಯ ಎಂಬುದಾಗಿ ಈ ಶತ್ರು ಬಲಕ್ಕೆ ನಮೋ ಎನ್ನುತ್ತಾನೆ.

**17**. ಉತ್ತರಕುಮಾರನು ಭಯಂಕರವಾದ ಕೌರವ ಸೇನೆಯನ್ನು ಕಂಡು ಹೆದರಿದನು. ವೇಗವಾಗಿ ಹೋಗುತ್ತಿದ್ದ ರಥದಿಂದ ಮೆಲ್ಲನೆ ಎದ್ದು ಹಿಂದಿನಿಂದ ಧುಮುಕಿದನು. ನಂತರ ಬದುಕಿದೆ

ಎಂದು ಒಂದೇ ಸಮನೆ ಓಡಲು ಪ್ರಾರಂಭಿಸಿದನು. ಇದನ್ನು ಕಂಡು ಅರ್ಜುನನು ಒಡಲು ಒಡೆವಂತೆ ನಗಲು ಕಾರಣವಾಯಿತು.

**18**. ಉತ್ತರಕುಮಾರನು ಅರಮನೆಯಲ್ಲಿ ಹೆಂಗಳೆಯರ ಮುಂದೆ ಕೌರವ ಸೇನೆಯನ್ನು ಸುಲಭವಾಗಿ ಸೋಲಿಸಬಲ್ಲೆ ಎಂದು ನುಡಿದನು. ಆದರೆ ಯುದ್ಧ ಭೂಮಿಯಲ್ಲಿ ಕೌರವ ಸೇನೆಯನ್ನು ಕಂಡು ನಾಡನರಿಯ ಹಾಗೆ ಓಡಲು ಆರಂಭಿಸುತ್ತಾನೆ. ಆಗ ಅರ್ಜುನನು ಉತ್ತರನನ್ನು ತಡೆದು ಈ ಪಾಪ ಕಾರ್ಯ ನಡೆಯಲು ನಾನು ಬಿಡುವುದಿಲ್ಲ. ಕಾದು ನಡೆ ಎಂದು ಉತ್ತರನನ್ನು ಒತ್ತಾಯಿಸಿದನು.

**19.** ಕೌರವ ಸೈನ್ಯಕ್ಕೆ ಹೆದರಿದ ಉತ್ತರನು ಪಾಪ ಪ್ರಾಯಶ್ಚಿತ್ತಕ್ಕಾಗಿ ಭೂಸುರರು ಅಶ್ವಮೇಧ ಯಾಗವನ್ನು ಭೂಮಿಯಲ್ಲಿಯೇ ಮಾಡುವುದನ್ನು ಪ್ರತ್ಯಕ್ಷವಾಗಿಯೇ ನೋಡಬಹುದು. ಸುರರ ಸತಿಯರನ್ನು ನಮ್ಮ ಅರಮನೆಯ ನಾರಿಯರಲ್ಲೇ ಕಾಣಬಹುದು. ಇಂದ್ರ ಪದವಿಗಿಂತ ಅರಮನೆಯ ಪದವಿಯೇ ಸಾಕು ಎಂದು ಸಮರ್ಥಿಸಿದನು.

**IV ಕವಿಗಳ/ ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯುವುದು.**

ಜನ್ಮಸ್ಥಳ, ಕಾಲ 1 ಅಂಕ

ಕೃತಿಗಳು, ಬಿರುದು/ಪ್ರಶಸ್ತಿಗಳು 1 ಅಂಕ

ವಾಕ್ಯ ರೂಪದಲ್ಲಿ ಬರೆಯುವುದು ಮತ್ತು ಭಾಷಾ ಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

**20. ಕುಮಾರವ್ಯಾಸ:** ಕುಮಾರವ್ಯಾಸರು ಗದುಗಿನ ಕೋಳಿವಾಡ ಎಂಬಲ್ಲಿ 1430 ರಲ್ಲಿ ಜನಿಸಿದರು. ಇವರು 'ಕರ್ಣಾಟ ಭಾರತ ಕಥಾಮಂಜರಿ' ಅಥವಾ ' ಗದುಗಿನ ಭಾರತ' ಎಂಬ ಶ್ರೇಷ್ಠ ಕಾವ್ಯವನ್ನು ಬರೆದಿದ್ದಾರೆ. 'ಐರಾವತ' ಕೃತಿಯು ಇವರದು ಎಂದು ಹೇಳಲಾಗಿದೆ. ವ್ಯಾಸರು ಸಂಸ್ಕೃತದಲ್ಲಿ ರಚಿಸಿರುವ 'ಮಹಾಭಾರತ'ವನ್ನು ನಾರಾಣಪ್ಪನವರು ಕನ್ನಡದಲ್ಲಿ ಬರೆದವರಾದುದರಿಂದ ಕುಮಾರವ್ಯಾಸ ಎಂಬ ಅಭಿದಾನವನ್ನು ಹೊಂದಿದ್ದಾರೆ. ಇವರು 'ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದನ್ನು ಪಡೆದಿದ್ದಾರೆ.

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1 ಅಂಕ

ಸಂದರ್ಭದ ವಿವರಣೆ 1 ಅಂಕ

ಸ್ವಾರಸ್ಯ ಮತ್ತು ಶೈಲಿ ಪದಬಂಧಗಳಿಗೆ 1 ಅಂಕ

**ಒಟ್ಟು 3 ಅಂಕಗಳು**

**21. “ಶಿವಶಿವ ಕಾದಿಗೆಲಿದೆವು”.**

**ಆಯ್ಕೆ:** ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ “ಕರ್ಣಾಟ ಭಾರತ ಕಥಾಮಂಜರಿ” ಎಂಬ ಮಹಾಕಾವ್ಯದಿಂದ ಆಯ್ದ “ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ” ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ವಿರಾಟ ರಾಜನು ಮಗನಾದ ಉತ್ತರಕುಮಾರನು ಬೃಹನ್ನಳೆ ವೇಷಧಾರಿ ಅರ್ಜುನನಿಗೆ ಹೇಳಿದನು. ಕೌರವರ ಭಯಂಕರ ಸೇನೆಯನ್ನು ಕಂಡು ಹೆದರಿ ರಣರಂಗದಿಂದ ಉತ್ತರಕುಮಾರನು ಓಡಲು ತೊಡಗಿದಾಗ ಬೃಹನ್ನಳೆ ವೇಷ ಧರಿಸಿದ್ದ ಅರ್ಜುನನು ತಡೆದು, ಯುದ್ಧ ಭೂಮಿಯಿಂದ ಓಡುವುದು ಪಾಪವೆಂದು ಹೇಳಿದಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ :** ಉತ್ತರಕುಮಾರನು ಪೌರುಷ ಕೇವಲ ಹೆಂಗಳೆಯರ ಮುಂದೆ ಎನ್ನುವ ಗುಣವಿಶೇಷತೆಯನ್ನು ಇಲ್ಲಿ ಕಾಣಬಹುದು.

**22. “ನಿಟ್ಟೋಟದಲ್ಲಿ ಹಾಯ್ದನು ಬಿಟ್ಟಮಂಡೆಯಲಿ”.**

**ಆಯ್ಕೆ:** ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ “ಕರ್ಣಾಟ ಭಾರತ ಕಥಾಮಂಜರಿ” ಎಂಬ ಮಹಾಕಾವ್ಯದಿಂದ ಆಯ್ದ “ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ” ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಕವಿ ಉತ್ತರಕುಮಾರನ ಬಗ್ಗೆ ಹೇಳುತ್ತಾನೆ. ಕೌರವ ಸೇನೆಯನ್ನು ಕಂಡು ಹೆದರಿದ ಉತ್ತರನು ಕೌರವ ಸೇನೆಯೊಡನೆ ಯುದ್ಧ ಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ನಿಧಾನವಾಗಿ ರಥದ ಹಿಂದಿನಿಂದ ಧುಮುಕಿ ಬದುಕಿದೆ ಎಂದು ಕೆದರಿದ ತಲೆಯಲ್ಲಿಯೇ ಒಂದೆ ಸಮನೆ ಓಡಲು ಪ್ರಾರಂಭಿಸಿದನು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಉತ್ತರಕುಮಾರನು ಕೌರವರ ಸೇನೆಯನ್ನು ನೋಡಿ ರಥದಿಂದ ಧುಮುಕಿ ಓಡುವುದು ಇಲ್ಲಿನ ಸ್ವಾರಸ್ಯವಾಗಿದೆ.

**23. “ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ” .**

**ಆಯ್ಕೆ:** ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ “ಕರ್ಣಾಟ ಭಾರತ ಕಥಾಮಂಜರಿ” ಎಂಬ ಮಹಾಕಾವ್ಯದಿಂದ ಆಯ್ದ “ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ” ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಅರ್ಜುನ ಉತ್ತರನಿಗೆ ಹೇಳಿದನು. ಉತ್ತರನು ಹೆಂಗಳೆಯರ ಮುಂದೆ ಕೌರವ ಸೇನೆಯನ್ನು ಸುಲಭವಾಗಿ ಹೆದರಿಸಬಹುದೆಂದು ಬಾಯ್ಗೆ ಬಂದಂತೆ ಮಾತನಾಡಿದನು.

ಆದರೆ ಯುದ್ಧರಂಗದಲ್ಲಿ ಕೌರವಸೇನೆಯನ್ನು ಕಂಡು ಹೆದರಿ ಓಡಲು ಪ್ರಾರಂಭಮಾಡಿದನು. ಆಗ ಅರ್ಜುನನು ಉತ್ತರನನ್ನು ತಡೆದು ನಾಡನರಿಯಂತೆ ಓಡಿ ಹೋಗಲು ಬಿಡುವುದಿಲ್ಲ. " ಕಾದುನಡೆ" ಎಂದು ಅರ್ಜುನನು ಉತ್ತರನಿಗೆ ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಅರ್ಜುನನು ಉತ್ತರಕುಮಾರನನ್ನು ಕುರಿತು ಹೇಳುವ ಶೌರ್ಯದ ಮಾತುಗಳು ಇಲ್ಲಿ ಸ್ವಾರಸ್ಯವಾಗಿದೆ.

**24. "ಎಮ್ಮರಮನೆಯ ನಾರಿಯರೆ ಸಾಕು".**

**ಆಯ್ಕೆ:** ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ "ಕರ್ಣಾಟ ಭಾರತ ಕಥಾಮಂಜರಿ" ಎಂಬ ಮಹಾಕಾವ್ಯದಿಂದ ಆಯ್ದ "ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ" ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ಉತ್ತರನು ಅರ್ಜುನನಿಗೆ ಹೇಳಿದನು. ಕೌರವ ಸೇನೆಗೆ ಹೆದರಿ ಓಡಿ ಹೋಗುತ್ತಿದ್ದ ಉತ್ತರನಿಗೆ ಅರ್ಜುನನು ಈ ರೀತಿ ಯುದ್ಧರಂಗದಿಂದ ಓಡಿ ಹೋದರೆ ಪಾಪ ಸುತ್ತಿಕೊಳ್ಳುವುದೆಂದು ಹೇಳಿದಾಗ ಉತ್ತರನು, ನನಗೆ ಯುದ್ಧದಲ್ಲಿ ಸತ್ತು ವೀರ ಸ್ವರ್ಗ ಸೇರುವುದು ಬೇಡ, ಇಂದ್ರ ಪದವಿಯೂ ಬೇಡ, ಸುರರ ಸತಿಯರು ಬೇಡ, ನನಗೆ ನಮ್ಮ ಅರಮನೆಯ ನಾರಿಯರೆ ಸಾಕು ಎಂದು ಹೇಳುವಾಗ ಈ ಮಾತು ಬಂದಿದೆ.

**ಸ್ವಾರಸ್ಯ :** ಉತ್ತರಕುಮಾರನು ಕೌರವರ ಭಯಂಕರ ಸೇನೆಯನ್ನು ನೋಡಿದ ನಂತರ ಆಡುವ ಮಾತುಗಳು ಇಲ್ಲಿ ಸ್ವಾರಸ್ಯವಾಗಿದೆ.

**VI. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು:**

ಅಲಂಕಾರವನ್ನು ಹೆಸರಿಸುವುದು 1ಅಂಕ

ಲಕ್ಷಣ ಬರೆಯುವುದು 1 ಅಂಕ

ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು 1 ಅಂಕ

**ಒಟ್ಟು 3 ಅಂಕಗಳು**

**25. "ಕೌರವನ ಸೇನೆಯು ಸಾಗರದಂತೆ ವಿಶಾಲವಾಗಿದೆ".**

**ಅಲಂಕಾರ :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ

**ಉಪಮೇಯ** : ಕೌರವ ಸೇನೆ

**ಉಪಮಾನ**: ಸಾಗರ

**ವಾಚಕಪದ** : ಅಂತೆ

**ಸಮಾನ ಧರ್ಮ**: ವಿಶಾಲತೆ

**ಸಮನ್ವಯ** : ಉಪಮೇಯವಾದ ಕೌರವ ಸೇನೆಯನ್ನು ಉಪಮಾನವಾದ ವಿಶಾಲವಾದ ಸಾಗರಕ್ಕೆ ಹೋಲಿಸಿ ವರ್ಣಿಸಲಾಗಿದೆ.

**26. "ವನಜಮುಖಿ".**

**ಅಲಂಕಾರ :** ರೂಪಕಾಲಂಕಾರ

**ಲಕ್ಷಣ :** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡು ಒಂದೇ ಎಂದು

ವರ್ಣಿಸಿದರೆ ಅದು ರೂಪಕಲಂಕಾರ.

**ಉಪಮೇಯ** : ಮುಖಿ

**ಉಪಮಾನ**: ವನಜ

**ಸಮನ್ವಯ** : ಇಲ್ಲಿ ವನಜ ಮತ್ತು ಮುಖಿ ಎರಡೂ ಒಂದೇ ಎಂದು ಹೋಲಿಸಲಾಗಿದೆ. ಇವೆರಡು ಬೇರೆ ಬೇರೆ ಎಂದು ಹೇಳಲಾಗಿಲ್ಲ. ಆದ್ದರಿಂದ ಇದು ರೂಪಕ ಅಲಂಕಾರವಾಗಿದೆ.

**27. "ನಾಡನರಿ".**

**ಅಲಂಕಾರ :** ರೂಪಕಾಲಂಕಾರ

**ಲಕ್ಷಣ :** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡು ಒಂದೇ ಎಂದು

ವರ್ಣಿಸಿದರೆ ಅದು ರೂಪಕಾಲಂಕಾರ.

**ಉಪಮೇಯ** : ನಾಡ

**ಉಪಮಾನ**: ನರಿ

**ಸಮನ್ವಯ** : ಇಲ್ಲಿ ನಾಡು ಮತ್ತು ನರಿ ಎರಡೂ ಒಂದೇ ಎಂದು ಹೋಲಿಸಲಾಗಿದೆ. ಇವೆರಡು ಬೇರೆ

ಬೇರೆ ಎಂದು ಹೇಳಲಾಗಿಲ್ಲ. ಆದ್ದರಿಂದ ಇದು ರೂಪಕ ಅಲಂಕಾರವಾಗಿದೆ.

**28. "ಬಲಗಡಲು".**

**ಅಲಂಕಾರ :** ರೂಪಕಾಲಂಕಾರ

**ಲಕ್ಷಣ :** ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡು ಒಂದೇ ಎಂದು

ವರ್ಣಿಸಿದರೆ ಅದು ರೂಪಕಾಲಂಕಾರ.

**ಉಪಮೇಯ** : ಬಲ

**ಉಪಮಾನ**: ಕಡಲು

**ಸಮನ್ವಯ** : ಇಲ್ಲಿ  ಬಲ(ಸೈನ್ಯ) ಮತ್ತು ಕಡಲು(ಸಾಗರ) ಎರಡೂ ಒಂದೇ ಎಂದು ಹೋಲಿಸಲಾಗಿದೆ. ಇವೆರಡು ಬೇರೆ ಬೇರೆ ಎಂದು ಹೇಳಲಾಗಿಲ್ಲ. ಆದ್ದರಿಂದ ಇದು ರೂಪಕಾಲಂಕಾರವಾಗಿದೆ.

**VII ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

**29.** ಕಡೆಗೆ ಹಾಯವು ಕಂಗಳೀ ಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ
ಪೊಡವಿಯೀದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ.

**ಅಥವಾ**

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ.

**VIII ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**30**. ಪಾಂಡವರನ್ನು ಹುಡುಕುವ ಉದ್ದೇಶದಿಂದ ಕೌರವರು ವಿರಾಟ ರಾಜನ ಗೋವುಗಳನ್ನು ಅಪಹರಿಸುತ್ತಾನೆ. ಉತ್ತರಕುಮಾರನ ಸಾರಥಿಯಾಗಿ ಅರ್ಜುನನು ಬೃಹನ್ನಳೆಯ ವೇಷದಲ್ಲಿ ರಣರಂಗಕ್ಕೆ ಬಂದಾಗ ಕೌರವರ ಭಯಂಕರ ಸೈನ್ಯವನ್ನು ಕಂಡು ಶಿವನಿಂದ ಮಾತ್ರ ಈ ಸೇನೆಯನ್ನು ಗೆಲ್ಲುವುದಕ್ಕೆ ಸಾಧ್ಯ. ತನ್ನಿಂದಾಗದು ಎಂದು ಉತ್ತರನು ಹೋಗುತ್ತಿರುವ ರಥದ ಹಿಂಬದಿಯಿಂದ ಧುಮುಕಿ ಬೆನ್ನು ತಿರುಗಿಸಿ ಬಿಟ್ಟ ಮಂಡೆಯಲಿ ಓಡುತ್ತಾನೆ. ಆಗ ಅರ್ಜುನ ಅವನನ್ನು ತಡೆದು ಅರಮನೆಯಲ್ಲಿ ಹೆಂಗಳೆಯರ ಮುಂದೆ ಜಂಭ ಕೊಚ್ಚಿದ ಪ್ರಸಂಗವನ್ನು ನೆನಪಿಸುತ್ತಾನೆ. ಆದರೆ ಉತ್ತರಕುಮಾರನು ತನಗೆ ತನ್ನ ಅರಮನೆಯ ಸೌಖ್ಯವೇ ಸಾಕು. ಎಂದು ಉತ್ತರಿಸುತ್ತಾನೆ. ಇಂದ್ರ ಪದವಿಯು ಬೇಡ, ಅಪ್ಸರೆಯರು ಬೇಡ, ನನಗೆ ನಮ್ಮ ಅರಮನೆಯ ಸ್ತ್ರೀಯರೆ ಸಾಕು, ನನ್ನ ಜೀವ ಉಳಿದರೆ ಅಷ್ಟೆ ಸಾಕೆಂದು ಓಡುತ್ತಾನೆ. ಆಗ ಅರ್ಜುನನು ಉತ್ತರನಿಗೆ ಅಂಜುಬುರುಕ ನಾಡನರಿಯ ಹಾಗೆ ಓಡುವುದು ಸರಿಯಲ್ಲ ಕಾದು ನಡೆ ಎಂದನು.

ಆತನ ಮಾತನ್ನು ಉತ್ತರನು ಕೇಳದೆ ಪ್ರಾಣಭಯದಿಂದ ಅಲ್ಲಿಂದ ಪಾರಾಗಲು ಬಯಸಿದನು. ಇದು ಅರ್ಜುನ ಮತ್ತು ಉತ್ತರಕುಮಾರನ ಸಂಭಾಷಣೆ ಆಗಿದೆ.

**31**. ಅರ್ಜುನನ ಧೈರ್ಯ, ಪರಾಕ್ರಮ, ವೀರತನದ ಸಂಕೇತವಾದರೆ ಉತ್ತರನು ಹೇಡಿತನ, ಜಂಭದ ಪ್ರತೀಕವಾಗಿದ್ದಾನೆ. ನಗೆಪಾಟಲಿಗೆ ಗುರಿಯಾಗುವ ಉತ್ತರನಂತಹ ಬದುಕು ಬೇಡ, ಅರ್ಜುನನ ಹಾಗೆ ಧಿಮಂತರಾಗಬೇಕು ಎಂಬ ಸಂದೇಶವು ಇವರ ಗುಣ-ಸ್ವಭಾವಗಳಲ್ಲಿ ಅಡಗಿದೆ. ಅರಮನೆಯಲ್ಲಿ ಹೆಂಗಳೆಯರ ಮುಂದೆ ಜಂಭ ಕೊಚ್ಚಿಕೊಂಡ ಉತ್ತರಕುಮಾರ ಸೈನ್ಯವನ್ನು ನೋಡಿ ಭಯದಿಂದ ಬಿಟ್ಟ ಮಂಡೆಯಲಿ ಓಡುತ್ತಾನೆ. ಇವನನ್ನು ನೋಡಿ ಎಲ್ಲರೂ ನಗುತ್ತಾರೆ. ನನಗೆ ಇಂದ್ರ ಪದವಿಯು ಬೇಡ, ಅಪ್ಸರೆಯರು ಬೇಡ, ನನಗೆ ನಮ್ಮ ಅರಮನೆಯ ಸ್ತ್ರೀಯರೆ ಸಾಕು, ನನ್ನ ಜೀವ ಉಳಿದರೆ ಅಷ್ಟೇ ಸಾಕೆಂದು ಓಡತೊಡಗಿದನು. ಅವನ ಈ ನಡವಳಿಕೆ ಎಲ್ಲರಿಗೂ ನಗುವನ್ನು ತರಿಸುತ್ತದೆ. ಆದರೆ ಅರ್ಜುನ ಶೌರ್ಯದ ಪ್ರತೀಕವಾಗಿದ್ದಾನೆ. ತನ್ನ ಪರಾಕ್ರಮದಿಂದ ಕೌರವ ಸೇನೆಯೋಡನೆ ಹೋರಾಡಿ, ವಿಕ್ರಮನನ್ನು ಪಡೆದು ವಿಜಯಶಾಲಿಯಾದುದು ಅವನ ಭುಜಬಲ ಪರಾಕ್ರಮಕ್ಕೆ ಕನ್ನಡಿಯಾಗಿದೆ. ಇದಕ್ಕಾಗಿಯೇ ಎಲ್ಲರೂ ಬಯಸುವುದು ಅರ್ಜುನನಂತಹ ಮಗನನ್ನು, ಆದರೆ ಉತ್ತರಕುಮಾರನಂತಹ ಮಗನನ್ನುಯಾರೂ ಬಯಸುವುದಿಲ್ಲ.

**ಪೂರಕ ಓದು – 1. ಕಳ್ಳರ ಗುರು**

**:ಮಾದರಿ ಉತ್ತರಗಳು:**

**I ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ (ಉತ್ತರದ ಅಂಶಗಳನ್ನು ಆಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**1.** ವೈದ್ಯರು ಮಗುವಿನ ನಾಡಿಯನ್ನು ಹಿಡಿದು ನೋಡಿದರು. ಜ್ವರದ ರೀತಿಯಲ್ಲಿ ಪರೀಕ್ಷಿಸಿ ಗುರುತಿಸಿದರು. ಔಷಧಿ ಮಾತ್ರೆಯನ್ನು ಮಗುವಿಗೆ ಕುಡಿಸಿದರು. ವೈದ್ಯರಿಗೆ ಭೀಮನಾಯಕನು ಮಗುವಿನ ಪ್ರಾಣ ರಕ್ಷಿಸಲು ಒಂದು ಸೊಪ್ಪು ಬೇಕಾಯಿತು. ವೈದ್ಯರು ಕಷ್ಟದಿಂದ ಸೊಪ್ಪನ್ನು ಹುಡುಕಲು ಹೋದರು. ಸೊಪ್ಪು ಕಣ್ಣಿಗೆ ಕಂಡಾಗ ಚಿಕ್ಕ ಮಕ್ಕಳಂತೆ ಕುಣಿದಾಡಿದರು. ಸೊಪ್ಪಿನ ರಸದೊಂದಿಗೆ ಮತ್ತೊಂದು ಸಲ ಔಷಧಿಯನ್ನು ಕುಡಿಸಿದರು. ಒಂದು ಲೇಹ್ಯವನ್ನು ಹಣೆಯ ತುಂಬಾ ಬಳಿದರು. ಹೀಗೆ ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದರು.

**2**. ಕಳ್ಳರು ರಾತ್ರಿಯ ಸಮಯದಲ್ಲಿ ವೈದ್ಯರ ಮನೆಗೆ ಬಂದು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಬೇಕೆಂದು ಕೇಳಿಕೊಂಡರು. ವೈದ್ಯರು ತಮ್ಮ ಪ್ರಾಣವನ್ನು ಲೆಕ್ಕಿಸದೆ

ರಾತ್ರಿಯಲ್ಲಿ ಕಾಡನ್ನೆಲ್ಲಾ ಅಲೆದು ಯಾವುದೋ ಸೊಪ್ಪನ್ನು ಹುಡುಕಿ ತಂದು, ರಸ ಮಾಡಿ ಕುಡಿಸಿ ಮಗುವನ್ನು ಪ್ರಾಣಾಪಾಯದಿಂದ ಕಾಪಾಡಿದರು. ಇದನ್ನು ಕಂಡು ಕೃತಜ್ಞತಾ ಭಾವದಿಂದ ಕಳ್ಳರು ವೈದ್ಯರ ಮನೆಯಲ್ಲಿ ಕದ್ದ ವಸ್ತುಗಳನ್ನೆಲ್ಲಾ ಮರಳಿ ತಂದು ಒಪ್ಪಿಸಿದರು.

**3**. ನಾನು ವೈದ್ಯರ ಮನೆಯಲ್ಲಿ ಕಳ್ಳತನ ಮಾಡಿದ್ದರೂ ಅವೆಲ್ಲವನ್ನು ಲೆಕ್ಕಿಸದೆ ನನ್ನ ಮಗನ ಜೀವ ಉಳಿಸಿದ್ದಾರೆ. ಅವರೇ ನಮ್ಮ ಪಾಲಿನ ದೇವರು, ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ ಎಂದು ತಿಳಿದು ಕಳ್ಳರ ಗುರುವಾದ ಭೀಮನಾಯಕನ ಮನಃಪರಿವರ್ತನೆಯಾಯಿತು.

**4.** ವೈದ್ಯನು ತಾನು ವೈದ್ಯನಾಗಿ ಹಣವನ್ನು ಗಳಿಸುವುದೇ ಮುಖ್ಯ ಆಂಶವಾಗದೆ ಆತ ಸಮಾಜ ಸೇವೆಯನ್ನು ಸಲ್ಲಿಸುತ್ತಿದ್ದನು. ಸಮಾಜದ ಸೇವೆಗಾಗಿಯೇ ವೈದ್ಯಕೀಯ ವೃತ್ತಿ ಇರುವುದು ಎಂಬುದನ್ನು ಅರಿತ ವೈದ್ಯನು ತನ್ನ ಮನೆಯಲ್ಲಿ ಕಳ್ಳತನ ಮಾಡಿದವನು ಭೀಮನಾಯಕನೇ ಎಂದು ಅರಿತಿದ್ದರೂ, ಆತನ ಮಗನಿಗೆ ಹುಷಾರಿಲ್ಲದ ವಿಷಯವನ್ನು ತಿಳಿದು ಚಿಕಿತ್ಸೆ ನೀಡಿ ಗುಣಪಡಿಸುತ್ತಾರೆ. ಇದೇ ರೀತಿ ಮನುಷ್ಯನು ಯಾವುದೇ ಕೆಲಸವನ್ನು ಮಾಡಬೇಕಾದರೂ ತಮ್ಮ ಮನಸ್ಸು ಮೆಚ್ಚುವಂತೆ ಮಾಡಬೇಕು. ಅಲ್ಲದೆ ನಮ್ಮ ಶತ್ರುವು ನಿಸ್ಸಹಾಯಕ ಪರಿಸ್ಥಿತಿಯಲ್ಲಿದ್ದಾಗ ಆ ಸಮಯವನ್ನು ದುರುಪಯೋಗ ಮಾಡಿಕೊಳ್ಳದೆ ಸಹಾಯವನ್ನು ಮಾಡಬೇಕೆಂಬುದು 'ಕಳ್ಳರ ಗುರು ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರವಾಗಿದೆ.

**5.** "ಈ ವೈದ್ಯ ವೃತ್ತಿ ದುಡ್ಡು ಗಳಿಸಬೇಕಾದುದಲ್ಲ! ಕೇವಲ ಸಮಾಜದ ಕ್ಷೇಮಸಾಧನೆಗಾಗಿ ಇರುವುದು. ಸಮಾಜದಿಂದ ನಮಗೆ ಬದುಕಿರುವ ಮಟ್ಟಿಗೆ ಏನಾದರೂ ದೊರೆತರೆ ಸಾಕು" ಎಂದು ವೈದ್ಯರು ತನ್ನ ವೃತ್ತಿಯ ಬಗ್ಗೆ ಹೆಂಡತಿ ರತ್ನಳಿಗೆ ಹೇಳಿದರು.

**6**. ಭೀಮನಾಯಕನು ವೈದ್ಯರ ಕಾಲ ಮೇಲೆ ಬಿದ್ದು ಹೇಳಿದ ' ಆ ಕಾಣದ ದೇವರು ಇದ್ದಾನೋ, ಇಲ್ಲವೋ! ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು. ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ! ಎಂದು ಕೃತಜ್ಞತೆಯನ್ನು ತಿಳಿಸಿದನು.

**7.** ವೈದ್ಯರು ಭೀಮನಾಯಕನನ್ನು ಕುರಿತು ನೋಡು ಭೀಮಣ್ಣ ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ ಕಾಯುವ ಕೆಲಸಕ್ಕಾಗಿ ಮನಮುಟ್ಟಿ ದುಡಿಯುವವರಿಗೆ ದೇವರ ಸಹಾಯ ಇದ್ದೇ ಇರುತ್ತದೆ ಎಂಬ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು.

**8**. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂದುರಿಗಿಸಿ 'ದೇವರ ಒಡವೆಗಳನ್ನು ದೇವರಿಗೆ ಒಪ್ಪಿಸಲು ಬಂದಿದ್ದೇನೆ. ನನ್ನನ್ನು ಕ್ಷಮಿಸಿ'. ದಯವಿಟ್ಟು ಎಲ್ಲವನ್ನೂ ಒಪ್ಪಿಸಿಕೊಳ್ಳಬೇಕು ಎಂದು ಹೇಳಿದನು.

## ಪೂರಕ ಓದು – 2. ಹೊಂಗೆ-ಬೇವುಗಳ ಹಾಡು

**: ಮಾದರಿ ಉತ್ತರಗಳು:**

**1.** ಬದುಕ ಬದುವ ಬೇಲಿಯಲ್ಲಿ ಅರಳಿದ ಹೂವಿದೆ. ಮಲಗಿದ ಮಲ್ಲಿಗೆಯಂತೆ ರೂಪು ಇದೆ. ತಾಯಿಯಂತೆ ನೆರಳು ಇದೆ. ಕರುಳಿನಂತೆ ಮಡಿಲು ಇದೆ.

**2**. ಹೊಳೆಯ ದಂಡೆಯ ಸಾಲಿನಲ್ಲಿ ಅನೇಕ ರಾಜ್ಯಗಳು ಹುಟ್ಟಿವೆ. ಅನೇಕ ರಾಜ್ಯಗಳು ನಾಶವಾಗಿವೆ. ಅನೇಕ ಶತಮಾನಗಳಿಂದ ನೇಗಿಲುಯೋಗಿ ಸಾಗಿ ಸಾಗಿ ವ್ಯವಸಾಯ ಮಾಡುತ್ತಲೇ ಬಂದಿದ್ದಾನೆ. ಅದೇ ಸಂತೆಗಳು ಅದೇ ಜಾತ್ರೆಗಳು ನಡೆಯುತ್ತಿವೆ. ಗೊಬ್ಬರದ ಹಾಡುಗಳು ಹೊಮ್ಮಿದೆ ಎಂಬ ನೆನಪುಗಳಿವೆ.

**3**. ಈ ಲೋಕವು ಬಣ್ಣ ಬಣ್ಣ ಚಿಟ್ಟೆಗಳಿಂದ ಕೂಡಿದೆ. ಹಾರುವ ಭೃಂಗದ ಸಂಗೀತ ಕೇಳಿ ಬರುತ್ತದೆ. ಕೆಳಗೆ ಹೊರಗೆ, ಜೀವ ಹೂವ ಹಾಸಿಗೆಯ ಘಮ ಘಮಿಸುವ ಗಮಲಿನಲ್ಲಿ ಇಲ್ಲೇ ಎಲ್ಲೋ ಅಡಗಿ ನಾಳೆ ಎಂಬ ಖುಷಿಯಿದೆ ಎಂದು ಕವಯಿತ್ರಿ ಹೇಳಿದ್ದಾರೆ.

**4**. ತೆಂಗು ತಾರೆಗಳ ನಾಡಿನಲ್ಲಿ ಬೆವರ ಹನಿಯ ಸಾಲೆಯಲ್ಲಿ ಜೀವ ಅಮೃತವಡಗಿದೆ. ಜೀವವನ್ನು ಹಿಂಡಿ, ಒಡಲನ್ನು ಹಿಂಡಿ, ತೈಲಧಾರೆಯು ಹೊಮ್ಮಿ ಬರಲಿ ಹೊಂಗೆ, ಹಿಪ್ಪೆ, ಮೇಳ ನಡೆಯಲಿ ನಾಳೆ ಎಂಬ ಚಪ್ಪರದ ಕೆಳಗೆ ಮನುಕುಲದ ಭವ್ಯ ಬದುಕ ಮೊಳಕೆಯ ಒಡೆಯಲಿ, ಭವ್ಯವಾದ ಬದುಕು ಅರಳಲಿ ಎಂದು ಕವಯಿತ್ರಿ ಹೇಳಿದ್ದಾರೆ.

**5.** ನೆತ್ತಿ ಮೇಲೆ ಸೂರು, ಮೇಲೆ ಮೇಲೆ ರವಿಯ ಕಣ್ಣು ತೆಂಗು, ಹೊಂಗೆ, ಹಿಪ್ಪೆ, ಬೇವು ಜೀವಜಾಲ ನೇದಿವೆ, ಬದುಕ ಬಂಡಿ ಉರುಳುತಲಿದೆ, ತೈಲವಿದೆ, ಬತ್ತಿಯಿದೆ, ಬದುಕು ಬಂಗಾರವಿದೆ. ಅರಳಿದ ಕೈಯ ಕಮಲದಲ್ಲಿ ನಾಳಿನ ಚಿನ್ನದಂಥ ಬೆಳಕಿದೆ ಎಂದು ಕವಯಿತ್ರಿ ಹೇಳಿದ್ದಾರೆ.

## ಪೂರಕ ಓದು – 3. ಕನ್ನಡ ನಾಡು- ನುಡಿ ಜನ

## : ಮಾದರಿ ಉತ್ತರಗಳು:

**1**. ಶ್ರೀ ವಿಜಯ ಕವಿಯು ಕನ್ನಡ ನಾಡಿನ ವಿಸ್ತಾರವನ್ನು ಎರಡು ನದಿಗಳ ಮೂಲಕ ತಿಳಿಸುತ್ತಾರೆ. ಕನ್ನಡ ನಾಡು ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ವಿಸ್ತಾರವಾಗಿ ಹರಡಿಕೊಂಡಿರುವ ನಾಡಾಗಿದೆ ಎಂದು ಹೇಳಿದ್ದಾರೆ.

**2**. ಕನ್ನಡ ಮಾತಾಡುವ ಪ್ರದೇಶಗಳಲ್ಲಿ ತಿರುಳ್ಕನ್ನಡ ನಾಡನ್ನು ಗುರುತಿಸುವ ಪ್ರಯತ್ನ ಒಂಭತ್ತನೇ ಶತಮಾನದಲ್ಲಿ ನಡೆದಿದೆ. ಈಗಿನ ಪಟ್ಟದಕಲ್ಲು, ಕೊಪ್ಪಳ,ಲಕ್ಷ್ಮೇಶ್ವರ, ಒಕ್ಕುಂದ ಈ ಪ್ರದೇಶಗಳ ನಡುವೆ ಇರುವ ನಾಡೇ ತಿರುಳ್ಕನ್ನಡದ ನಾಡಾಗಿದೆ.

**3**. ಕನ್ನಡಿಗರು ಹದವರಿತು ಹೇಳುವವರು. ಹೇಳಿದುದನ್ನು ತಿಳಿದು ಶೋಧಿಸಬಲ್ಲವರೂ ಆಗಿದ್ದಾರೆ. ಅವರು ತುಂಬಾ ಚತುರರೂ ಆಗಿದ್ದಾರೆ. ಉದ್ದೇಶಪೂರ್ವಕವಾಗಿ ಏನನ್ನೂ ಓದದಿದ್ದರೂ ಕಾವ್ಯ ಪ್ರಯೋಗ ಮಾಡುವಷ್ಟು ಪರಿಣಿತ ಬುದ್ದಿ ಇರುವಂಥವರು ಎಂದು ಕವಿ ವರ್ಣಿಸಿದ್ದಾರೆ.

## ಪೂರಕ ಓದು – 4. ಪಂಪಾ ತೀರದ ಪುಷ್ಪಗಳು

## :ಮಾದರಿ ಉತ್ತರಗಳು:

**1**. ಮಾನವೀಯ ಸಂಸ್ಕೃತಿಯಲ್ಲಿ ಹೂವು ಕಾವ್ಯ, ಕಲೆ, ರಸಿಕತೆ, ಸಂಪ್ರದಾಯ ಮುಗ್ಧತೆ, ಮಧುರತೆ, ಸೌಂದರ್ಯ, ಪಾಂಡಿತ್ಯ, ಭಕ್ತಿ,ಶ್ರದ್ಧೆ, ಪ್ರೀತಿ, ಶಾಂತಿಗಳಿಗೆ ಪ್ರತೀಕವಾಗಿದೆ.

**2**. ಒಂದು ಕಾಳರಾತ್ರಿಯಲ್ಲಿ ಶಿಷ್ಯನು ಗುರುದರ್ಶನಕ್ಕಾಗಿ ಬರುವಾಗ ಗುರು ಹೊಳೆಯ ಆಚೆಗೆ ಮರದಡಿಯಲ್ಲಿ ಕುಳಿತಿದ್ದರು. ಆಗ ಭಕ್ತಿಪರವಶನಾದ ಆ ಶಿಷ್ಯ ಗುರುವಿದ್ದೆಡೆಗೆ ಆ ನೀರಿನಲ್ಲಿಯೇ ನಡೆದು ಹೋಗಲು ಹೊರಟ. ಅವನ ಶ್ರದ್ಧೆ ಅಷ್ಟು ಶ್ರೇಷ್ಟ. ಅವನು ಹೆಜ್ಜೆಯಿಟ್ಟಲ್ಲಿ ಇಡುವಲ್ಲಿ ಕೆಳಗೊಂದು ಬಲಿಷ್ಠ ತಾವರೆ ಅರಳಿ ನಿಂತಿತಂತೆ. ಆ ತಾವರೆಗಳ ಮೇಲೆ ಹೆಜ್ಜೆ ಇಡುತ್ತಾ ಗುರುಗಳನ್ನು ತಲುಪಿದ್ದರಿಂದ ಶಿಷ್ಯನು ಶುದ್ಧಪಾದಾಚಾರ್ಯನೆಂದು ವಿಖ್ಯಾತನಾದನು.

**3.** ವಾಲ್ಮೀಕಿಯು ಹೂಗಳು ಅತ್ಯಂತ ಹೃದಯಂಗಮವಾಗಿವೆ. ಅಪೂರ್ವ ಸಂದೇಶವನ್ನು ಸದ್ದಿಲ್ಲದೆ ಸಹಜವಾಗಿ ಸಾರುತ್ತದೆ. ಚೆಲುವಿನ ನಗೆ, ಒಲವಿನ ಕಂಬನಿ, ಹೂ ಆಗಿ ಅರಳಿದೆ ಎಂದಿದ್ದಾರೆ.

**4**. ಗುರು ಸೇವೆ, ತಪಾಚರಣೆ, ಆದರ್ಶ ಸಾಧನೆಯಲ್ಲಿ ನಿರಂತರ ನಿರ್ಮಲ ಚಿತ್ತದ ನಿರಪೇಕ್ಷ ಶ್ರಮದಿಂದ ಹೊರಟ ಬೆವರ ಹನಿಗಳಿಂದ ಹುಟ್ಟಿದ ಪುಷ್ಪಗಳು ಪಂಪಾ ತೀರದ ಪುಷ್ಪಗಳಾಗಿವೆ.